ಸಂಪುಟ: 06 ಸಂಚಿಕೆ: 213 ಪುಟಗಳು: 08 ಭಾನುವಾರ 18 ಅಕ್ಟೋಬರ್ 2026 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ



ಯಾ ದೇವಿ ಸರ್ವ ಭೂತೇಷು
ಮಾಹಾಗೌರಿ ರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ
ನಮಸ್ತಸ್ಯೈ ನಮೋ ನಮಃ

## ನಮ್ಮ ನಾಯಕರನ್ನು ಭೇಟಿಯಾಗೋದು ನನ್ನ ಧರ್ಮ ಸಿದ್ದರಾಮಯ್ಯ ಭೇಟಿ ಬಗ್ಗೆ ಡಿಕೆಶಿ ಪ್ರತಿಕ್ರಿಯೆ

• ಉದಯವಾಹಿನಿ, ಬೆಂಗಳೂರು

ನಮ್ಮ ನಾಯಕರನ್ನು ಭೇಟಿಯಾಗೋದು ನನ್ನ ಧರ್ಮ ಎಂದು ಸಿಎಂ ಡಿ.ಕೆ ಶಿವಕುಮಾರ್ ಹೇಳಿದ್ದಾರೆ. ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾದ ವಿಚಾರವಾಗಿ ಮಾಧ್ಯಮಗಳು ಕೇಳಿದ ಪ್ರಶ್ನೆಗೆ ಅವರು ಈ ಉತ್ತರ ನೀಡಿದ್ದಾರೆ. ನಮ್ಮ ನಾಯಕರನ್ನ ಭೇಟಿ ಮಾಡಿ ವಿಚಾರಿಸೋದು ನನ್ನ ಧರ್ಮ ಅಲ್ವಾ? ಮಾಜಿ ಸಿಎಂ ಅವರನ್ನ ಭೇಟಿ ಮಾಡಿ ಬಂದಿದ್ದೀನಿ ಎಂದು ತಿಳಿಸಿದ್ದಾರೆ. ಸ್ಟಿಂಗ್ ಪ್ರಕರಣ ಹೊರಬಂದ ನಂತರ ಇದೇ ಮೊದಲ ಬಾರಿಗೆ ಮಾಜಿ ಸಿಎಂ ಸಿದ್ದರಾಮಯ್ಯರನ್ನು ಸಿಎಂ ಡಿಕೆ ಶಿವಕುಮಾರ್ ಭೇಟಿಯಾಗಿದ್ದಾರೆ. ಇದೇ ವೇಳೆ ಕಬ್ಬು ಬೆಳೆಗಾರರ ಜೊತೆ ಮಾತನಾಡುತ್ತೇನೆ. ಬೇಕಾದಷ್ಟು ಸಮಸ್ಯೆಗಳಿವೆ, ಅವರ ಬೇಡಿಕೆಗಳನ್ನ ತಿಳಿದುಕೊಳ್ಳುತ್ತೇನೆ. ಇದು ರಾಷ್ಟ್ರಮಟ್ಟದ ಸಮಸ್ಯೆ ಎಂದು ಹೇಳಿದ್ದಾರೆ.

ಸ್ಟಿಂಗ್ ಪ್ರಕರಣ ಹೊರಬಂದ ನಂತರ ಇದೇ ಮೊದಲ ಬಾರಿಗೆ ಮಂಡ್ಯದಲ್ಲಿ ಕಾವೇರಿ ಆರತಿಗೆ ಚಾಲನೆ ನೀಡಿದ ಬಳಿಕ ಮೈಸೂರಿಗೆ ಬಂದ ಡಿಕೆಶಿ ಕುವೆಂಪು ನಗರದಲ್ಲಿರುವ ಸಿದ್ದರಾಮಯ್ಯ ಅವರ ಹೊಸ ಮನೆಗೆ ಭೇಟಿ ನೀಡಿದ್ದರು. ಸ್ಟಿಂಗ್ ಪ್ರಕರಣ ಹೊರಬಂದ ನಂತರ ಇದೇ ಮೊದಲ ಬಾರಿಗೆ ಸಿದ್ದರಾಮಯ್ಯ ಭೇಟಿಯಾದ ಸಿಎಂ ಸಿದ್ದರಾಮಯ್ಯರೊಂದಿಗೆ ಕೆಲ ಕಾಲ ಮಾತುಕತೆ ನಡೆಸಿದ್ದರು.

## ಹಬ್ಬಕ್ಕೆ ಊರಿಗೆ ಹೊರಟವರ ಪರದಾಟ

• ಉದಯವಾಹಿನಿ, ಬೆಂಗಳೂರು

ನಗರದ ಹಲವೆಡೆ ಭಾರೀ ಮಳೆಯಾಗುತ್ತಿದೆ. ವಿಧಾನಸೌಧ, ಮೆಜೆಸ್ಟಿಕ್, ಆನಂದರಾವ್ ಸರ್ಕಲ್, ಕೆಆರ್ ಸರ್ಕಲ್ ಸುತ್ತಮುತ್ತ ಮಳೆಯಾಗುತ್ತಿದೆ. ಭಾರೀ ಮಳೆಯಿಂದಾಗಿ ವಾಹನ ಸವಾರರು, ಪಾದಚಾರಿಗಳು ಪರದಾಡುತ್ತಿದ್ದಾರೆ. ಬೆಂಗಳೂರಿನ ಹಲವೆಡೆ ಟ್ರಾಫಿಕ್ ಜಾಮ್ ಉಂಟಾಗಿದ್ದು, ಸಿಟಿಯಿಂದ ಹೊರ ಹೋಗಲು ಹಾಗೂ ಸಿಟಿ ಒಳಗೆ ಓಡಾಡಲು ಜನರು ಹರಸಾಹಸಪಡುತ್ತಿದ್ದಾರೆ. ಕುಮಾರಕೃಪಾ ರೋಡ್, ಹೆಬ್ಬಾಳ, ಶಿವಾನಂದ, ಮೆಖ್ರಿ, ಕಾವೇರಿ ಜಂಕ್ಷನ್‌ನಲ್ಲಿ ಭಾರೀ ಟ್ರಾಫಿಕ್ ಜಾಮ್ ಉಂಟಾಗಿದೆ.

ಇದರಿಂದ ಹಬ್ಬಕ್ಕೆ ಊರುಗಳಿಗೆ ಹೊರಟಿರುವ ಜನ ಪರದಾಡುತ್ತಿದ್ದಾರೆ. ಆನೇಕಲ್ ತಾಲ್ಲೂಕಿನ ಹಲವೆಡೆ ಕಳೆದೊಂದು ವಾರದಿಂದ ಮಳೆಯಾಗುತ್ತಿದೆ. ಇಂದು ಸಹ ಆನೇಕಲ್, ಜಿಗಣಿ, ಅತ್ತಿಬೆಲೆ, ಚಂದಾಪುರ ಸೇರಿದಂತೆ ಹಲವೆಡೆ ಮಳೆಯಾಗಿದೆ. ಕಳೆದೊಂದು ಗಂಟೆಯಿಂದ ಒಂದೇ ಸಮನೆ ಮಳೆ ಸುರಿಯುತ್ತಿದ್ದು, ಮಳೆಯ ಅಬ್ಬರಕ್ಕೆ ಪಾದಚಾರಿಗಳು, ವಾಹನ ಸವಾರರ ಪರದಾಡುತ್ತಿದ್ದಾರೆ. ಜನ ಅಂಗಡಿ ಮುಂಗಟ್ಟುಗಳ ಬಳಿ ನಿಂತು ಆಶ್ರಯ ಪಡೆದಿದ್ದಾರೆ.

## ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸೌಮ್ಯಾ ರೆಡ್ಡಿ ರಾಜೀನಾಮೆ

• ಉದಯವಾಹಿನಿ, ಬೆಂಗಳೂರು

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸೌಮ್ಯಾ ರೆಡ್ಡಿ ರಾಜೀನಾಮೆ ಸಲ್ಲಿಸಿದ್ದಾರೆ. ಎರಡು ವರ್ಷಗಳ ಅವಧಿಗೆ ಈ ಜವಾಬ್ದಾರಿ ವಹಿಸಿಕೊಂಡಿದ್ದಾಗಿ ತಿಳಿಸಿರುವ ಅವರು, ರಾಜ್ಯಾದ್ಯಂತ ಮಹಿಳೆಯರನ್ನು ಸಂಘಟಿಸಿ, ಅವರ ಸಬಲೀಕರಣಕ್ಕಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿದ್ದು ಸಂತೋಷ ತಂದಿದೆ ಎಂದಿದ್ದಾರೆ. ಕಾಂಗ್ರೆಸ್‌ನ ಐದು ಗ್ಯಾರಂಟಿಗಳು ಮಹಿಳೆಯರಲ್ಲಿ ಬದಲಾವಣೆ ತಂದಿರುವುದನ್ನು ಖುದ್ದಾಗಿ ಕಂಡಿದ್ದೇನೆ ಎಂದು ಹೇಳಿರುವ ಅವರು, ಕರ್ನಾಟಕ ಸರ್ಕಾರದಲ್ಲಿ ಮಹಿಳಾ ಸಚಿವರಿಲ್ಲದ ವಿಚಾರವನ್ನು ನಾಯಕತ್ವದ ಗಮನಕ್ಕೆ ತರುವಂತೆ ಮನವಿ ಮಾಡಿದ್ದಾರೆ. ಮುಂದಿನ ಅಧ್ಯಕ್ಷರ ಆಯ್ಕೆ ನಡೆಯುವವರೆಗೆ ಹುದ್ದೆಯಲ್ಲಿ ಮುಂದುವರಿಯುವುದಾಗಿ ತಿಳಿಸಿರುವ ಸೌಮ್ಯಾ ರೆಡ್ಡಿ, ಕಾಂಗ್ರೆಸ್ ಕಾರ್ಯಕರ್ತೆಯಾಗಿ ಮುಂದುವರಿದು 2028ರ ರಾಜ್ಯ ಚುನಾವಣೆ ಮತ್ತು 2029ರ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಗೆಲುವಿಗಾಗಿ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ.

## ಎಐ ಕ್ಯಾಮರಾಗಳ ಸರಣಿ ಎಡವಟ್ಟು

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಎಐ ಕ್ಯಾಮರಾಗಳ ಸರಣಿ ಎಡವಟ್ಟುಗಳು ಮುಂದುವರಿದಿದ್ದು, ಈ ಬಾರಿ ಬಿಎಂಟಿಸಿ ಬಸ್‌ಗಳಿಗೆ ಸೀಟ್ ಬೆಲ್ಟ್ ಉಲ್ಲಂಘನೆಗಾಗಿ ದಂಡ ವಿಧಿಸಿರುವುದು ಚರ್ಚೆಗೆ ಗ್ರಾಸವಾಗಿದೆ. ಮೂರು ಬೇರೆ ಬೇರೆ ಬಿಎಂಟಿಸಿ ಬಸ್‌ಗಳಿಗೆ, ಚಾಲಕ ಸೀಟ್ ಬೆಲ್ಟ್ ಧರಿಸಿಲ್ಲ ಎಂಬ ಕಾರಣಕ್ಕೆ ತಲಾ 500 ರೂಪಾಯಿ ದಂಡ ವಿಧಿಸಲಾಗಿದೆ. ವಿಧಾನಸೌಧ ಬಳಿ ಸಿಗ್ನಲ್‌ನಲ್ಲಿ ನಿಂತಿದ್ದ ಬಸ್‌ಗೂ ಹಾಗೂ ಹೆಣ್ಣೂರು ರಸ್ತೆಯಲ್ಲಿ ಸಂಚರಿಸುತ್ತಿದ್ದ ಬಸ್‌ಗಳಿಗೂ ಈ ದಂಡ ಬಿದ್ದಿದೆ ಎಂದು ವರದಿಯಾಗಿದೆ. ಬಿಎಂಟಿಸಿ ಬಸ್ ಚಾಲಕ ಸೀಟ್ ಬೆಲ್ಟ್ ಧರಿಸಿಲ್ಲ ಎಂಬ ಆರೋಪ ನಗೆಪಾಟಲಿಗೆ ಕಾರಣವಾಗಿದೆ. ಎಐ ಕ್ಯಾಮರಾಗಳಿಂದ ನಡೆದ ಮೊದಲ ಎಡವಟ್ಟಲ್ಲ. ಈ ಹಿಂದೆ, ಕಾರು ಚಾಲಕನಿಗೆ ಹೆಲ್ಮೆಟ್ ಧರಿಸಿಲ್ಲ ಎಂದು ದಂಡ ವಿಧಿಸಲಾಗಿತ್ತು. ಮತ್ತೊಂದು ಘಟನೆಯಲ್ಲಿ, ಬೈಕ್ ಸವಾರನ ಹಿಂದೆ ಗಿಟಾರ್ ಬ್ಯಾಗ್ ಇದ್ದರೂ, ಅದನ್ನು ಹಿಂಬದಿ ಸವಾರ ಎಂದು ಪರಿಗಣಿಸಿ ಹೆಲ್ಮೆಟ್ ಧರಿಸಿಲ್ಲ ಎಂದು ದಂಡ ಹಾಕಲಾಗಿತ್ತು.

ಉಕ್ರೇನ್ ವಿರುದ್ಧದ ಯುದ್ಧಕ್ಕೆ ರಷ್ಯಾ ಬಳಸುತ್ತಿರುವ ಆರ್ಥಿಕ ಸಂಪನ್ಮೂಲಗಳನ್ನು ಕಡಿತಗೊಳಿಸುವುದು ಈ ಕಾಯಿದೆಯ ಉದ್ದೇಶ. ರಷ್ಯಾದ ಅಧಿಕಾರಿಗಳು, ಬ್ಯಾಂಕುಗಳು, ಇಂಧನ ವಲಯದ ಸಂಸ್ಥೆಗಳು ಮತ್ತು ಮಾಸ್ಕೋದ ಸೇನಾ ಕಾರ್ಯಾಚರಣೆಗಳಿಗೆ ನೆರವು ನೀಡುವ ವಿದೇಶಿ ಘಟಕಗಳ ವಿರುದ್ಧ ನಿರ್ಬಂಧ ವಿಧಿಸಲು ಇದು ಅವಕಾಶ ಕಲ್ಪಿಸುತ್ತದೆ. ರಷ್ಯಾದ ಕಚ್ಚಾ ತೈಲವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವ ಭಾರತ, ಚೀನಾ, ಸ್ಲೋವಾಕಿಯಾ, ಹಂಗೇರಿ ಮತ್ತು ಅಜೆರ್ಬೈಜಾನ್ ಸೇರಿದಂತೆ ದೇಶಗಳಿಂದ ಬರುವ ಸರಕುಗಳ ಮೇಲೆ ಶೇ. 100ರಷ್ಟು ಸುಂಕ ವಿಧಿಸುವ ಅಧಿಕಾರವನ್ನು ಟ್ರಂಪ್‌ಗೆ ನೀಡುವ ಪ್ರಸ್ತಾವವೂ ಇದರಲ್ಲಿತ್ತು. ರಷ್ಯಾದಿಂದ ಅಮೆರಿಕಕ್ಕೆ ಆಮದಾಗುವ ಇಂಧನ ಉತ್ಪನ್ನಗಳ ಮೇಲೆ ಶೇ 500ರಷ್ಟು ಸುಂಕ ವಿಧಿಸುವ ಅವಕಾಶವೂ ಕಾಯಿದೆಯಲ್ಲಿದೆ. ಭಾರತದ ಸರಕುಗಳ ಮೇಲೆ ಶೇ. 100ರಷ್ಟು ಹೆಚ್ಚುವರಿ ಸುಂಕ ವಿಧಿಸಿದ್ದರೆ, ಈಗಾಗಲೇ ಜಾರಿಯಲ್ಲಿರುವ ಸುಂಕದ ಹೊರೆ ಮತ್ತಷ್ಟು ಹೆಚ್ಚುತ್ತಿತ್ತು. ಬಲವಂತದ ದುಡಿಮೆಯಿಂದ ತಯಾರಿಸಿದ ಸರಕುಗಳ ಆಮದನ್ನು ತಡೆಯಲು ಸಾಕಷ್ಟು ಕ್ರಮ ಕೈಗೊಂಡಿಲ್ಲ ಎಂಬ ಕಾರಣಕ್ಕೆ ಭಾರತದಿಂದ ಆಮದಾಗುವ ಸರಕುಗಳ ಮೇಲೆ ಅಮೆರಿಕ ಈಗಾಗಲೇ ಶೇ. 10ರಷ್ಟು ದಂಡನಾತ್ಮಕ ಸುಂಕ ವಿಧಿಸುತ್ತಿದೆ ಎಂದು ವರದಿ ತಿಳಿಸಿದೆ.

ಭಾರತ ಚೀನಾಕ್ಕೆ ನಿರಾಳತೆ

ರಷ್ಯಾ ವಿರುದ್ಧದ ನಿರ್ಬಂಧಗಳ ಜಾರಿ ಅಮಾನತು

# ಭಾರತ, ಚೀನಾಗೆ ಟ್ರಂಪ್ ಬಿಗ್‌ಗಿಫ್ಟ್

• ಉದಯವಾಹಿನಿ, ವಾಷಿಂಗ್ಟನ್

ಭಾರತ ಮತ್ತು ಚೀನಾಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಿಗ್ ಗಿಫ್ಟ್ ಕೊಟ್ಟಿದ್ದಾರೆ. ರಷ್ಯಾದ ತೈಲ ಮತ್ತು ಅನಿಲ ಖರೀದಿಯ ಮೇಲೆ ವಿಧಿಸಲಾದ ನಿರ್ಬಂಧಗಳು ಮತ್ತು ಸುಂಕಗಳನ್ನ ಮನ್ನಾ ಮಾಡಲು ನಿರ್ಧರಿಸಿದ್ದಾರೆ. ಇದರಿಂದ ಭಾರತ, ಚೀನಾ ಮತ್ತು ಇತರ ಹಲವಾರು ದೇಶಗಳಿಗೆ ದೊಡ್ಡ ಉಡುಗೊರೆ ಸಿಕ್ಕಂತಾಗಿದೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಟ್ರಂಪ್ ಈ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದ್ದಾರೆ. ವಿನಾಯಿತಿ ಘೋಷಿಸಿದ್ದಾರೆ.

ನಿರ್ಬಂಧಗಳು ಮತ್ತು ಸುಂಕದ ನಿಯಮ ಜಾರಿಗೆ ಬರಲು 1 ದಿನ ಬಾಕಿ ಇರುವಾಗಲೇ ಈ ಮಹತ್ವದ ನಿರ್ಧಾರ ಹೊರಬಿದ್ದಿದೆ. ಈ ವಿನಾಯಿತಿಗೆ ಸಂಬಂಧಿಸಿದ ಪ್ರಮಾಣಪತ್ರವನ್ನ ಅಮೆರಿಕದ ಸಂಸತ್ತಿಗೆ ಸಲ್ಲಿಸಿರುವುದಾಗಿಯೂ ಅವರು ತಿಳಿಸಿದ್ದಾರೆ. ಕಾರ್ಯಕಾರಿ ಆದೇಶದಲ್ಲಿ ಹೇಳಿಕೆ ನೀಡಿರುವ ಟ್ರಂಪ್, ಗ್ರಹಾಂ ಕಾಯ್ದೆಯಡಿ ಒದಗಿಸಲಾದ ನಿರ್ಬಂಧಗಳು, ನಿರ್ಬಂಧಾತ್ಮಕ ಕ್ರಮಗಳು ಮತ್ತು ಸುಂಕಗಳ ಅನ್ವಯದಿಂದ ನಾನು ವಿನಾಯಿತಿ ನೀಡುತ್ತಿದ್ದೇನೆ. ಪ್ರಸ್ತುತ ಸಮಯದಲ್ಲಿ ಇಂತಹ ವಿನಾಯಿತಿ ನೀಡುವುದು ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಯಲ್ಲಿದೆ. ಇದನ್ನ ಪ್ರಮಾಣೀಕರಿಸುವ ದಾಖಲೆಯನ್ನ ಸಂಸತ್ತಿಗೆ ಸಲ್ಲಿಸಿದ್ದೇನೆ ಎಂದು ಅವರು ತಿಳಿಸಿದ್ದಾರೆ.ಮೃತ ಸೆನೆಟರ್ ಲಿಂಡ್ಸೆ ಗ್ರಹಾಂ ಅವರ ಹೆಸರಿನಲ್ಲಿರುವ 'ರಷ್ಯಾ ಮತ್ತು ಇರಾನ್ ನಿರ್ಬಂಧ ಕಾಯ್ದೆ'ಅಡಿಯಲ್ಲಿ, ರಷ್ಯಾದ ಮೇಲೆ ವ್ಯಾಪಕ ನಿರ್ಬಂಧಗಳನ್ನ ವಿಧಿಸಲು ಹಾಗೂ ರಷ್ಯಾದಿಂದ ತೈಲ ಮತ್ತು ಅನಿಲ ಖರೀದಿಸುವ ದೇಶಗಳ ಮೇಲೆ ಶೇ.100ರವರೆಗೂ ಸುಂಕ ವಿಧಿಸಲು ಟ್ರಂಪ್‌ಗೆ ಅಧಿಕಾರ ನೀಡಲಾಗಿತ್ತು.

ಉಕ್ರೇನ್ ಪರ ಬಲವಾದ ಬೆಂಬಲ ಹೊಂದಿದ್ದ ಲಿಂಡ್ಸೆ ಗ್ರಹಾಂ, ರಷ್ಯಾ-ಉಕ್ರೇನ್ ಸಂಘರ್ಷದ ನಡುವೆ ರಷ್ಯಾಕ್ಕೆ ಆರ್ಥಿಕ ನೆರವು ನೀಡುತ್ತಿರುವ ದೇಶಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ನಿರಂತರವಾಗಿ ಒತ್ತಾಯಿಸಿದ್ದರು.

## ರಷ್ಯಾ ತೈಲ ಖರೀದಿಸುವ ದೇಶಗಳ ಮೇಲೆ 100% ಸುಂಕದ ಪ್ರಸ್ತಾವನೆ



### ಪುಟಿನ್ ಜೊತೆ ಮಾತುಕತೆ ಬೆನ್ನಲ್ಲೇ ಟ್ರಂಪ್ ಯೂಟರ್ನ್

ರಷ್ಯಾ-ಉಕ್ರೇನ್ ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಇತ್ತೀಚೆಗೆ ರಷ್ಯಾ ಅಧ್ಯಕ್ಷ ಪುಟಿನ್ ಜೊತೆಗೆ ಟ್ರಂಪ್ ಮಾತುಕತೆ ನಡೆಸಿದ ಸಂದರ್ಭದಲ್ಲಿ ಮಾಸ್ಕೋದಿಂದ 300,000 ಟನ್‌ಗಳಿಗೂ ಹೆಚ್ಚು ಡೀಸೆಲ್ ಖರೀದಿಸುವುದಾಗಿ ಟ್ರಂಪ್ ಘೋಷಿಸಿದ ಕೆಲವೇ ದಿನಗಳ ಬಳಿಕ ಈ ರಷ್ಯನ್ ಸ್ಯಾಂಕ್ಷನ್ ಬಿಲ್‌ಗೆ ವಿನಾಯಿತಿ ನೀಡುವ ನಿರ್ಧಾರವನ್ನು ಅಮೆರಿಕಾ ತೆಗೆದುಕೊಂಡಿದೆ. ಇನ್ನು, ಈ ಆದೇಶವು ರಷ್ಯಾ ಸಂಬಂಧಿತ ಸುಂಕಗಳ ಅನುಷ್ಠಾನವನ್ನು ಮಾತ್ರ ಸ್ಥಗಿತಗೊಳಿಸುತ್ತಿದ್ದು, ಒಂದೇ ವೇಳೆ ಟ್ರಂಪ್ ಬಯಸಿದಲ್ಲಿ ಈ ಕಾಯ್ದೆಯನ್ನು ಪುನಃ ಜಾರಿಗೊಳಿಸುವ ಅಧಿಕಾರವಿದೆ.

### ರಷ್ಯನ್ ಸ್ಯಾಂಕ್ಷನ್ ಬಿಲ್ ಜಾರಿಗೆ ಟ್ರಂಪ್ ಬ್ರೇಕ್

ರಷ್ಯನ್ ಸ್ಯಾಂಕ್ಷನ್ ಬಿಲ್ ಮೂಲಕ ರಷ್ಯಾದಿಂದ ಇಂಧನ ಖರೀದಿಸುವ ರಾಷ್ಟ್ರಗಳಿಂದ ಅಮೆರಿಕಾಗೆ ರಫ್ತಾಗುವ ಸರಕುಗಳ ಮೇಲೆ ಬರೋಬ್ಬರಿ ಶೇ.100ರಷ್ಟು ಸುಂಕದ ಹೊರೆಯನ್ನು ಹೊರಿಸಲು ಸಿದ್ದವಾಗಿದ್ದ ಡೊನಾಲ್ಡ್ ಟ್ರಂಪ್ ಕೊನೆ ಕ್ಷಣದಲ್ಲಿ ರಾಷ್ಟ್ರೀಯ ಹಿತಾಸಕ್ತಿಯ ನೆಪವನ್ನು ನೀಡಿ ಈ ಸುಂಕ ಹಾಗೂ ನಿರ್ಬಂಧಗಳಿಗೆ ವಿನಾಯಿತಿ ನೀಡುತ್ತಿರುವುದಾಗಿ ಕಾರ್ಯಕಾರಿ ಆದೇಶ ಹೊರಡಿಸಿದ್ದಾರೆ. ಈ ಆದೇಶದಲ್ಲಿ, ಗ್ರಹಾಂ ಕಾಯ್ದೆಯಲ್ಲಿ ಒದಗಿಸಲಾದ ಸ್ಯಾಂಕ್ಷನ್‌ಗಳು, ನಿರ್ಬಂಧಗಳು ಮತ್ತು ಸುಂಕಗಳನ್ನು ಮನ್ನಾ ಮಾಡುತ್ತಿದ್ದೇನೆ. ಈ ಸಮಯದಲ್ಲಿ ಅಂತಹ ವಿನಾಯಿತಿ ನೀಡುವುದು ಅಮೆರಿಕಾದ ರಾಷ್ಟ್ರೀಯ ಹಿತಾಸಕ್ತಿಯಲ್ಲಿದೆ ಎಂದು ನಾನು ಕಾಂಗ್ರೆಸ್‌ಗೆ ಪ್ರಮಾಣೀಕರಣವನ್ನು ಸಲ್ಲಿಸಿದ್ದೇನೆ ಎಂದು ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಇದರ ಅನ್ವಯ, ಕಾಯ್ದೆಯಲ್ಲಿನ ಸೆಕ್ಷನ್ 112 ಮತ್ತು 113 ರ ಅಡಿಯಲ್ಲಿ ಸುಂಕಗಳು, ಸೆಕ್ಷನ್ 102(ಜ) ಅಡಿಯಲ್ಲಿ ಸ್ಯಾಂಕ್ಷನ್ ಮತ್ತು ನಿರ್ಬಂಧಗಳ ಜೊತೆಗೆ ಈ ಕಾಯ್ದೆಯ ಅನ್ವಯ ವಿಧಿಸಲಾಗಿದ್ದ ವಿದೇಶಿ ವ್ಯಕ್ತಿಗಳ ವಿರುದ್ಧದ ಸ್ಯಾಂಕ್ಷನ್ ಸೇರಿದಂತೆ ಎಲ್ಲಾ ನಿರ್ಬಂಧಗಳಿಗೆ ವಿನಾಯಿತಿ ನೀಡಲಾಗುತ್ತಿದೆ. ಇದರಿಂದಾಗಿ ಸದ್ಯ ರಷ್ಯಾದ ತೈಲ ಮತ್ತು ಅನಿಲದ ಪ್ರಮುಖ ಆಮದುದಾರರಾದ ಭಾರತ, ಚೀನಾ ಸೇರಿ ಹಲವು ಜಾಗತಿಕ ರಾಷ್ಟ್ರಗಳ ಮೇಲೆ ಬರೋಬ್ಬರಿ 100% ಸುಂಕ ಸೇರಿದಂತೆ ಹಲವು ನಿರ್ಬಂಧಗಳನ್ನು ವಿಧಿಸಲು ಸಹಿ ಹಾಕಲಾಗಿದ್ದ ಕಾಯ್ದೆಗೆ ಮಧ್ಯಂತರ ತಡೆ ನೀಡಿದ್ದಾರೆ.

### ಭಾರತದ ದೊಡ್ಡ ಗಿಫ್ಟ್

ರಷ್ಯಾದಿಂದ ಭಾರತ ತೈಲ ಖರೀದಿಸುತ್ತಿರುವುದಕ್ಕೆ ಟ್ರಂಪ್ ಈ ಹಿಂದೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ರಷ್ಯಾದಿಂದ ತೈಲ ಖರೀದಿಸುವುದನ್ನ ನಿಲ್ಲಿಸುವಂತೆ ಭಾರತಕ್ಕೆ ಒತ್ತಾಯಿಸಿದ್ದರು. ಆದರೆ, ಭಾರತ ತನ್ನ ನಿಲುವಿನಲ್ಲಿ ದೃಢವಾಗಿ ನಿಂತಿತ್ತು. ದೇಶದ ಆರ್ಥಿಕ ಹಿತಾಸಕ್ತಿ ಮತ್ತು ನಾಗರಿಕರ ಹಿತವನ್ನ ಕಾಪಾಡಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನ ಕೈಗೊಳ್ಳುವುದಾಗಿ ಭಾರತ ಸರ್ಕಾರ ಸ್ಪಷ್ಟಪಡಿಸಿತ್ತು. ಇದೀಗ ಟ್ರಂಪ್ ನಿರ್ಬಂಧ ಹಾಗೂ ಸುಂಕಗಳ ವಿನಾಯಿತಿಯಿಂದ, ರಷ್ಯಾದಿಂದ ಇಂಧನ ಖರೀದಿಸುವ ಭಾರತ ಮತ್ತು ಚೀನಾದಂತಹ ದೇಶಗಳಿಗೆ ಮಹತ್ವದ ಬೆಳವಣಿಗೆಯಾಗಿದೆ.




**1** ರಷ್ಯನ್ ಸ್ಯಾಂಕ್ಷನ್ ಬಿಲ್ ಜಾರಿಗೊಳಿಸುವ ಒಂದು ದಿನದ ಮೊದಲೇ ಈ ಬಿಲ್‌ಗೆ ಬ್ರೇಕ್ ನೀಡಿದ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್

**2** ರಷ್ಯಾದ ಇಂಧನ ಖರೀದಿಸುವ ಭಾರತ, ಚೀನಾ ಸೇರಿ ವಿವಿಧ ದೇಶಗಳ ಮೇಲಿನ ಶೇ.100ರಷ್ಟು ಸುಂಕ ಜಾರಿಗೂ ಮೊದಲೇ ರದ್ದು

**3** ಪುಟಿನ್ ಜೊತೆ ಮಾತುಕತೆ ಬೆನ್ನಲ್ಲೇ ಟ್ರಂಪ್ ಯೂಟರ್ನ್, ಭಾರತಕ್ಕೆ ರಿಲೀಫ್ ತಂದ ಟ್ರಂಪ್‌ನ ಮಹತ್ವದ ಘೋಷಣೆ

### ಟ್ರಂಪ್ ನಿರ್ಧಾರದಿಂದ ಭಾರತಕ್ಕೆ ರಿಲೀಫ್

ಇನ್ನು, ಟ್ರಂಪ್ ನ ಈ ಹೊಸ ಆದೇಶ ಸದ್ಯ ಭಾರತಕ್ಕೆ ನಿರಾಳತೆಯನ್ನು ತಂದಿದೆ.

ರಷ್ಯಾದ ಇಂಧನ ಖರೀದಿದಾರರಲ್ಲಿ ಪ್ರಮುಖ ಸ್ಥಾನದಲ್ಲಿರುವ ಭಾರತದ ಮೇಲೆ ಅಮೆರಿಕಾ ಈ ಹಿಂದಿನಿಂದಲೂ ರಷ್ಯಾದ ತೈಲ ಖರೀದಿಯನ್ನು ಸ್ಥಗಿತಗೊಳಿಸುವಂತೆ ಒತ್ತಾಯಿಸುತ್ತಲೇ ಬಂದಿದೆ. ಅಲ್ಲದೆ, ಇತ್ತೀಚಿನ ಈ ರಷ್ಯನ್ ಸ್ಯಾಂಕ್ಷನ್ ಬಿಲ್ ಮೂಲಕ ಭಾರತ ಸೇರಿ ಇತರೆ ರಾಷ್ಟ್ರಗಳ ಮೇಲೆ ಶೇ.100ರಷ್ಟು ಸುಂಕ ಬೆದರಿಕೆಯನ್ನು ಹಾಕಿತ್ತು. ಆದರೆ, ಇದೀಗ ಈ ನಿರ್ಧಾರದಿಂದಾಗಿ ಭಾರತಕ್ಕೆ ಈ ಸುಂಕದ ವಿನಾಯಿತಿ ಲಭಿಸಿದೆ. ಆದಾಗ್ಯೂ, ಅಮೆರಿಕಾದ ಸುಂಕ ವಿನಾಯಿತಿ ಕೇವಲ ರಷ್ಯಾದ ತೈಲ ಖರೀದಿ ವಿಚಾರಕ್ಕೆ ಮಾತ್ರ ಸೀಮಿತವಾಗಿದ್ದು, ಈ ಹಿಂದೆ ಅಮೆರಿಕಾ ಭಾರತದ ಮೇಲೆ ವಿಧಿಸಿರುವ ಬಲವಂತದ ಕಾರ್ಮಿಕ ಪದ್ಧತಿಯ ಆರೋಪದ ಮೇಲಿನ ಶೇ.10ರಷ್ಟು ಸುಂಕ ಸೇರಿ ಇತರೆ ಸುಂಕಗಳು ಜಾರಿಯಲ್ಲಿರಲಿವೆ.

### ಇಂಧನ ಭದ್ರತೆಗೆ ಭಾರತ ಬದ್ಧ

ರಷ್ಯಾ ವಿರುದ್ಧದ ನಿರ್ಬಂಧಗಳ ಮಸೂದೆಯನ್ನು ಅಮೆರಿಕದ ಕಾಂಗ್ರೆಸ್ ಅಂಗೀಕರಿಸಿದ ಸಂದರ್ಭದಲ್ಲಿ ಭಾರತ ತನ್ನ ವ್ಯಾಪಾರ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿತ್ತು. '1.4 ಶತಕೋಟಿ ಜನರಿಗೆ ಇಂಧನ ಭದ್ರತೆ ಖಚಿತಪಡಿಸಿಕೊಳ್ಳಲು ಭಾರತ ಬದ್ಧವಾಗಿದೆ. ಇಂಧನ ಪಡೆಯುವ ಮೂಲಕ ಮತ್ತು ಮಾರುಕಟ್ಟೆಯ ಬದಲಾದ ಪರಿಸ್ಥಿತಿಗಳಿಗೆ ಅನುಗುಣವಾಗಿ ತನ್ನ ಇಂಧನ ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದನ್ನು ಮುಂದುವರಿಸಲಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿತ್ತು.ಇತ್ತೀಚಿನ ತಿಂಗಳುಗಳಲ್ಲಿ ಅಮೆರಿಕದ ವಿವಿಧ ಪ್ರತಿನಿಧಿಗಳೊಂದಿಗೆ ರಷ್ಯಾದೊಂದಿಗಿನ ವ್ಯಾಪಾರದ ಕುರಿತು ಉನ್ನತ ಮಟ್ಟದ ಮಾತುಕತೆ ನಡೆಸಲಾಗಿದೆ.

ಈ ಬೆಳವಣಿಗೆ ದ್ವಿಪಕ್ಷೀಯ ಸಂಬಂಧಗಳ ಮೇಲೆ ಮಾತ್ರವಲ್ಲದೆ, ಅಂತರರಾಷ್ಟ್ರೀಯ ಇಂಧನ ಮಾರುಕಟ್ಟೆಯ ಮೇಲೂ ಬೀರಬಹುದಾದ ಪರಿಣಾಮಗಳನ್ನು ಅಮೆರಿಕಕ್ಕೆ ಸ್ಪಷ್ಟಪಡಿಸಲಾಗಿದೆ ಎಂದು ಸಚಿವಾಲಯ ತಿಳಿಸಿತ್ತು.

### ಪುಟಿನ್ ಜತೆ ಟ್ರಂಪ್ ನಿಕಟತೆ

ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಟ್ರಂಪ್ ಬಾಂಧವ್ಯ ಸುಧಾರಿಸಿಕೊಳ್ಳುತ್ತಿರುವ ಹಾಗೂ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝುಲೆನ್ಸಿ ಅವರನ್ನು ಬಹಿರಂಗವಾಗಿ ಟೀಕಿಸುತ್ತಿರುವ ಸಂದರ್ಭದಲ್ಲಿ ಈ ಆದೇಶ ಹೊರಬಿದ್ದಿದೆ. ರಷ್ಯಾದಿಂದ ಅಮೆರಿಕಕ್ಕೆ ಡೀಸೆಲ್ ಪೂರೈಕೆ ಮಾಡುವ ಕುರಿತು ಪುಟಿನ್ ಅವರೊಂದಿಗೆ ಒಪ್ಪಂದ ಮಾಡಿಕೊಂಡಿರುವುದಾಗಿ ಟ್ರಂಪ್ ಕಳೆದ ವಾರ ಘೋಷಿಸಿದ್ದರು. ಅದರಂತೆ ರಷ್ಯಾ ತಕ್ಷಣವೇ 3 ಲಕ್ಷ ಟನ್‌ಗಿಂತಲೂ ಹೆಚ್ಚು ಡೀಸೆಲ್ ಪೂರೈಸಲಿದ್ದು, ಮುಂದಿನ ತಿಂಗಳುಗಳಲ್ಲಿ ಮತ್ತಷ್ಟು ಪ್ರಮಾಣದ ಡೀಸೆಲ್ ರವಾನೆಯಾಗಲಿದೆ ಎಂದು ಅವರು ತಿಳಿಸಿದ್ದರು. ಈ ಒಪ್ಪಂದವನ್ನು ಟೀಕಿಸಿರುವ ಝುಲೆನ್ಸಿ ಇದನ್ನು ಪಾಲುದಾರರಿಗೆ ತಕ್ಕುದಲ್ಲದ ಮತ್ತು ದುರ್ಬಲ ನಿರ್ಧಾರ ಎಂದು ಕರೆದಿದ್ದಾರೆ ಉಕ್ರೇನ್ ಮೇಲೆ ದಾಳಿ ನಡೆಸುವ ಮೂಲಕ ಮಾಸ್ಕೊ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

## ಮೇಷ ಲಗ್ನದಲ್ಲಿ ತೀರ್ಥಸ್ವರೂಪಿಣಿಯಾಗಿ ಕಾವೇರಿ ದರ್ಶನ

### ಭಕ್ತರು 'ಕಾವೇರಿ ಮಾತೆ ಕಿ ಜೈ' ಎಂದು ಭಕ್ತಿಭಾವದಿಂದ ಜೈಕಾರ ಕೂಗಿದರು.

• ಉದಯವಾಹಿನಿ, ಬೆಂಗಳೂರು

ಕೊಡಗು ಜಿಲ್ಲೆಯ ಪವಿತ್ರ ಪುಣ್ಯಕ್ಷೇತ್ರ ಭಾಗಮಂಡಲದ ತಲಕಾವೇರಿಯಲ್ಲಿ ಕಾವೇರಿ ತೀರ್ಥೋದ್ಭವವು ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿತು.

ಮೇಷ ಲಗ್ನದಲ್ಲಿ ತೀರ್ಥಸ್ವರೂಪಿಣಿಯಾಗಿ ಕಾವೇರಿ ಅಮ್ಮನ ದರ್ಶನ ಪಡೆಯಲು ಕಾವೇರಿ ಉದ್ಭವ ಕ್ಷೇತ್ರಕ್ಕೆ ರಾಜ್ಯದ ವಿವಿಧೆಡೆಯಿಂದ ಮಾತ್ರವಲ್ಲದೆ ನೆರೆಯ ತಮಿಳುನಾಡು, ಆಂಧ್ರಪ್ರದೇಶ ಹಾಗೂ ಕೇರಳದಿಂದಲೂ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು. ನಿಗದಿತ ಮೇಷ ಲಗ್ನದಲ್ಲಿ ಕಾವೇರಿ




ಕುಂಡಿಕೆಯಿಂದ ತೀರ್ಥರೂಪಿಣಿಯಾಗಿ ಕಾವೇರಿ ಮಾತೆಯು ಉದ್ಭವಗೊಂಡು ಭಕ್ತರಿಗೆ ಕೃಪೆ ತೋರಿದರು. ತೀರ್ಥೋದ್ಭವದ ಪವಿತ್ರ ಕ್ಷಣವನ್ನು ಕಣ್ತುಂಬಿಕೊಂಡ ಭಕ್ತರ ಮೇಲೆ ಅರ್ಚಕರು ತೀರ್ಥ ಪ್ರೋಕ್ಷಣೆ ಮಾಡಿದರು.

ಈ ವೇಳೆ ನೆರೆದಿದ್ದ ಭಕ್ತರು ಕಾವೇರಿ ಮಾತೆ ಕಿ ಜೈ ಎಂದು ಭಕ್ತಿಭಾವದಿಂದ ಜೈಕಾರ ಕೂಗಿದರು.

ಲಕ್ಷಾಂತರ ಭಕ್ತರು ಸೇರುವ ಈ ಪವಿತ್ರ ಉತ್ಸವದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹಾಗೂ ಜನದಟ್ಟಣೆಯನ್ನು ನಿಯಂತ್ರಿಸಲು ಕೊಡಗು ಜಿಲ್ಲಾ ಪೊಲೀಸ್ ವತಿಯಿಂದ 500ಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿತ್ತು. ಪೊಲೀಸ್ ಇಲಾಖೆ ಹಾಗೂ ಜಿಲ್ಲಾ ಆಡಳಿತದ ಸಕಲ ಸಿದ್ಧತೆಗಳಿಂದಾಗಿ ಭಕ್ತರು ಯಾವುದೇ ತೊಂದರೆಯಿಲ್ಲದೆ ಸುಲಭವಾಗಿ ತೀರ್ಥ ಸ್ನಾನ ಹಾಗೂ ಅಮ್ಮನ ದರ್ಶನ ಪಡೆದರು.

## ಬಿಜೆಪಿ ಹಿರಿಯ ನಾಯಕ ಎಲ್‌ಕೆ ಅಡ್ವಾಣಿ ಆಸ್ಪತ್ರೆಗೆ ದಾಖಲು



• ಉದಯವಾಹಿನಿ, ದೆಹಲಿ

ಭಾರತೀಯ ಜನತಾ ಪಕ್ಷದ ಹಿರಿಯ ನಾಯಕ ಮತ್ತು ಮಾಜಿ ಉಪ ಪ್ರಧಾನಿ ಲಾಲ್ ಕೃಷ್ಣ ಅಡ್ವಾಣಿ ಅವರು ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿರುವುದರಿಂದ ಅವರನ್ನು ಇಲ್ಲಿನ ಇಂಧ್ರಪ್ರಸ್ಥ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ.ಅವರ ಆರೋಗ್ಯ ಸ್ಥಿರವಾಗಿದೆ. ಅವರು ಇದೀಗ ತಜ್ಞ ವೈದ್ಯರ ತಂಡದ ತಪಾಸಣೆಯಲ್ಲಿದ್ದಾರೆ ಎಂದು ಆಸ್ಪತ್ರೆ ಮಾಹಿತಿ ನೀಡಿದೆ.

98 ವರ್ಷದ ಎಲ್ ಕೆ ಅಡ್ವಾಣಿ ಅವರನ್ನು 7.30ರ ಸುಮಾರಿಗೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಥಮಿಕ ಚಿಕಿತ್ಸೆ ಬಳಿಕ ಅವರನ್ನು ಶ್ವಾಸಕೋಶದ ವಿಭಾಗಕ್ಕೆ ದಾಖಲಿಸಲಾಗಿದೆ. ಶ್ವಾಸಕೋಶದ ಸೋಂಕಿನ ಹಿನ್ನಲೆ ಅಗತ್ಯ ಚಿಕಿತ್ಸೆ ನೀಡಿದ್ದು, ಅವರ ಆರೋಗ್ಯದ ಮೇಲ್ವಿಚಾರಣೆ ನಡೆಸಲಾಗುತ್ತಿದೆ. ಅವರ ಆರೋಗ್ಯದ ಬಗ್ಗೆ ಯಾವುದೇ ಆತಂಕ ಪಡಬೇಕಿಲ್ಲ ಆಸ್ಪತ್ರೆಯ ವೈದ್ಯಕೀಯ ಬುಲೆಟಿನ್ ತಿಳಿಸಿದೆ. ಅಡ್ವಾಣಿ ಅವರು ವಯೋಸಂಬಂಧಿತ ಆರೋಗ್ಯ ಸಮಸ್ಯೆ ಹೊಂದಿದ್ದು, ಇಳಿ ವಯಸ್ಸಿನಲ್ಲಿ ಇದು ಸಾಮಾನ್ಯ. ಈ ಹಿಂದೆ ಕೂಡ ಅವರು ಸಾಮಾನ್ಯ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಆಸ್ಪತ್ರೆಗೆ ದಾಖಲಾಗಿದ್ದ ಸುದ್ದಿ ತಿಳಿದು ಅನೇಕ ರಾಜಕೀಯ ನಾಯಕರು ಮತ್ತು ಹಿತೈಷಿಯಗಳು ಅವರ ಆರೋಗ್ಯ ಚೇತರಿಕಗೆ ಹಾರೈಸಿದ್ದರು. ಕಳೆದ ಮೇಯಲ್ಲಿ ಅವರು ವಯೋಸಹಜ ಆರೋಗ್ಯ ಸಮಸ್ಯೆಯಿಂದ ಅಪೋಲೋ ಆಸ್ಪತ್ರೆಗೆ ಭೇಟಿ ನೀಡಿದ್ದು, ಕೆಲವು ದಿನಗಳ ಬಳಿಕ ಅವರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದರು. ಇದಕ್ಕೂ ಮುನ್ನ 2024ರ ಡಿಸೆಂಬರ್‌ನಲ್ಲಿ ಅವರು ಇದೆ ಅಪೋಲೋ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದಿದ್ದರು.

ಅಡ್ವಾಣಿ ಅವರು ಬಿಜೆಪಿ ಇತಿಹಾಸದಲ್ಲಿ ಪ್ರಮುಖ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದಾರೆ. ಸಣ್ಣ ರಾಜಕೀಯ ಶಕ್ತಿಯಾಗಿದ್ದ ಪಕ್ಷವು ಪ್ರಮುಖ ರಾಷ್ಟ್ರೀಯ ರಾಜಕೀಯ ಸಂಘಟನೆಯಾಗಿ ಬೆಳೆಯುವಲ್ಲಿ ಅಡ್ವಾಣಿ ಅವರು ಪ್ರಮುಖ ಪಾತ್ರವಹಿಸಿದ್ದಾರೆ.

ಅಡ್ವಾಣಿ ಅವರು ಹಲವು ಬಾರಿ ಬಿಜೆಪಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ದೇಶಾದ್ಯಂತ ಪಕ್ಷದ ಸಾಂಸ್ಥಿಕ ನೆಲೆ ಬಲಗೊಳ್ಳುವಲ್ಲಿ ನಿರ್ಣಾಯಕ ಪಾತ್ರವಹಿಸಿದ್ದಾರೆ. 1990ರಲ್ಲಿ ಅವರು ಕೈಗೊಂಡ ರಾಷ್ಟ್ರವ್ಯಾಪಿ ರಾಮ ರಥ ಯಾತ್ರೆಯು ಭಾರತೀಯ ರಾಜಕೀಯದಲ್ಲಿ ಒಂದು ಮಹತ್ವದ ತಿರುವು ನೀಡುವುದರ ಜೊತೆಗೆ ಬಿಜೆಪಿಯ ರಾಜಕೀಯ ವ್ಯಾಪ್ತಿಯನ್ನು ವಿಸ್ತರಿಸಲು ಸಹಾಯ ಮಾಡಿತು.

# ವಿಜಯದಶಮಿ ಬಳಿಕ ಬೀದಿಗಿಳಿದು ಹೋರಾಟ

## ಸಿದ್ದರಾಮಯ್ಯ ಅವರೇ ನಿಮ್ಮ ರಕ್ತ ಕುದಿಯುತ್ತಿಲ್ವಾ: ಬೇಸರ ಹೊರಹಾಕಿದ ಹೆಚ್.ಡಿ. ಕುಮಾರಸ್ವಾಮಿ

• ಉದಯವಾಹಿನಿ, ಬೆಂಗಳೂರು

ಅತ್ಯಂತ ಅಪಮಾನಕರವಾಗಿ ಅಧಿಕಾರದಿಂದ ಕೆಳಗಿಳಿದ ಸಿದ್ದರಾಮಯ್ಯನವರಿಗೆ ತಮ್ಮ ವಿರುದ್ಧ ನಡೆದಿರುವ ಸಂಚಿನ ಬಗ್ಗೆ ರಕ್ತ ಕುದಿಯುತ್ತಿಲ್ಲವೇ ಎಂದು ಕೇಂದ್ರ ಸಚಿವ ಹೆಚ್. ಡಿ. ಕುಮಾರಸ್ವಾಮಿ ಅವರು ಪ್ರಶ್ನಿಸಿದರು.

ಸ್ಟಿಂಗ್‌ನಲ್ಲಿ ಭಾಗಿಯಾಗಿರುವ ಖಾಸಗಿ ವಾಹಿನಿ ಮುಖ್ಯಸ್ಥ ಮತ್ತು ಆತನ ಸಂಗಡಿಗರನ್ನು ಬಂಧಿಸಲು ಒತ್ತಾಯಿಸಿ ಬೆಂಗಳೂರಿನಲ್ಲಿ ಪೊಲೀಸ್ ಮಹಾನಿರ್ದೇಶಕರ ಕಚೇರಿ ಆವರಣದಲ್ಲಿ ಶನಿವಾರ ಮಾಧ್ಯಮಗಳು ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರಿಸಿದರು.

ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಸಿದ್ದರಾಮಯ್ಯನವರು ಮೌನದಿಂದ ಇರುವ ವ್ಯಕ್ತಿಯಲ್ಲ. ತಮ್ಮ ವಿರುದ್ಧ ಅನ್ಯಾಯ ನಡೆದರೆ ಸಹಿಸುವ ಜಾಯಮಾನದವರಲ್ಲ. ತಮ್ಮ ವಿರುದ್ಧ ರಾಜ್ಯದ ಈಗಿನ ಮುಖ್ಯಮಂತ್ರಿ ಮತ್ತು ಕಿಡಿಗೇಡಿಗಳು ಸೇರಿ ನಡೆಸಿದ ಸಂಚಿನ ಕುರಿತಂತೆ ಅವರು ಮೌನ ವಹಿಸಿರುವುದು ನನಗೆ ನೋವು ತಂದಿದೆ ಎಂದು ಸಚಿವರು ಹೇಳಿದರು. ಈ ವಿಷಯವನ್ನು ನಾನು ಇಲ್ಲಿಗೆ ಬಿಡುವ ಪ್ರಶ್ನೆ ಇಲ್ಲ. ಈಗಾಗಲೇ ಪೊಲೀಸ್ ಆಯುಕ್ತರಿಗೆ, ಇಂದು ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿದ್ದೇವೆ. ಇದರ ಮೇಲೆ ಪೊಲೀಸರು ಕ್ರಮ ಜರುಗಿಸದೆ ಇದ್ದರೆ ಮುಂದೆ ಏನು ಮಾಡಬೇಕು ಎಂಬುದನ್ನು ತೀರ್ಮಾನ ಮಾಡುತ್ತೇವೆ. ಸ್ಟಿಂಗ್ ಮಾಡಿದ ಕಿರಾತಕರನ್ನು ಬಂಧಿಸದ ಹೊರತು ನಾವು ವಿಶ್ರಮಿಸುವುದಿಲ್ಲ ಎಂದು ಅವರು ಎಚ್ಚರಿಕೆ ನೀಡಿದರು.



ಪೊಲೀಸ್ ಮಹಾನಿರ್ದೇಶಕರಿಗೆ ಸುದೀರ್ಘ ದೂರನ್ನು ಕೊಟ್ಟಿದ್ದೇವೆ. ನಡೆದಿರುವ ಅಕ್ರಮಗಳು, ರಹಸ್ಯ ಕಾರ್ಯಾಚರಣೆ ಹೆಸರಿನಲ್ಲಿ ಮಾಡಿರುವ ಹಣ ವಸೂಲಿ ರಾಜಕಾರಣಗಳು, ಪೊಲೀಸರು ಮತ್ತು ಸರ್ಕಾರದ ಅಧಿಕಾರಿಗಳನ್ನು ಹೆದರಿಸಿ ಬೆದರಿಸಿ ಬ್ಲ್ಯಾಕ್ ಮೇಲ್ ಮಾಡಿರುವ ಎಲ್ಲಾ ಅಂಶಗಳನ್ನು ಅವರಿಗೆ ಮನವರಿಕೆ ಮಾಡಿದ್ದೇವೆ. ಅವನ ಬಂಧನಕ್ಕೆ ಪೊಲೀಸರು ಕ್ರಮ ಕೈಗೊಳ್ಳದೆ ಇದ್ದರೆ ವಿಜಯದಶಮಿ ನಂತರ ಸ್ವತಃ ನಾನೇ ಮತ್ತೊಮ್ಮೆ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ ಎಂದು ಸಚಿವರು ನೇರ ಎಚ್ಚರಿಕೆ ನೀಡಿದರು.ಸಿದ್ದರಾಮಯ್ಯ ಅವರಿಗೆ ರಕ್ತ ಕುದಿಯುತ್ತಿಲ್ಲವೆ ಎಂದು ಮತ್ತೆ ಮತ್ತೆ ಕೇಳಿದ ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ಅವರ ವರ್ಚಸ್ಸು ಹಾಳು ಮಾಡಲು ಈ ಸ್ಟಿಂಗ್ ಆಪರೇಷನ್ ಮಾಡಲಾಗಿದೆ. ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ. ಆದರೆ ಅವರ ಹೆಸರನ್ನು ಹಾಳು ಮಾಡಲು, ಆ ಮೂಲಕ ಹಣ ವಸೂಲಿ ಮಾಡಲು ಈ ವಿಡಿಯೋ ಮಾಡಲಾಗಿದೆ ಎಂದರು.

### ಆ ಕ್ರಿಮಿನಲ್‌ಗೆ ಕರ್ನಾಟಕ ರತ್ನ ಪ್ರಶಸ್ತಿ ಕೊಟ್ಟುಬಿಡಿ

ಡಿಜಿ ಅವರು ನಾವು ಕೊಟ್ಟ ದೂರನ್ನು ಮೌನದಿಂದ ಸ್ವೀಕಾರ ಮಾಡಿದ್ದಾರೆ. ಪೊಲೀಸ್ ಆಯುಕ್ತರದ್ದು ಆಯಿತು, ಈಗ ಡಿಜಿ ಏನು ಮಾಡುತ್ತಾರೋ ನೋಡೋಣ. ಮಂತ್ರಿಗಳ ವಿರುದ್ಧ ಸ್ಟಿಂಗ್ ಮಾಡಲಾಗಿದೆ ಮುಖ್ಯಮಂತ್ರಿಯೇ ಸಂಪುಟ ಸಭೆಯಲ್ಲಿ ಹೇಳುತ್ತಾರೆ ಎಂದರೆ ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಇನ್ನೊಂದು ಇದೆಯೇ? ಎಂದು ಸಚಿವರು ಕಿಡಿಕಾರಿದರು. ಮಂತ್ರಿಗಳು ಮತ್ತು ಶಾಸಕರನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳಲು ಈ ಮುಖ್ಯಮಂತ್ರಿ ಆರೋಪಿ ನಕಲಿ ಪತ್ರಕರ್ತನನೊಂದಿಗೆ ಜತೆ ಸೇರಿ ಸ್ಟಿಂಗ್ ರೀತಿಯ ಹೀನ ಕೃತಿಗಳನ್ನು ಎಸಗುತ್ತಿದ್ದಾರೆ. ಇಷ್ಟೆಲ್ಲಾ ಆದರೂ ಗೃಹಮಂತ್ರಿ ರಾಜಾರೋಷವಾಗಿ ಲಜ್ಜೆಗೆಟ್ಟು ಮಾತನಾಡುತ್ತಿದ್ದಾರೆ. ಇನ್ನು ಪೊಲೀಸರಿಂದ ನಾವು ಏನು ನಿರೀಕ್ಷೆ ಮಾಡಲು ಸಾಧ್ಯ, ಈ ಸರ್ಕಾರ ಸ್ಟಿಂಗ್ ನಡೆಸುವ ಅಪರಾಧಿಗೆ ಹೆದರಿ ಕೂತಿದೆ.

ಈ ದಿನದ ದರ | ಪೆಟ್ರೋಲ್: 111.68 ₹/L | ಡೀಸೆಲ್ : 99.56 ₹/L | ಬಂಗಾರ: ₹14,766/Gram24ct ₹13,535/Gram22ct | ಬೆಳ್ಳಿ: ₹230.00/Gram

# ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಪುಸ್ತಕಗಳ ಆಯ್ಕೆಪಟ್ಟಿಯಲ್ಲಿ 'ಕನ್ನಡ ನಾಡಿನ ಹೆಮ್ಮೆ ಶ್ರೀ ಮಧ್ವಾಚಾರ್ಯರು' ಕೃತಿಗೆ ಮನ್ನಣೆ

• **ಉದಯವಾಹಿನಿ, ಬೆಂಗಳೂರು:**

ಕನ್ನಡ ನಾಡಿನ ಹೆಮ್ಮೆಯ ಮಹಾನ್ ದಾರ್ಶನಿಕರಾದ ಶ್ರೀ ಮಧ್ವಾಚಾರ್ಯರ ಜೀವನ, ಸಾಧನೆ ಹಾಗೂ ತತ್ತ್ವಚಿಂತನೆಗಳನ್ನು ಪರಿಚಯಿಸುವ ಉದ್ದೇಶದಿಂದ ರಚಿಸಲಾದ 'ಕನ್ನಡ ನಾಡಿನ ಹೆಮ್ಮೆ ಶ್ರೀ ಮಧ್ವಾಚಾರ್ಯರು' ಕೃತಿಯು ಕರ್ನಾಟಕ ಸರ್ಕಾರದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ 2023ನೇ ಸಾಲಿನ ಪುಸ್ತಕಗಳ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ಬೆಂಗಳೂರಿನ ಅನ್ನಪೂರ್ಣ ಪಬ್ಲಿಷಿಂಗ್ ಹೌಸ್ ಪ್ರಕಟಿಸಿರುವ ವಿದ್ಯಾ ವಾಚಸ್ಪತಿ ಡಾ. ಕವಿತಾ ಕೃಷ್ಣ ಮಕ್ಕಳ ಮಾಲಿಕೆಯಲ್ಲಿ ಲೇಖಕ ಡಾ. ಗುರುರಾಜ ಪೋಶೆಟ್ಟಿಹಳ್ಳಿ ಅವರು ರಚಿಸಿರುವ ಈ ಕೃತಿಯಲ್ಲಿ ಆಚಾರ್ಯ ಮಧ್ವರ ಜೀವನ, ಸಾಧನೆ, ತತ್ತ್ವಜ್ಞಾನ ಮತ್ತು ಆಧ್ಯಾತ್ಮಿಕ ಸಂದೇಶಗಳನ್ನು ಸರಳ ಭಾಷೆಯಲ್ಲಿ ಪರಿಚಯಿಸುವುದು ಕನ್ನಡಿಗರ



ಉದಯವಾಹಿನಿ ಚಿತ್ರ

ಸಾಂಸ್ಕೃತಿಕ ಹಾಗೂ ಬೌದ್ಧಿಕ ಪರಂಪರೆಯನ್ನು ಅರಿಯಲು ಸಹಕಾರಿಯಾಗಿದೆ. 'ಕನ್ನಡ ನಾಡಿನ ಹೆಮ್ಮೆ ಶ್ರೀ ಮಧ್ವಾಚಾರ್ಯರು' ಎಂಬ ಶೀರ್ಷಿಕೆಯೇ ನಾಡಿನ ದಾರ್ಶನಿಕ ಪರಂಪರೆಯ ಬಗ್ಗೆ ಹೊಂದಿರುವ ಗೌರವವನ್ನು ಪ್ರತಿಬಿಂಬಿಸುತ್ತದೆ.ಮಹಾನ್ ದಾರ್ಶನಿಕರ ಜೀವನ ಮತ್ತು ತತ್ತ್ವಚಿಂತನೆಗಳನ್ನು ಸಾಹಿತ್ಯದ ಮೂಲಕ ಜನರಿಗೆ ಪರಿಚಯಿಸುವುದು ಕೇವಲ ಬರವಣಿಗೆಯ ಕೆಲಸವಲ್ಲ ಅದು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ, ಮುಂದಿನ ಪೀಳಿಗೆಗೆ ತಲುಪಿಸುವ ಮಹತ್ವದ ಜವಾಬ್ದಾರಿಯೂ ಹೌದು.

**ಪರಂಪರೆಯ ಸಂರಕ್ಷಣೆಗೆ ಸಾಹಿತ್ಯವೇ ಸೇತುವೆ**

ನಮ್ಮ ನಾಡಿನ ಮಹಾನ್ ದಾರ್ಶನಿಕರು, ಸಂತರು ಮತ್ತು ಚಿಂತಕರ ಜೀವನ ಹಾಗೂ ಸಂದೇಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವಲ್ಲಿ ಸಾಹಿತ್ಯದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇಂತಹ ಕೃತಿಗಳು ಓದುಗರಿಗೆ ಜ್ಞಾನವನ್ನು ಒದಗಿಸುವುದರ ಜೊತೆಗೆ, ನಾಡಿನ ಪರಂಪರೆ ಮತ್ತು ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಗುತ್ತವೆ.ಈ ನಿಟ್ಟಿನಲ್ಲಿ ಗ್ರಂಥಾಲಯಗಳು ಉತ್ತಮ ಸಾಹಿತ್ಯವನ್ನು ಓದುಗರಿಗೆ ತಲುಪಿಸುವ ಪ್ರಮುಖ ಮಾಧ್ಯಮಗಳಾಗಿವೆ. ಶ್ರೀ ಮಧ್ವಾಚಾರ್ಯರ ಜಯಂತಿಯನ್ನು ರಾಜ್ಯ ಸರ್ಕಾರದ ವತಿಯಿಂದ ಆಚರಿಸುವ ಕುರಿತು ಅಧಿಕೃತ ಘೋಷಣೆ ಸಂತಸದ ಸಂದರ್ಭದಲ್ಲಿ 'ಕನ್ನಡ ನಾಡಿನ ಹೆಮ್ಮೆ ಶ್ರೀ ಮಧ್ವಾಚಾರ್ಯರು' ಕೃತಿಗೆ ದೊರೆತಿರುವ ಈ ಮನ್ನಣೆಯು ಲೇಖಕರಿಗೆ ಮತ್ತಷ್ಟು ಉತ್ತಮ ಕೃತಿಗಳನ್ನು ರಚಿಸಲು ಪ್ರೇರಣೆಯಾಗಲಿ. ಶ್ರೀ ಮಧ್ವಾಚಾರ್ಯರ ತತ್ತ್ವಜ್ಞಾನ ಮತ್ತು ಆಧ್ಯಾತ್ಮಿಕ ವಿಚಾರಧಾರೆಗಳು ಕನ್ನಡ ಸಾಹಿತ್ಯದ ಮೂಲಕ ವ್ಯಾಪಕವಾಗಿ ಜನರನ್ನು ತಲುಪಲಿ ಎಂಬುದು ಸಾಹಿತ್ಯಾಸಕ್ತರ ಆಶಯವಾಗಿದೆ.

## ಕೀರ್ತನ - ನರ್ತನ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು :**

ಮಲ್ಲೇಶ್ವರದ ಈಸ್ಟ್ ಪಾರ್ಕ್ ರಸ್ತೆಯಲ್ಲಿರುವ ಶ್ರೀ ರಾಮ ಮತ್ತು ಶ್ರೀ ರಾಜರಾಜೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಶರನ್ನವರಾತ್ರೋತ್ಸವದ ಅಂಗವಾಗಿ ಅಕ್ಟೋಬರ್ 19, ಸೋಮವಾರ ಸಂಜೆ 6-30ಕ್ಕೆ ವಿದುಷಿ ಕುಮಾರಿ ರಚನಾ ಶರ್ಮಾ ಮತ್ತು ಸಂಗಡಿಗರಿಂದ ಹರಿನಾಮ ಸಂಕೀರ್ತನ ಮತ್ತು ಅಕ್ಟೋಬರ್ 20, ಮಂಗಳವಾರ ಸಂಜೆ 6-30ಕ್ಕೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯೆ ಹಾಗೂ ನೃತ್ಯ ಕಲಾವಿದೆಯಾದ ಉಷಾ ಬಸಪ್ಪ ಅವರ ನಿರ್ದೇಶನದಲ್ಲಿ ಪದ್ಮಿನಿಪ್ರಿಯ ನೃತ್ಯ ಅಕಾಡೆಮಿಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸ್ಥಳ : ಶ್ರೀ ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಅಂಚೆ ಕಚೇರಿ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು-560003

## ದೊಡ್ಡ ಬನಹಳ್ಳಿಯಲ್ಲಿ ಮೂರನೇ ವರ್ಷದ ದುರ್ಗಾದೇವಿ ಪ್ರತಿಷ್ಠಾಪನೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ದೊಡ್ಡಬನಹಳ್ಳಿ ಸಾರ್ವಜನಿಕ ಸಾಂಸ್ಕೃತಿಕ ಸಮಿತಿಯ ವತಿಯಿಂದ ಮೂರನೇ ವರ್ಷದ ದುರ್ಗಾದೇವಿ ಪ್ರತಿಷ್ಠಾಪನೆ ಹಾಗೂ ನವರಾತ್ರಿ ಉತ್ಸವವನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಐದು ದಿನಗಳ ಕಾಲ ನಡೆಯುವ ಉತ್ಸವದಲ್ಲಿ ವಿವಿಧ ಧಾರ್ಮಿಕ ಪೂಜೆಗಳು ಹಾಗೂ ದಾಂಡಿಯ, ಧುನುಚಿ ನೃತ್ಯ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಉತ್ಸವದ ಅಂಗವಾಗಿ ವಿಘ್ನೇಶ್ವರ, ಕಾರ್ತಿಕೇಯ, ಲಕ್ಷ್ಮೀದೇವಿ ಹಾಗೂ ಸರಸ್ವತಿದೇವಿಯ ಆರಾಧನೆ ಸೇರಿದಂತೆ ಷಷ್ಠಿ, ಸಪ್ತಮಿ, ಮಹಾ ಅಷ್ಟಮಿ, ಮಹಾನವಮಿ ಮತ್ತು ವಿಜಯದಶಮಿಯ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆದವು. ಭಕ್ತರು ದೇವಿಯ ದರ್ಶನ ಪಡೆದು ಪೂಜೆಯಲ್ಲಿ ಪಾಲ್ಗೊಂಡರು. 21 ಅಸೋಸಿಯೇಷನ್ ಹಾಗೂ ವಿ.ಎನ್.ಎಸ್ ಮಾನವ ಶಕ್ತಿ ಮತ್ತು ಸೌಲಭ್ಯ ಸೇವೆ ಸಂಸ್ಥೆ ಉತ್ಸವದ ನೇತೃತ್ವವನ್ನು ವಹಿಸಿತ್ತು. ಸಮಿತಿಯ ಅಧ್ಯಕ್ಷ ಭಾಸ್ಕರ ಪ್ರಿಯಾದರ್ಶಿ, ದುರ್ಗಾದೇವಿಯ ವಿಗ್ರಹವನ್ನು ದೇಣಿಗೆ ನೀಡಿದ ಬಿಮಲ್ ಖರ್ಕಾ, ಕಾರ್ಯದರ್ಶಿ ವಿಕಾಸ್ ಪಾಂಡೆ ಹಾಗೂ ಸಂಗಡಿಗರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಸಿಎಂರನ್ನೂ ಟ್ರ್ಯಾಪ್ ಮಾಡಿರಬಹುದು ಎಂಬ ಅನುಮಾನ ಇದೆ: ಹೆಚ್.ಡಿ. ಕೆ

## ಪ್ರಜಾಪ್ರಭುತ್ವದಲ್ಲಿ ಯಾರೂ ಯಾವ ಹುದ್ದೆ ಪಡೆಯಲು ಅವಕಾಶ ಇದೆ. ಅದು ಅಕ್ರಮ ಮುಚ್ಚಿಹಾಕಲು ಇರುವ ಹುದ್ದೆ ಅಲ್ಲ

• **ಉದಯವಾಹಿನಿ, ಬೆಂಗಳೂರು:**

ಸಿಎಂ ಅವರನ್ನೂ ಸ್ಟಿಂಗ್ ಮಾಡಿ ಟ್ರ್ಯಾಪ್ ಮಾಡಿರುವ ಅನುಮಾನ ಇದೆ. ಈಗ ನಡೆದಿರುವ ವಾತಾವರಣ ಗಮನಿಸಿದರೆ, ಇಡೀ ಸರ್ಕಾರ ಆ ವ್ಯಕ್ತಿಗೆ ಸರೆಂಡರ್ ಆಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಲೋಕಭವನದಲ್ಲಿ ನೂತನ ರಾಜ್ಯಪಾಲರ ಭೇಟಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈ ಸ್ಟಿಂಗ್ ಆಪರೇಷನ್‌ಗೆ ಸಂಪೂರ್ಣ ತೆರೆ ಎಳೆಯಬೇಕು.

**1.ಸ್ಟಿಂಗ್ ಮಾಡಿ ಟ್ರ್ಯಾಪ್ ಮಾಡಿರುವ ಅನುಮಾನ**
**2.ಆಪರೇಷನ್‌ಗೆ ಸಂಪೂರ್ಣ ತೆರೆ ಎಳೆಯಬೇಕು.**
**3.ದುಡ್ಡು ಹೊಡೆಯುವ ದಂಧೆ ನಡೆಸುತ್ತಿದ್ದಾರೆ**

ಮಾಧ್ಯಮದ ಹೆಸರಲ್ಲಿ ಕೆಲವರಿಂದ ಮಾಧ್ಯಮಕ್ಕೆ ಕಳಂಕ ತರುವ ಕೆಲಸ ಆಗುತ್ತಿದೆ. ರಾಜ್ಯ, ಈ ದೇಶ ಪತ್ರಿಕೋದ್ಯಮಕ್ಕೆ ಮಾದರಿಯಾಗಿತ್ತು. ದುಡ್ಡು ಹೊಡೆಯುವ ದಂಧೆ ನಡೆಸುತ್ತಿದ್ದಾರೆ. ಮಾಧ್ಯಮದ ಶೆಲ್ಟರ್‌ನಲ್ಲಿ ಇದನ್ನೆಲ್ಲ ಮಾಡುತ್ತಿದ್ದಾರೆ. ಸಿಎಂನೂ ಒಳಗೊಂಡಂತೆ ಟ್ರ್ಯಾಪ್ ಮಾಡಿ ಕೈಗೊಂಬೆ ಮಾಡಿಟ್ಕೊಂಡಿರಬಹುದು ಎಂದು ಅನುಮಾನ ' ವ್ಯಕ್ತಪಡಿಸಿದರು. ಅವನ ನಡವಳಿಕೆ ನೋಡಿದರೆ, ಸಿಎಂ ಅವರನ್ನೂ ಟ್ರ್ಯಾಪ್ ಮಾಡಿರಬಹುದು ಅನ್ನೋ ಅನುಮಾನ ಇದೆ. ಆ ವ್ಯಕ್ತಿಗೆ ಸರ್ಕಾರ ಸರೆಂಡರ್ ಆಗಿದೆ. ಸರ್ಕಾರ ಆ ವ್ಯಕ್ತಿಗೆ ಹೆದರಿದೆ. ಆ ವ್ಯಕ್ತಿ ಪೊಲೀಸರ ಮುಂದೆ ಕಾಲ್ ಮೇಲೆ ಕಾಲು ಹಾಕಿಕೊಂಡು ಕೂರುತ್ತಾರೆ. ಯಾಕೆ ಆ ವ್ಯಕ್ತಿಗೆ ಸರ್ಕಾರ ಸರೆಂಡರ್ ಆಗಿದೆ, ಎಲ್ಲದಕ್ಕೂ ಕಾಲ ಉತ್ತರ ಕೊಡಲಿದೆ ಎಂದರು. ಸಿಜೆಪಿ ಬಗ್ಗೆ ಗೃಹ ಸಚಿವರು ಹೇಳಿದ್ದಾರೆ. ಬೆಂಗಳೂರು ಸೇರಿ ಇಲ್ಲಿ ಎಲ್ಲಾ ಪ್ರತಿಭಟನೆಗಳು ಆಗುತ್ತಿವೆಯಲ್ಲ. ಎಷ್ಟು ಫಂಡ್ ಕೊಡುತ್ತಿದ್ದಾರೆ, ಅದನ್ನು ಅವರೇ ಹೇಳಬೇಕು.


ಉದಯವಾಹಿನಿ ಚಿತ್ರ

> ನಮ್ಮ ಪಕ್ಷದ ಶಾಸಕರ ಮಿತ್ರರು ಗೌರವಾನ್ವಿತ ರಾಜ್ಯಪಾಲರನ್ನು ಭೇಟಿ ಮಾಡಿದ್ದೇವೆ. ನಿನ್ನೆ ರಾಜ್ಯಪಾಲರು ಅಧಿಕಾರ ಸ್ವೀಕಾರ ಮಾಡಿದ್ದಾರೆ. ಅವರಿಗೆ ಶುಭ ಕೋರಿದ್ದೇವೆ. ಈ ಭೇಟಿಯಲ್ಲಿ ಯಾವುದೇ ರಾಜಕೀಯ ಚರ್ಚೆ ಮಾಡಲಿಲ್ಲ. ಆಡಳಿತದಲ್ಲಿ ದೇಶಕ್ಕೆ ಕರ್ನಾಟಕ ಮಾದರಿಯಾಗಿತ್ತು. ಈಗ ಈ ರಾಜ್ಯ ದಾರಿ ತಪ್ಪಿದೆ, ಮುಂದೆ ಇದನ್ನೆಲ್ಲ ಗಮನಿಸಿ ಸರಿ ದಾರಿಗೆ ತರಲು ಅವರಿಗೆ ಮನವಿ ಮಾಡಿದ್ದೇವೆ ಎಂದು ತಿಳಿಸಿದರು. - ಹೆಚ್‌ಡಿಕೆ

### ಜೆಡಿಎಸ್ ನಿಯೋಗದಿಂದ ರಾಜ್ಯಪಾಲರ ಭೇಟಿ

ಇದಕ್ಕೂ ಮುನ್ನ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಜೆಡಿಎಸ್ ಪಕ್ಷದ ಎಲ್ಲಾ ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ರಾಜ್ಯದ ನೂತನ ರಾಜ್ಯಪಾಲರನ್ನು ಭೇಟಿಯಾಗಿ ಶುಭಾಶಯ ಕೋರಿದರು.

ನಾನು ಗೃಹ ಸಚಿವರ ಹುದ್ದೆ ಮೇಲೆ ಕಣ್ಣು ಹಾಕಿಲ್ಲ. ನಮ್ಮ ಕುಟುಂಬದಲ್ಲಿ ಏಳೆಂಟು ಹುದ್ದೆ ಎಲ್ಲಿದೆ? ಪ್ರಜಾಪ್ರಭುತ್ವದಲ್ಲಿ ಯಾರೂ ಯಾವ ಹುದ್ದೆ ಪಡೆಯಲು ಅವಕಾಶ ಇದೆ. ಅದು ಅಕ್ರಮ ಮುಚ್ಚಿಹಾಕಲು ಇರುವ ಹುದ್ದೆ ಅಲ್ಲ ಎಂದು ವಾಗ್ದಾಳಿ ನಡೆಸಿದರು.

**ಅಲೋಕ್ ಕುಮಾರ್ ಬಗ್ಗೆ ಸಿಎಸ್ ತೀರ್ಮಾನಿಸಬೇಕು:** ಗೃಹ ಸಚಿವರಾಗಿ ನಿಮ್ಮ ಜಿಲ್ಲೆಯಲ್ಲಿ ಆಗಿರುವ ಘಟನೆಗಳಲ್ಲಿ ಎಷ್ಟು ಪರಿಹಾರ ಮಾಡಿಸಿದ್ದೀರಿ? ನಿಮಗೆ ಸರ್ಟಿಫಿಕೆಟ್ ಸಿಗುವುದು ನೀವು ರಕ್ಷಣೆ ಕೊಡುವಂತಹವರಿಂದಲೇ. ಅಲೋಕ್ ಕುಮಾರ್ ವಿಚಾರದಲ್ಲಿ ಮುಖ್ಯ ಕಾರ್ಯದರ್ಶಿ ತೀರ್ಮಾನ ತೆಗೆದುಕೊಳ್ಳಬೇಕು. ಯಾಕೆ ಅವರನ್ನು ತನಿಖಾ ತಂಡದ ಮುಖ್ಯಸ್ಥರಾಗಿ ಮಾಡಲು ಸರ್ಕಾರಕ್ಕೆ ಇಷ್ಟವಿಲ್ಲ? ಸುಳ್ಳು ಮಾಹಿತಿ, ನಕಲಿ ಮಾಹಿತಿ ಕೊಡುವುದರಲ್ಲಿ ನೀವು ಎಕ್ಸ್‌ಪರ್ಟ್ ಎಂದು ಹೆಚ್‌ಡಿಕೆ ಕಿಡಿಕಾರಿದರು.

**ಡಿಕೆಶಿ - ಸಿದ್ದರಾಮಯ್ಯ ಭೇಟಿ ತಪ್ಪಿಲ್ಲ:** ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯರ ಭೇಟಿಯಲ್ಲಿ ತಪ್ಪಿಲ್ಲ. ಹಾಲಿ, ಮಾಜಿ ಸಿಎಂಗಳು ಚರ್ಚೆ ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿ ಇಟ್ಟುಕೊಂಡೇ ಸ್ಟಿಂಗ್ ಮಾಡಿದ್ದಾರೆ. ಸಿದ್ದರಾಮಯ್ಯ ದೂರು ಕೊಟ್ಟಿದ್ದಾರೆ. ಸಿದ್ದರಾಮಯ್ಯ ಅವರನ್ನು ಡಿಕೆಶಿ ಭೇಟಿ ಮಾಡಿದ್ದಾರೆ. ಏನು ಚರ್ಚೆ ಮಾಡಿದ್ದಾರೆ ಸಿದ್ದರಾಮಯ್ಯ ಸ್ಟಿಂಗ್ 2023ರಲ್ಲಿ ಆಗಿದೆ. ಅದು 2011ರದ್ದು ಎಂದುಕೊಂಡಿದ್ದೆ. ಕೆಲವು ಸ್ನೇಹಿತರು 2023ರದ್ದು ಅಂದಿದ್ದಾರೆ. ಕಾನೂನಾತ್ಮಕವಾಗಿ ಏನಾಗುತ್ತೋ ನೋಡಬೇಕು ಎಂದರು.

## ಬೆಂಗಳೂರಿನ 16 ಲಕ್ಷ ಮನೆಗಳಿಗೆ ಉಚಿತ ವಿದ್ಯುತ್ ಬಂದ್!

• **ಉದಯವಾಹಿನಿ, ಬೆಂಗಳೂರು:**



ಉದಯವಾಹಿನಿ ಚಿತ್ರ

ರಾಜ್ಯ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಗೃಹ ಜ್ಯೋತಿ ಫಲಾನುಭವಿಗಳಿಗೆ ಶಾಕ್! ಬೆಂಗಳೂರಿನಲ್ಲಿ ಗೃಹ ಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಪಡೆಯುತ್ತಿರುವ ಸುಮಾರು 16 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಯೋಜನೆಯಿಂದ ಹೊರಗುಳಿಯುವ ಸಾಧ್ಯತೆ ಇದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ಒಟ್ಟು 69 ಲಕ್ಷ ಫಲಾನುಭವಿಗಳಿದ್ದಾರೆ. ಬೆಸ್ಕಾಂ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿ ಫಲಾನುಭವಿಗಳ ದಾಖಲೆಗಳನ್ನು ಮರು ಪರಿಶೀಲಿಸುವಾಗ 16.09 ಲಕ್ಷ ಮನೆಗಳು ಬೀಗ ಹಾಕಿದ ಸ್ಥಿತಿಯಲ್ಲಿದ್ದವು ಹಾಗೂ 28,519 ಮನೆಗಳು ಖಾಲಿ ಇದ್ದವು. ಮೀಟರ್ ರೀಡರ್‌ಗಳು ಹಾಗೂ ಬೆಸ್ಕಾಂ ಸಿಬ್ಬಂದಿ ಮೂರಕ್ಕೂ ಹೆಚ್ಚು ಬಾರಿ ಮನೆಗಳಿಗೆ ಭೇಟಿ ನೀಡಿದರೂ ಮಾಹಿತಿ ಸಿಕ್ಕಿಲ್ಲ. ಹಾಗಾಗಿ, ಈ ಮನೆಗಳಲ್ಲಿ ದಾಖಲೆಗಳ ಪರಿಶೀಲನೆ ಸಾಧ್ಯವಾಗದ ಕಾರಣ, ಇವರೆಲ್ಲರನ್ನೂ ತಾತ್ಕಾಲಿಕವಾಗಿ ಯೋಜನೆಯಿಂದ ಹೊರಗಿಡುವ ಸಾಧ್ಯತೆ ದಟ್ಟವಾಗಿದೆ. ಅದರಲ್ಲೂ, ಬಹುತೇಕ ಮನೆಗಳಿಗೆ ಬೀಗ ಹಾಕಿರುವುದು ಅಥವಾ ಬಾಡಿಗೆದಾರರು ಮನೆ ಖಾಲಿ ಮಾಡಿ ಬೇರೆಡೆ ತೆರಳಿರುವುದು ಇದಕ್ಕೆ ಮುಖ್ಯ ಕಾರಣ ಎನ್ನಲಾಗಿದೆ. ಇದರೊಂದಿಗೆ, ಸುಮಾರು 5.5 ಲಕ್ಷ ಗ್ರಾಹಕರು ತಮ್ಮ ವೈಯಕ್ತಿಕ ವಿವರ ಹಾಗೂ ದಾಖಲೆಗಳನ್ನು ಸಿಬ್ಬಂದಿಯೊಂದಿಗೆ ಹಂಚಿಕೊಳ್ಳಲು ನಿರಾಕರಿಸಿದ್ದಾರೆ.ಬೀಗ ಹಾಕಿದ ಮನೆಯ ಮಾಲೀಕರು ಮತ್ತು ಬಾಡಿಗೆದಾರರಿಗೆ ಅನುಕೂಲ ಮಾಡಿಕೊಡಲು ಬೆಸ್ಕಾಂ ಅಕ್ಟೋಬರ್ 31, 2026 ರವರೆಗೆ ಅಂತಿಮ ಗಡುವನ್ನು ವಿಸ್ತರಿಸಿದೆ. ಇದು ಸರ್ಕಾರ ನೀಡುತ್ತಿರುವ ಕೊನೆಯ ಮತ್ತು ಏಕೈಕ ಅವಕಾಶವಾಗಿದ್ದು, ಇಂಧನ ಇಲಾಖೆಯು ಮತ್ತೊಮ್ಮೆ ಈ ಪ್ರಕ್ರಿಯೆಯನ್ನು ನಡೆಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

## ಕಣ್ಣು ಹಾಯಿಸಿದಷ್ಟೂ ಕಸದ ರಾಶಿ, ಗಬ್ಬು ನಾರುವ ತ್ಯಾಜ್ಯ

• **ಉದಯವಾಹಿನಿ, ಬೆಂಗಳೂರು:**

ಕಣ್ಣು ಹಾಯಿಸಿದಷ್ಟೂ ಕಸದ ರಾಶಿ, ಗಬ್ಬು ನಾರುವ ತ್ಯಾಜ್ಯ, ಸಾರ್ವಜನಿಕರು ಸಂಚರಿಸಲು ಯೋಗ್ಯವಲ್ಲದ ರಸ್ತೆಗಳು.ಇದು ಸೊಣ್ಣೆನಹಳ್ಳಿ ಸಮೀಪದ ಶಿರಡಿ ಸಾಯಿಬಾಬಾ ದೇವಸ್ಥಾನ ಸುತ್ತಮುತ್ತಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಬಡಾವಣೆಯ ರಸ್ತೆಗಳ ನೋಟ. ಎಲ್ಲ ರಸ್ತೆಗಳಲ್ಲಿ ಹಸಿ, ಒಣಗಿದ ತ್ಯಾಜ್ಯ, ಆಸ್ಪತ್ರೆ, ಅಪಾರ್ಟ್‌ಮೆಂಟ್ ಹೋಟೆಲ್, ವಾಣಿಜ್ಯ ಮಳಿಗೆಗಳಿಂದ ತಂದು ಸುರಿದಿರುವ ತ್ಯಾಜ್ಯ ಕಣ್ಣಿಗೆ ರಾಚುತ್ತಿದೆ. ಮೂಟೆಗಳಲ್ಲಿ ತಂದು ಬಿಸಾಡಿರುವ ಕಸದ ರಾಶಿ, ಕೋಳಿ, ಮೇಕೆ ಕುರಿ ತ್ಯಾಜ್ಯ, ಕರುಳು, ಮೂಳೆಗಳನ್ನು ತಂದು ಸುರಿಯುವುದರಿಂದ ಕೊಳೆತ ಮಾಂಸ, ತ್ಯಾಜ್ಯವನ್ನು ತಿನ್ನಲು ನಾಯಿಗಳು ಗುಂಪಾಗಿ ಸೇರುತ್ತಿವೆ. ಕಸ ತಿನ್ನಲು ಬಿಡಾಡಿ ಹಸುಗಳು ಸೇರುತ್ತಿವೆ. ಮನೆಯಲ್ಲಿ ಕೊಳೆತ, ಒಣಗಿದ ಹಣ್ಣು, ತರಕಾರಿ, ಸಾರು, ಅನ್ನ ಮತ್ತಿತರ ತ್ಯಾಜ್ಯ ಬಿಸಾಡುವುದರಿಂದಲೂ ಸೊಳ್ಳೆ ನೊಣಗಳ ಹಾವಳಿ, ಮತ್ತೊಂದೆಡೆ ಗಾಳಿ ಬೀಸಿದಾಗ ಬರುವ ದುರ್ವಾಸನೆಯಿಂದ ಅಕ್ಕಪಕ್ಕದ ನಿವಾಸಿಗಳು ಜೀವನ ಸಾಗಿಸುವುದು ದುಸ್ತರವಾಗಿದೆ ಎಂದು ಸಾರ್ವಜನಿಕರು ದೂರಿದರು. ಮನೆಗಳಿಂದ ಸಂಗ್ರಹಣೆ ಮಾಡುವ ಕಸ ಮತ್ತು ಬಹುಮಹಡಿ ಕಟ್ಟಡ, ಹೋಟೆಲ್‌ಗಳಿಂದ ಸಂಗ್ರಹಿಸುವ ತ್ಯಾಜ್ಯವನ್ನು ರಾತ್ರಿ ಸುರಿದು ಹೋಗುತ್ತಿದ್ದರೂ ಜಿಬಿಎ ಘನತ್ಯಾಜ್ಯ ನಿರ್ವಹಣೆ ವಿಭಾಗದ ಅಧಿಕಾರಿಗಳು ಯಾವುದೇ ಕ್ರಮಕೈಗೊಳ್ಳುತ್ತಿಲ್ಲ. ಬಿಡಿಎ ಬಡಾವಣೆ, ಸೊಣ್ಣೆನಹಳ್ಳಿ, ದೊಡ್ಡಬಸ್ತಿ


ಉದಯವಾಹಿನಿ ಚಿತ್ರ

### 'ಅನುದಾನ ನೀಡದ ಬಿಡಿಎ'

**ಬಡಾವಣೆಯ ನಾಗರಿಕರಿಂದ ಬಿಡಿಎ ತೆರಿಗೆ ವಸೂಲಿ ಮಾಡುತ್ತಿದೆ. ಆದರೆ, ಕಸವನ್ನು ಜಿಬಿಎ ಸಂಗ್ರಹ ಮಾಡಬೇಕು. ಕಸ ಸಂಗ್ರಹಿಸಲು ಜಿಬಿಎಗೆ ಬಿಡಿಎ ಅನುದಾನ ಬಿಡುಗಡೆ ಮಾಡಿಲ್ಲ. ಈ ಬಗ್ಗೆ ಬಿಡಿಎಗೆ ಪತ್ರ ಬರೆದಿದ್ದರೂ ಕ್ರಮಕೈಗೊಂಡಿಲ್ಲ ಎಂದು ಜಿಬಿಎ ಘನತ್ಯಾಜ್ಯ ವಿಭಾಗದ ಉಪ ವ್ಯವಸ್ಥಾಪಕ ಸಿದ್ದರಾಜೇಗೌಡ ಹೇಳಿದರು.**

ಸುತ್ತಮುತ್ತಲ ಜನರು ಕೆಮ್ಮು, ಜ್ವರ, ಅಸ್ತಮಾದಿಂದ ಬಳಲುತ್ತಿದ್ದು, ಖಾಸಗಿ ಆಸ್ಪತ್ರೆಗಳಿಗೆ ಸಾವಿರಾರು ರೂಪಾಯಿ ಕೊಟ್ಟು ಚಿಕಿತ್ಸೆ ಪಡೆಯುವಂತಾಗಿದೆ ಎಂದು ಸ್ಥಳೀಯರಾದ ಕವಿತಾ, ರಾಜಣ್ಣ, ಲಕ್ಷ್ಮಿದೇವಿ ಹೇಳಿದರು.

ಆಟೊ, ಲಾರಿಗಳಲ್ಲಿ ಕಟ್ಟಡದ ಅವಶೇಷ, ಹಸಿಕಸ, ಮಾಂಸದ ತ್ಯಾಜ್ಯ ತಂದು ಸುರಿದು ಹೋಗುತ್ತಾರೆ. ಅಧಿಕಾರಿಗಳ ಬೆಂಬಲ ಇಲ್ಲದೆ ಕಸ ಸುರಿಯಲು ಸಾಧ್ಯವಿಲ್ಲ ಎಂದು ಸ್ಥಳೀಯರು ಆರೋಪಿಸಿದರು.

## ವೈರಲ್ ವಿಡಿಯೋ ಮೂಲ ಪತ್ತೆಗೆ ಮುಂದಾದ ಸೈಬರ್ ಪೊಲೀಸರು

• **ಉದಯವಾಹಿನಿ, ಬೆಂಗಳೂರು**

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ನಡೆಸಿರುವುದಾಗಿ ಹೇಳಲಾದ 'ಸ್ಟಿಂಗ್ ಆಪರೇಷನ್' ಪ್ರಕರಣದ ತನಿಖೆಯನ್ನು ಬೆಂಗಳೂರು ನಗರ ಸೈಬರ್ ಕ್ರೈಂ ಪೊಲೀಸರು ತೀವ್ರಗೊಳಿಸಿದ್ದಾರೆ. ಸಿದ್ದರಾಮಯ್ಯ ಅವರು ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಮೂರು ಪ್ರಮುಖ ಆಯಾಮಗಳಲ್ಲಿ ತನಿಖೆಯನ್ನು ಮುಂದುವರಿಸಿದ್ದು, ವಿಡಿಯೋ ಅಪ್‌ಲೋಡ್ ಮಾಡಿರುವ ಐಡಿಗಳ ಕುರಿತು ಮಾಹಿತಿ ಕೋರಿ ಯೂಟ್ಯೂಬ್‌ಗೆ ಅಧಿಕೃತ ಇ-ಮೇಲ್ ಪತ್ರ ಬರೆದಿದ್ದಾರೆ. ಸಾಮಾಜಿಕ ಜಾಲತಾಣಗಳು ಹಾಗೂ ಯೂಟ್ಯೂಬ್‌ನಲ್ಲಿ ವೈರಲ್ ಆಗಿರುವ ವಿಡಿಯೋಗಳನ್ನು ಯಾವ ಯಾವ ಐಡಿಗಳು ಮತ್ತು ಖಾತೆಗಳಿಂದ ಅಪ್‌ಲೋಡ್ ಮಾಡಲಾಗಿದೆ ಎಂಬ ಸಂಪೂರ್ಣ ವಿವರಗಳನ್ನು ಒದಗಿಸುವಂತೆ ಕೋರಲಾಗಿದೆ. ಸಿದ್ದರಾಮಯ್ಯ ಅವರು ನೀಡಿರುವ ದೂರಿನಲ್ಲಿ ಉಲ್ಲೇಖಿಸಲಾಗಿರುವ ನಿರ್ದಿಷ್ಟ ಐಡಿಗಳ ಸಮೇತ ಬೆಂಗಳೂರು ನಗರ ಪೊಲೀಸರ ಅಧಿಕೃತ ಇ-ಮೇಲ್ ಐಡಿ ಮೂಲಕ ಯೂಟ್ಯೂಬ್ ಆಡಳಿತ ಮಂಡಳಿಗೆ ಪತ್ರ ಕಳುಹಿಸಲಾಗಿದೆ. ಸೈಬರ್ ಕ್ರೈಂ ಪೊಲೀಸರು ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಮೂರು ಪ್ರಮುಖ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ.

## ಚುನಾವಣೆಯಲ್ಲಿ ಎನ್ ಡಿ ಎ ಅಭ್ಯರ್ಥಿ ಗೆಲುವಿಗೆ ಡಾ. ಸಿ.ಎನ್.ಅಶ್ವತ್ ನಾರಾಯಣ ಕರೆ

• **ಉದಯವಾಹಿನಿ, ಬೆಂಗಳೂರು,**

ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಎನ್ ಡಿ ಎ ಅಭ್ಯರ್ಥಿ ಎ.ಪಿ.ರಂಗನಾಥ್ ಅವರನ್ನು ಗೆಲ್ಲಿಸುವುದರ ಜೊತೆಗೆ ಮುಂಬರುವ ಬೇರೆ-ಬೇರೆ ಚುನಾವಣೆಗಳಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯಕರ್ತರು ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಡಾ.ಸಿ.ಎನ್.ಅಶ್ವಥ್ ನಾರಾಯಣರವರು ಕರೆ ನೀಡಿದರು.

ನಗರದ ಸೆಂಟ್ ಜೋಸೆಫ್ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಮಾತನಾಡಿದ ಅವರು ಶಿಕ್ಷಕರ ಕ್ಷೇತ್ರಕ್ಕೆ ಬಿ ಜೆ ಪಿ-ಜೆ ಡಿ ಎಸ್ ಪಕ್ಷವು ಎ.ಪಿ.ರಂಗನಾಥ್ ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿದೆ ಕಾರ್ಯಕರ್ತರು ಪ್ರತಿಯೊಬ್ಬ ಮತದಾರನನ್ನು ಸಂಪರ್ಕಿಸಿ ಪಕ್ಷದ ಅಭ್ಯರ್ಥಿಯ ಪರವಾಗಿ ಮತ ಚಲಾಯಿಸುವಂತೆ ಮನ ಒಲಿಸಬೇಕು.

ಅಭ್ಯರ್ಥಿಯ ಗೆಲುವಿಗಾಗಿ ಸಂಘಟಿತ ಪ್ರಯತ್ನ ನಡೆಸಬೇಕು ಎಂದು ತಿಳಿಸಿದರು.ಯಾವುದೇ ಚುನಾವಣೆ ಎದುರಾದರು ಪಕ್ಷದ ಅಧಿಕೃತ ಅಭ್ಯರ್ಥಿಯ ಗೆಲುವಿಗೆ ಶ್ರಮಿಸುವುದು ಪ್ರತಿಯೊಬ್ಬ ಕಾರ್ಯಕರ್ತನ ಕರ್ತವ್ಯವಾಗಿದೆ ಎಂದು ಹೇಳಿದರು.

ಸಭೆಯಲ್ಲಿ ವೈಸ್ ಚಾನ್ಸಲರ್ ಆದ ಲೋಬೋ,ಅಭ್ಯರ್ಥಿ ಎ.ಪಿ.ರಂಗನಾಥ್ ಸೇರಿದಂತೆ ಪಕ್ಷದ ಮುಖಂಡರು,ಕಾರ್ಯಕರ್ತರು ಹಾಗು ಶಿಕ್ಷಕರು ಉಪಸ್ಥಿತರಿದ್ದರು.

## NLSIU ಕ್ಯಾಂಪಸ್ ವಿಸ್ತರಣೆಗೆ ಭೂಮಿ ಮಂಜೂರು, ಆರ್ಥಿಕ ನೆರವಿಗೆ ಸರ್ಕಾರ ಬದ್ಧ

• **ಉದಯವಾಹಿನಿ, ಬೆಂಗಳೂರು:**

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (NLSIU) ಕ್ಯಾಂಪಸ್ ವಿಸ್ತರಣೆಗೆ ಸರ್ಕಾರ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು. ಕಾನೂನು ಶಿಕ್ಷಣದ ಮೂಲಸೌಕರ್ಯವನ್ನು ಬಲಪಡಿಸಲು ಅಗತ್ಯವಿರುವ ಭೂಮಿ ಮಂಜೂರು ಮಾಡುವುದರ ಜತೆಗೆ ಆರ್ಥಿಕ ನೆರವನ್ನೂ ಒದಗಿಸಲಾಗುವುದು ಎಂದು ಅವರು ತಿಳಿಸಿದರು.

ಬೆಂಗಳೂರಿನ ಜ್ಞಾನಭಾರತಿ ಆವರಣದಲ್ಲಿರುವ ಎನ್‌ಎಲ್ ಎಸ್‌ಐಯುನಲ್ಲಿ ದಕ್ಷಿಣ ಬ್ಲಾಕ್, ಸಭಾಂಗಣ ಮತ್ತು ವಿದ್ಯಾರ್ಥಿ ಕೇಂದ್ರದ ನಿರ್ಮಾಣಕ್ಕೆ ಇಂದು ಶನಿವಾರ ಶಂಕುಸ್ಥಾಪನೆ ನೆರವೇರಿಸಿದ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರೊಂದಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಡಿ ಕೆ ಶಿವಕುಮಾರ್ ಮಾತನಾಡಿದರು.

ನ್ಯಾಷನಲ್ ಲಾ ಸ್ಕೂಲ್ ಸ್ಥಾಪನೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿರುವುದಕ್ಕೆ ನನಗೆ ಹೆಮ್ಮೆಯಿದೆ. ನಾವು ರಾಜ್ಯದಲ್ಲಿ ವಿದ್ಯಾರ್ಥಿ ನಾಯಕರಾಗಿದ್ದಾಗ, ದೇಶದ ಮೊದಲ ನ್ಯಾಷನಲ್ ಲಾ ಸ್ಕೂಲ್ ಸ್ಥಾಪನೆಯಾದ ಸಂದರ್ಭದಲ್ಲಿ ದೇಶಾದ್ಯಂತ ಅದನ್ನು



ಉದಯವಾಹಿನಿ ಚಿತ್ರ

ಅತ್ಯಂತ ಉತ್ಸಾಹದಿಂದ ಸಂಭ್ರಮಿಸಿದ್ದೆವು ಎಂದು ಹೇಳಿದರು. ವಿಶ್ವವಿದ್ಯಾಲಯದ ವಿಸ್ತರಣೆಗೆ ಸರ್ಕಾರದ ಬೆಂಬಲದ ಭರವಸೆ ನೀಡಿದ ಮುಖ್ಯಮಂತ್ರಿ, ಭೂಮಿ ಅಥವಾ ಆರ್ಥಿಕ ಸಂಪನ್ಮೂಲಗಳ ಲಭ್ಯತೆಯ ಬಗ್ಗೆ ಆತಂಕಪಡುವ ಅಗತ್ಯವಿಲ್ಲ, ನಿಮಗೆ ಏಳು ಎಕರೆ ಬೇಕಾದರೂ, 10 ಎಕರೆ ಬೇಕಾದರೂ, ಎಷ್ಟು ಬೇಕೋ ಅಷ್ಟು ಭೂಮಿ ಮಂಜೂರು ಮಾಡುವುದರ ಜತೆಗೆ ಆರ್ಥಿಕ ನೆರವು ನೀಡಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

## ಹೆಚ್‌ಡಿಕೆ ವಿರುದ್ಧ ಕೈ ನಾಯಕರ ಪ್ರತಿಭಟನೆ

• **ಉದಯವಾಹಿನಿ, ಬೆಂಗಳೂರು:**

ಬ್ಲಾಕ್ ಮೇಲ್ ತಂತ್ರ, ಬೆದರಿಕೆ ತಂತ್ರವನ್ನು ಅನುಸರಿಸಿ ರಾಜಕೀಯ ಲಾಭ ಪಡೆಯುತ್ತಿರುವ ಸಮಯ ಸಾಧಕ ರಾಜಕಾರಣಿ ಎಂದರೆ ಅದು ಎಚ್.ಡಿ.ಕುಮಾರಸ್ವಾಮಿ ಎಂದು ಇಡೀ ದೇಶಕ್ಕೆ ತಿಳಿದಿದೆ ಎಚ್ಡಿಕೆ ಹೇಳಿಕೆಯನ್ನು ಖಂಡಿಸಿ ಇಂದು ಕಾಂಗ್ರೆಸ್ ಕಾರ್ಯಕರ್ತರು ವಿನೂತನವಾಗಿ ಪ್ರತಿಭಟನೆ ಮಾಡಿದರು. ನಗರಪ್ರವಾಸ ನೋಡಿ ರಾಹುಲ್ ಗಾಂಧಿ ರವರ ಹೆಸರು ಹೇಳುವ ಅರ್ಹತೆ ಕುಮಾರಸ್ವಾಮಿ ನಿಮಗೆ ಇಲ್ಲ ನೀವೊಬ್ಬ ಸಮಯ ಸಾಧಕ ರಾಜಕಾರಣಿ ಹಣಕ್ಕಾಗಿ ಅಧಿಕಾರಕ್ಕಾಗಿ ಯಾವ ಕೀಳು ಮಟ್ಟಕ್ಕೂ ಧುಮುಕುವ ವ್ಯಕ್ತಿ ಎಂದರೆ ಕುಮಾರಸ್ವಾಮಿ ಎಂದು ಕರ್ನಾಟಕದ ನಾಡಿನ ಜನತೆಗೆ ತಿಳಿದಿದೆ ನಿಮ್ಮಂತಹ ನೀಚತನದ ವ್ಯಕ್ತಿಗಳು ರಾಜಕೀಯದಲ್ಲಿ ಇರುವುದು ಅಪಾಯಕಾರಿ ಎಂದು ಕಾರ್ಯಕರ್ತರು ಕಿಡಿಕಾರಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವರಾದ ಪ್ರಿಯಾಂಕ ಖರ್ಗೆ ಅವರನ್ನು ಟೀಕಿಸುವ ನೀವು ನಿಮ್ಮ ಯೋಗ್ಯತೆ ಅರ್ಹತೆ ಏನೆಂಬುದನ್ನ ಮೊದಲು ಅರ್ಥೈಸಿಕೊಳ್ಳಿ ಅಧಿಕಾರಕ್ಕೆ ಹೋಗಿ ಬಿಜೆಪಿ ನಾಯಕರ ಕಾಲು ಹಿಡಿಯುವ ನೀವು ಕೇವಲ ಕರ್ನಾಟಕದಲ್ಲಿ ತನ್ನ ಪಕ್ಷ ಹಾಗೂ ತನ್ನ ಕುಟುಂಬದ ಅಸ್ತಿತ್ವಕ್ಕಾಗಿ



ಉದಯವಾಹಿನಿ ಚಿತ್ರ

ಹೋರಾಡುತ್ತಿರುವ ಒಬ್ಬ ಸ್ವಾರ್ಥ ರಾಜಕಾರಣಿ ಯಾರಾದರೂ ಇದ್ದರೆ ಅದು ಎಚ್.ಡಿ.ಕುಮಾರಸ್ವಾಮಿ ಎಂದಿದ್ದಾರೆ.

ಸ್ಟ್ರಿಂಗ್ ಆಪರೇಷನ್ ಹೆಸರಿನಲ್ಲಿ ಈಗಾಗಲೇ ತಮ್ಮ ರಾಜಕೀಯ ಜೀವನ ಬೆತ್ತಲೆ ಆಗಿರುವುದು ಬಹಿರಂಗವಾಗಿದೆ ಮೊದಲು ರಾಜ್ಯದ ಕಾಂಗ್ರೆಸ್ ಪಕ್ಷದ ನಾಯಕರ ಕ್ಷಮೆ ಕೋರಿ ರಾಜಕೀಯದಿಂದ ನಿವೃತ್ತರಾಗಿ ಅಲ್ಪ ಸ್ವಲ್ಪ ಗೌರವವನ್ನು ಉಳಿಸಿಕೊಂಡು ಬದುಕಿ ಎಂದು ಪ್ರತಿಭಟನೆ ಮೂಲಕ ಹೆಚ್.ಡಿ. ಕುಮಾರಸ್ವಾಮಿಗೆ ಎಚ್ಚರಿಕೆಯನ್ನು ನೀಡಲಾಯಿತು.

ಈ ವಿನೂತನ ಪ್ರತಿಭಟನೆಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಎಸ್ ಮನೋಹರ್ ಕಾಂಗ್ರೆಸ್ ಪಕ್ಷದ ಮುಖಂಡರಾದ ಎ.ಆನಂದ, ಹರುವೇಗೌಡ ಭಾಗವಹಿಸಿದ್ದರು.

# ಭಿನ್ನಾಭಿಪ್ರಾಯಗಳನ್ನು ಎದುರಿಸುವಾಗ ಮತ್ತೊಬ್ಬರ ಗೌರವಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು

## ಸುಲಭದ ಹಾದಿ ಹಿಡಿಯುವ ಆಮಿಷ ಎದುರಾದಾಗಲೂ ನೈತಿಕ ಮೌಲ್ಯಗಳಿಗೆ ಬದ್ಧರಾಗಿರಬೇಕು ಎಂದು ಕಾನೂನು ಪದವೀಧರರಿಗೆ ಕಿವಿಮಾತು ಹೇಳಿದರು.

• **ಉದಯವಾಹಿನಿ, ಬೆಂಗಳೂರು:**

ಭಿನ್ನಾಭಿಪ್ರಾಯಗಳನ್ನು ಎದುರಿಸುವ ಸಂದರ್ಭದಲ್ಲಿ ಮತ್ತೊಬ್ಬರ ಗೌರವಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು. ಬೌದ್ಧಿಕ ಸ್ವಾತಂತ್ರ್ಯ, ನ್ಯಾಯಸಮ್ಮತತೆ ಹಾಗೂ ವಿಭಿನ್ನ ಅಭಿಪ್ರಾಯಗಳನ್ನು

**1 : 34ನೇ ವಾರ್ಷಿಕ ಘಟಿಕೋತ್ಸವ**
**2 : ಕಿವಿಗೊಡುವ ವಿನಯ ಅತ್ಯಗತ್ಯ**
**3 : ಹೊಸ ತಿಳುವಳಿಕೆ ಮೂಡುತ್ತದೆ**

ಗೌರವಿಸುವ ಗುಣವನ್ನು ಕಾನೂನು ಪದವೀಧರರು ಬಳೆಸಿಕೊಳ್ಳಬೇಕು ಎಂದು ಕಾನೂನು ಪದವೀಧರರಿಗೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಸಲಹೆ ನೀಡಿದರು.

ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (ಎನ್‌ಎಲ್‌ಎಸ್‌ಐಯು) ಯ 34ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಕಾನೂನು ವೃತ್ತಿಗೆ ಕಾನೂನುಗಳ ವಿಧಿಗಳು ಮತ್ತು ನ್ಯಾಯಾಲಯದ ಪೂರ್ವನಿರ್ದರ್ಶನಗಳ ಜ್ಞಾನವಷ್ಟೇ ಸಾಲದು. ನ್ಯಾಯಯುತವಾದುದನ್ನು ಸಮರ್ಥಿಸುವ



ಉದಯವಾಹಿನಿ ಚಿತ್ರ

> ಪ್ರಜಾಪ್ರಭುತ್ವ ಸಂಸ್ಥೆಗಳನ್ನು ರಕ್ಷಿಸಲು, ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯಲು ಮತ್ತು ಪ್ರತಿಯೊಬ್ಬ ಪ್ರಜೆಗೂ ನ್ಯಾಯ ಸಿಗುವಂತೆ ಮಾಡಲು ಎಂದಿಗೂ ಪ್ರಶ್ನಿಸುವುದನ್ನು ನಿಲ್ಲಿಸಬೇಡಿ, ನಿಮ್ಮ ಮೌಲ್ಯಗಳೊಂದಿಗೆ ಎಂದಿಗೂ ರಾಜಿ ಮಾಡಿಕೊಳ್ಳಬೇಡಿ ಎಂದು ತಿಳಿಸಿದರು. -ನ್ಯಾಯಮೂರ್ತಿ ಸೂರ್ಯಕಾಂತ್

> ಅಗಲಿದ ವಿದ್ಯಾರ್ಥಿನಿ ಸ್ಮರಣೆ: ಎನ್ ಎಲ್‌ಎಸ್‌ಐಯು ಪದವೀಧರೆ ಉರ್ವಶಿ ಕೃಷ್ಣಾತ್ರಾ, ಅವರ ನಿಧನವನ್ನು ಸ್ಮರಿಸಿದ ಅವರು, ಘಟಿಕೋತ್ಸವದಲ್ಲಿ ಪದವಿ ಸ್ವೀಕರಿಸಿ ಸಹಪಾಠಿಗಳೊಂದಿಗೆ ಈ ಮಹತ್ವದ ಕ್ಷಣವನ್ನು ಸಂಭ್ರಮಿಸಬೇಕಿದ್ದ ಊರ್ವಶಿ ಇಂದು ನಮ್ಮೊಂದಿಗಿಲ್ಲ. ಇದು ದುಃಖದ ಸಂಗತಿ ಎಂದರು.
> -ನ್ಯಾಯಮೂರ್ತಿ ಸೂರ್ಯಕಾಂತ್

ಧೈರ್ಯ ಹಾಗೂ ಕಡೆಗಣಿಸಲ್ಪಟ್ಟವರ ಧ್ವನಿಗೆ ಕಿವಿಗೊಡುವ ವಿನಯ ಅತ್ಯಗತ್ಯ ಎಂದು ತಿಳಿಸಿದರು. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ಸಿಎಂ ಡಿ.ಕೆ.ಶಿವಕುಮಾರ್, ಇತರರು ಕಾನೂನು ಶಿಕ್ಷಣದ ಉದ್ದೇಶವು ಅಪರಾಧ ಕಾನೂನು ಅಥವಾ ಸಂವಿಧಾನಾತ್ಮಕ ಕಾನೂನಿನ ತತ್ವಗಳನ್ನು ಕಲಿಯುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿರುವ ಜನರನ್ನು ಅರ್ಥಮಾಡಿಕೊಳ್ಳುವುದು, ವಿಚಾರಗಳ ವಿನಿಮಯ ನಡೆಸುವುದು ಹಾಗೂ ತಮ್ಮ ನಿಲುವುಗಳನ್ನು ಮರುಪರಿಶೀಲಿಸುವುದೂ ಶಿಕ್ಷಣದ ಭಾಗವಾಗಿದೆ ಎಂದು ಹೇಳಿದರು. ಕಾನೂನು ಶಾಲೆಗಳಲ್ಲಿ ವಿಭಿನ್ನ ವಿಚಾರಗಳು ಮುಖಾಮುಖಿಯಾಗುತ್ತವೆ.

ನಂಬಿಕೆಗಳು ಪರೀಕ್ಷೆಗೆ ಒಳಗಾಗುತ್ತವೆ ಮತ್ತು ಸಂವಾದದ ಮೂಲಕ ಹೊಸ ತಿಳುವಳಿಕೆ ಮೂಡುತ್ತದೆ. ವಿಭಿನ್ನ ಅಭಿಪ್ರಾಯಗಳನ್ನು ಆಲಿಸುವುದರಿಂದ ನ್ಯಾಯದ ಪರಿಕಲ್ಪನೆ ಇನ್ನಷ್ಟು ಸಮೃದ್ಧವಾಗುತ್ತದೆ. ಕಾನೂನು ಸ್ಥಿರವಾದುದಲ್ಲ. ಅದನ್ನು ಅಭ್ಯಾಸ ಮಾಡುವವರ ಚಿಂತನೆ ಮತ್ತು ಕಾರ್ಯಗಳ ಮೂಲಕ ಅದು ಉಸಿರಾಡುತ್ತದೆ, ವಿಕಸನಗೊಳ್ಳುತ್ತದೆ ಎಂದರು.

ವೃತ್ತಿಪರ ಅನುಕೂಲಕ್ಕಾಗಿ ಪ್ರಾಮಾಣಿಕತೆಯೊಂದಿಗೆ ರಾಜಿ ಮಾಡಿಕೊಳ್ಳಬಾರದು ಎಂದು ಎಚ್ಚರಿಕೆ ಅವರು, ಸುಲಭದ ಹಾದಿ ಹಿಡಿಯುವ ಆಮಿಷ ಎದುರಾದಾಗಲೂ ನೈತಿಕ ಮೌಲ್ಯಗಳಿಗೆ ಬದ್ಧರಾಗಿರಬೇಕು. ವೃತ್ತಿಜೀವನದಲ್ಲಿ ಪ್ರಾಮಾಣಿಕತೆಯೇ ದೀರ್ಘಕಾಲದ ವಿಶ್ವಾಸ ಮತ್ತು ಗೌರವವನ್ನು ಗಳಿಸಿಕೊಡುತ್ತದೆ. ರಾಜಿ ಮಾಡಿಕೊಳ್ಳುವ ಆಮಿಷ ಎದುರಾಗಬಹುದು, ತಾತ್ಕಾಲಿಕ ಅನುಕೂಲಗಳು ಆಕರ್ಷಿಸಬಹುದು ಮತ್ತು ಇತರರು ಸುಲಭದ ಮಾರ್ಗಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಅಂತಹ ಸಂದರ್ಭಗಳಲ್ಲಿ ಈ ಸಂಸ್ಥೆಯಲ್ಲಿ ಕಲಿತ ಮೌಲ್ಯಗಳನ್ನು ಮಾರ್ಗದರ್ಶಿಯಾಗಿ ಸ್ವೀಕರಿಸಿ, ಅವುಗಳಿಗೆ ನಿಷ್ಠರಾಗಿರಬೇಕು ಎಂದು ತಿಳಿಸಿದರು. ಎಲ್ಲರೂ ಸರ್ಕಾರದೊಂದಿಗೆ ಸಮ್ಮತಿಸುವುದೇ ಸಶಕ್ತ ಪ್ರಜಾಪ್ರಭುತ್ವವಲ್ಲ. ಪ್ರತಿಯೊಬ್ಬ ಪ್ರಜೆಗೂ ಸರ್ಕಾರವನ್ನು ಪ್ರಶ್ನಿಸುವ ಸ್ವಾತಂತ್ರ್ಯವಿರುವುದೇ ನಿಜವಾದ ಸಶಕ್ತ ಪ್ರಜಾಪ್ರಭುತ್ವ ಎಂದು ಅಭಿಪ್ರಾಯಪಟ್ಟರು.

ಅಂತರಾಳದಿಂದ..
EDITORIAL

# ದೂರಸಂಪರ್ಕ ಇಲಾಖೆಯಿಂದ ಗ್ರಾಹಕ ಸ್ನೇಹಿ ಉಪಕ್ರಮ


ಉದಯವಾಹಿನಿ ಚಿತ್ರ

ಯಾವುದೇ ಅಪರಿಚಿತ ಮೊಬೈಲ್ ಸಂಖ್ಯೆಗಳಿಂದ ಕರೆ ಬಂದರೂ ಕರೆ ಮಾಡಿದವರ ಹೆಸರನ್ನು ಮೊಬೈಲ್ ಪರದೆಯ ಮೇಲೆ ಪ್ರದರ್ಶಿಸುವುದನ್ನು ಕಡ್ಡಾಯಗೊಳಿಸಿ ಕೇಂದ್ರ ಸರಕಾರದ ದೂರಸಂಪರ್ಕ ಇಲಾಖೆ ಆದೇಶ ಹೊರಡಿಸಿದೆ. ನವೆಂಬರ್ 1ರಿಂದ ಈ ಆದೇಶ ಅನ್ವಯವಾಗಲಿದ್ದು ದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ್ಲ ಟೆಲಿಕಾಂ ಕಂಪೆನಿಗಳು ಸ್ವತಃ ತನ್ನ ಗ್ರಾಹಕರಿಗೆ ಕಡ್ಡಾಯವಾಗಿ ಕಾಲರ್ ಐಡಿ ಮಾದರಿಯ ಸೇವೆಯನ್ನು ಒದಗಿಸಬೇಕು ಎಂದು ನಿರ್ದೇಶನ ನೀಡಿದೆ. ದೇಶದಲ್ಲಿ ಹೆಚ್ಚುತ್ತಿರುವ ಸ್ಪ್ಯಾಮ್ ಕರೆಗಳು ಮತ್ತು ವಂಚನೆಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸರಕಾರದ ಈ ನಿರ್ಧಾರ ಅತ್ಯಂತ ಪರಿಣಾಮಕಾರಿ ಮಾತ್ರವಲ್ಲದೆ ಮೊಬೈಲ್ ಬಳಕೆದಾರರ ಹಿತದೃಷ್ಟಿಯಿಂದಲೂ ಇದೊಂದು ಸ್ವಾಗತಾರ್ಹ ಹೆಜ್ಜೆ.ನವೆಂಬರ್ 1ರಿಂದ ಈ ಆದೇಶ ಅನ್ವಯವಾಗಲಿದ್ದು ದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಟೆಲಿಕಾಂ ಕಂಪೆನಿಗಳು ಸ್ವತಃ ತನ್ನ ಗ್ರಾಹಕರಿಗೆ ಕಡ್ಡಾಯವಾಗಿ ಕಾಲರ್ ಐಡಿ ಮಾದರಿಯ ಸೇವೆಯನ್ನು ಒದಗಿಸಬೇಕು ಎಂದು ನಿರ್ದೇಶನ ನೀಡಿದೆ. ದೇಶದಲ್ಲಿ ಹೆಚ್ಚುತ್ತಿರುವ ಸ್ಪ್ಯಾಮ್ ಕರೆಗಳು ಮತ್ತು ವಂಚನೆಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸರಕಾರದ ಈ ನಿರ್ಧಾರ ಅತ್ಯಂತ ಪರಿಣಾಮಕಾರಿ ಮಾತ್ರವಲ್ಲದೆ ಮೊಬೈಲ್ ಬಳಕೆದಾರರ ಹಿತದೃಷ್ಟಿಯಿಂದಲೂ ಇದೊಂದು ಸ್ವಾಗತಾರ್ಹ ಹೆಜ್ಜೆ. ದೇಶದಲ್ಲಿ ಸ್ಪ್ಯಾಮ್ ಕರೆಗಳ ನಿಯಂತ್ರಣಕ್ಕಾಗಿ ದೂರಸಂಪರ್ಕ ಇಲಾಖೆ ಮತ್ತು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಹಲವು ನಿಯಮಗಳನ್ನು ಜಾರಿಗೆ ತಂದಿದ್ದರೂ ಇಂತಹ ಕರೆಗಳ ಹಾವಳಿಗೆ ಇನ್ನೂ ಕಡಿವಾಣ ಬಿದ್ದಿಲ್ಲ. ಅಷ್ಟು ಮಾತ್ರವಲ್ಲದೆ ಈ ಅಪರಿಚಿತ ಕರೆಗಳ ಮೂಲಕವೇ ಮೊಬೈಲ್ ಬಳಕೆದಾರರನ್ನು ವಂಚಿಸುವ ದಂಧೆ ನಿರಾತಂಕವಾಗಿ ಸಾಗಿದೆ. ಅದರಲ್ಲೂ ಹಿರಿಯ ನಾಗರಿಕರು ಮತ್ತು ಮಕ್ಕಳನ್ನು ಗುರಿಯಾಗಿಸಿ ಇಂತಹ ಸ್ಪ್ಯಾಮ್ ಕರೆಗಳನ್ನು ಮಾಡಿ ವಂಚಿಸುವ ಜಾಲ ಕೇವಲ ರಾಷ್ಟ್ರಮಾತ್ರವಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದಾಗಿ ಈ ದಂಧೆಯ ನಿಯಂತ್ರಣ ಬಲುದೊಡ್ಡ ಸವಾಲಾಗಿ ಪರಿಣಮಿಸಿದೆ. ದೇಶವಿಂದು ಡಿಜಿಟಲ್ ವ್ಯವಸ್ಥೆಗೆ ಬಹುತೇಕ ಒಗ್ಗಿಕೊಂಡಿದ್ದು ಪ್ರತಿಯೊಂದು ಕೆಲಸ ಕಾರ್ಯಗಳನ್ನೂ ಜನರು ಮೊಬೈಲ್ ಮೂಲಕವೇ ನಿರ್ವಹಿಸುತ್ತಿದ್ದಾರೆ. ಇದೇ ವೇಳೆ ಅನಗತ್ಯ ಕರೆಗಳು, ನಿರಂತರವ ಪ್ರಚಾರ ಸಂದೇಶಗಳು ಮತ್ತು ಸೈಬರ್ ವಂಚಕರ ಕಾಟದಿಂದ ಮೊಬೈಲ್ ಬಳಕೆದಾರರು ಬೇಸತ್ತು ಹೋಗಿದ್ದಾರೆ. ಸಾಲದ ಆಮಿಷ, ಕ್ರೆಡಿಟ್ ಕಾರ್ಡ್ ಕೊಡುಗೆ, ವಿಮೆ, ರಿಯಲ್ ಎಸ್ಟೇಟ್ ಹೂಡಿಕೆ ಮತ್ತು ವಿವಿಧ ಆನ್ ಲೈನ್ ಸೇವೆಗಳ ಹೆಸರಿನಲ್ಲಿ ಬರುವ ಸ್ಪ್ಯಾಮ್ ಕರೆಗಳು ಜನರಿಗೆ ಕಿರಿಕಿರಿಯನ್ನುಂಟು ಮಾಡುತ್ತಿರುವುದಲ್ಲದೆ ಅವರ ಸಮಯವನ್ನೂ ವ್ಯರ್ಥಗೊಳಿಸುತ್ತಿದೆ. ಇದಕ್ಕಿಂತಲೂ ಆತಂಕಕಾರಿ ವಿಷಯವೆಂದರೆ ಮೊಬೈಲ್ ಬಳಕೆದಾರರಿಗೆ ಸೈಬರ್‌ವಂಚನೆಯ ಅಪಾಯದ ಅರಿವಿಲ್ಲದೆ ಸ್ವತಃ ಇಂತಹ ಅನಪೇಕ್ಷಿತ ಕರೆಗಳಿಗೆ ಸ್ಪಂದಿಸಿ ಮೋಸಕ್ಕೊಳಗಾದ ಇಲ್ಲವೇ ಸಂಕಷ್ಟಕ್ಕೀಡಾಗುತ್ತಿರುವುದು ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿದೆ. ಗ್ರಾಹಕರ ಹಕ್ಕುಗಳು ಮತ್ತು ಡಿಜಿಟಲ್ ಭದ್ರತೆ-ಸಂಬಂಧಿಸಿದ್ದಾಗಿದ್ದರಿಂದ ಇಂತಹ ಅನಪೇಕ್ಷಿತ ಕರೆಗಳಿಗೆ ಕಡಿವಾಣ ಹಾಕುವುದು ಮೊಬೈಲ್ ಸೇವಾದಾರರ ಹೊಣೆಗಾರಿಕೆಯಾಗಿದೆ. ಯಾವುದೇ ಮೊಬೈಲ್ ಸ್ಕ್ರೀನ್‌ನಲ್ಲಿ ಕರೆ ಮಾಡಿದವರ ಹೆಸರು ಕಾಣಿಸಿಕೊಂಡಾಕ್ಷಣ ಗ್ರಾಹಕರು ಕರೆಯ ಕುರಿತಂತೆ ಒಂದಿಷ್ಟು ಮುನ್ನೆಚ್ಚರಿಕೆವಹಿಸಲು ಸರಕಾರದ ಈ ಕ್ರಮ ಸಹಕಾರಿಯಾಗಲಿದೆ.

> ದೇಶದಲ್ಲಿ ಸ್ಪ್ಯಾಮ್ ಕರೆಗಳ ನಿಯಂತ್ರಣಕ್ಕಾಗಿ ದೂರಸಂಪರ್ಕ ಇಲಾಖೆ ಮತ್ತು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಹಲವು ನಿಯಮಗಳನ್ನು ಜಾರಿಗೆ ತಂದಿದ್ದರೂ ಇಂತಹ ಕರೆಗಳ ಹಾವಳಿಗೆ ಇನ್ನೂ ಕಡಿವಾಣ ಬಿದ್ದಿಲ್ಲ. ಅಷ್ಟು ಮಾತ್ರವಲ್ಲದೆ ಈ ಅಪರಿಚಿತ ಕರೆಗಳ ಮೂಲಕವೇ ಮೊಬೈಲ್ ಬಳಕೆದಾರರನ್ನು ವಂಚಿಸುವ ದಂಧೆ ನಿರಾತಂಕವಾಗಿ ಸಾಗಿದೆ. ಅದರಲ್ಲೂ ಹಿರಿಯ ನಾಗರಿಕರು ಮತ್ತು ಮಕ್ಕಳನ್ನು ಗುರಿಯಾಗಿಸಿ ಇಂತಹ ಸ್ಪ್ಯಾಮ್ ಕರೆಗಳನ್ನು ಮಾಡಿ ವಂಚಿಸುವ ಜಾಲ ಕೇವಲ ರಾಷ್ಟ್ರಮಾತ್ರವಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದಾಗಿ ಈ ದಂಧೆಯ ನಿಯಂತ್ರಣ ಬಲುದೊಡ್ಡ ಸವಾಲಾಗಿ ಪರಿಣಮಿಸಿದೆ.

**ಇದೊಂದು ಸ್ವಾಗತಾರ್ಹ ಹೆಜ್ಜೆ**

---



ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

12

# ನೆನಪಿನ ಕಸರತ್ತಿನ ಕಲೆ : ಆಕ್ಟಿವ್ ರಿಕಾಲ್

**ಇದಕ್ಕೆ ರಾಮಬಾಣವೇ ಆಕ್ಟಿವ್ ರಿಕಾಲ್, ಅಂದರೆ ಸಕ್ರಿಯ ಪುನರಾವರ್ತನೆ. ಪಾಠ ಮುಗಿದ ಕೂಡಲೇ ಗ್ರಂಥ ಮುಚ್ಚಿ, ನಾನೀಗ ಏನನ್ನು ಕಲಿತೆ ಎಂದು ಆತ್ಮವನ್ನು ಪ್ರಶ್ನಿಸಿಕೊಳ್ಳಿ. ನೆನಪಿದ್ದಷ್ಟನ್ನು ಬರೆಯಿರಿ, ಇಲ್ಲವೇ ಗುನುಗಿ. ಮೊದಮೊದಲು ಅರ್ಧ ಮಾತ್ರ ಸ್ಮರಣೆಯಾದರೂ ಅಡ್ಡಿಯಿಲ್ಲ. ನಂತರ ಗ್ರಂಥ ತೆರೆದು ಉಳಿದ ಭಾಗ ತುಲನೆ ಮಾಡಿ. ಈ ಕಸರತ್ತೇ ಸ್ಮೃತಿಯನ್ನು ಉಕ್ಕಿನಂತೆ ಗಟ್ಟಿಗೊಳಿಸುತ್ತದೆ.**

ಗಂಟೆಗಟ್ಟಲೆ ಪಠಣ ಮಾಡಿದರೂ ಪರೀಕ್ಷಾ ಕೊಠಡಿಯಲ್ಲಿ ಉತ್ತರ ನೆನಪಿಗೆ ಬಾರದಿದ್ದರೆ ಉಂಟಾಗುವ ಹತಾಶೆ ವರ್ಣನಾತೀತ.

ಇದಕ್ಕೆ ಕಾರಣ ನಮ್ಮ ನಿಷ್ಕ್ರಿಯ ಓದು. ನಾವು ಕೇವಲ ಕಣ್ಣಾಡಿಸುತ್ತೇವೆ, ಮೆದುಳನ್ನು ಮಂಕಾಗಿಡುತ್ತೇವೆ. ವ್ಯಾಯಾಮವಿಲ್ಲದ ಸ್ನಾಯುವಿನಂತೆ ಮಾಹಿತಿ ಕ್ಷಣಮಾತ್ರದಲ್ಲಿ ಕರಗಿಹೋಗುತ್ತದೆ. ಇದು ಓದಲ್ಲ, ಕೇವಲ ಪುಟ ತಿರುವುವಿಕೆ.

ಇದನ್ನು ದಿನಚರಿಯಾಗಿಸಿಕೊಳ್ಳಿ. ಬೆಳಗಿನ ಪಠ್ಯವನ್ನು ರಾತ್ರಿ ಮನಸ್ಸಿನಲ್ಲಿ ಮೆಲುಕು ಹಾಕಿ. ವಾರಾಂತ್ಯದಲ್ಲಿ ಇಡೀ ವಾರದ ಸಾರವನ್ನು ಮಾನಸಿಕವಾಗಿ ಅವಲೋಕಿಸಿ. ಪ್ರಶ್ನೆ ಚೀಟಿಗಳ ಆಟವಾಡಿ, ಗೆಳೆಯರೊಂದಿಗೆ ಪರಸ್ಪರ ಪ್ರಶ್ನೋತ್ತರ ನಡೆಸಿ. ಎಷ್ಟು ಬಾರಿ ಸ್ಮರಣೆಗೆ ಒತ್ತಾಯಿಸುತ್ತೀರೋ ಅಷ್ಟು ಬಾರಿ ಜ್ಞಾನ ಆಳಕ್ಕೆ ಬೇರೂರುತ್ತದೆ.



ಆದ್ದರಿಂದ ಇನ್ನು ಕೇವಲ ಓದಿ ಕಾಲಹರಣ ಮಾಡದಿರಿ. ಓದಿ, ಮುಚ್ಚಿ, ನೆನಪಿಸಿಕೊಳ್ಳಿ, ಬರೆಯಿರಿ – ಈ ಚತುಸೂತ್ರವೇ ನಿಜವಾದ ವಿದ್ಯೆ. ಆಕ್ಟಿವ್ ರಿಕಾಲ್ ಸಾಧಕರು ಅಲ್ಪಾವಧಿಯಲ್ಲಿ ಅಧಿಕ ಸಾಧಿಸುತ್ತಾರೆ.

---

# ಲಿವರ್ ಹಾನಿಯಾದರೆ ದೇಹದಲ್ಲಿ ಕಾಣಿಸುವ ಎಚ್ಚರಿಕೆ ಚಿಹ್ನೆಗಳಿವು, ನಿರ್ಲಕ್ಷಿಸಿದರೆ ಅಪಾಯ: ತಜ್ಞರು ತಿಳಿಸುವುದೇನು?

ಮಾನವ ದೇಹದಲ್ಲಿ ಯಕೃತ್ತು ಅತ್ಯಂತ ತುಂಬಾ ಮುಖ್ಯವಾಗಿರುವಂತಹ ಅಂಗವಾಗಿದೆ. ನಾವು ಸೇವಿಸುವ ಆಹಾರವನ್ನು ಜೀರ್ಣಿಸಿಕೊಳ್ಳುವಲ್ಲಿ ಹಾಗೂ ಅದರಿಂದ ಜೀವಸತ್ವಗಳು, ಪ್ರೋಟೀನ್‌ಗಳು, ಗ್ಲೂಕೋಸ್‌ನಂತಹ ಅಗತ್ಯ ಪೋಷಕಾಂಶಗಳನ್ನು ಹೊರತೆಗೆಯುವಲ್ಲಿ ಲಿವರ್ ಪ್ರಮುಖವಾದ ಪಾತ್ರ ವಹಿಸುತ್ತದೆ. ಇದು ಹಾನಿಕಾರಕ ಅಮೋನಿಯಾವನ್ನು ಯೂರಿಯಾವಾಗಿ ಪರಿವರ್ತಿಸುತ್ತದೆ ಹಾಗೂ ನಿಕೋಟಿನ್, ಮದ್ಯದಂತಹ ವಿಷಕಾರಿ ವಸ್ತುಗಳನ್ನು ನಿಷ್ಕ್ರಿಯಗೊಳಿಸುತ್ತದೆ. ಲಿವರ್ ದಿನದ 24 ಗಂಟೆಗಳವರೆಗೆ ನಿರಂತರವಾಗಿ ಕಾರ್ಯನಿರ್ವಹಿಸುತ್ತದೆ.

ಯಕೃತ್ತಿನ ಆರೋಗ್ಯವನ್ನು ಕಾಪಾಡಿಕೊಳ್ಳುವ ಮಹತ್ವವನ್ನು ತಜ್ಞರು ತಿಳಿಸುತ್ತಾರೆ. ಯಕೃತ್ತಿನ ಕಾಯಿಲೆಗಳು ಸಾಮಾನ್ಯವಾಗಿ ಬಹಳ ನಿಧಾನವಾಗಿ ಉಲ್ಬಣಗೊಳ್ಳುತ್ತವೆ. ಪರಿಸ್ಥಿತಿ ಗಂಭೀರವಾಗುವವರೆಗೂ ರೋಗಲಕ್ಷಣಗಳು ಕಾಣಿಸಿಕೊಳ್ಳದಿರಬಹುದು, ಇದರಿಂದ ಚಿಕಿತ್ಸೆ ನೀಡುವುದು ಕಷ್ಟಕರವಾಗುತ್ತದೆ. ಲಿವರ್ ಹಾನಿಯಾದರೆ ಕಾಣಿಸುವಂತಹ ಲಕ್ಷಣಗಳು ಯಾವುವು ಎಂಬುದನ್ನು ಇಲ್ಲಿ ತಿಳಿಯೋಣ.

ಯಕೃತ್ತಿನ ಕ್ಯಾನ್ಸರ್, ಫ್ಯಾಟಿ ಲಿವರ್, ಯಕೃತ್ತಿನ ಉರಿಯೂತದಂತಹ ಸಮಸ್ಯೆಗಳಿಗೆ ಇದು ಪ್ರಮುಖ ಸೂಚಕವಾಗಿರಬಹುದು ಎಂದು ತಜ್ಞರು ಹೇಳುತ್ತಾರೆ. ಪ್ರಕಾರ, ಇಂತಹ ನೋವು ಅಂದರೆ ಮೂಲ ಸಮಸ್ಯೆ ಒಂದು ಕಡೆಯಿದ್ದರೆ, ನೋವು ಬೇರೆ ಕಡೆ ಕಾಣಿಸಿಕೊಳ್ಳುವುದು 'ಫ್ರೆನಿಕ್ ನರಗಳ' ಕಾರಣದಿಂದ ಉಂಟಾಗುತ್ತದೆ. ಈ ನರಗಳ ಮೇಲೆ ಒತ್ತಡ ಬಿದ್ದಾಗ, ಅದು ಬಲ ಭುಜದಲ್ಲಿ ನೋವನ್ನು ಉಂಟುಮಾಡುತ್ತದೆ. ಇದರೊಂದಿಗೆ ಆಯಾಸ, ಕಾಮಾಲೆ, ಹೊಟ್ಟೆ ಉಬ್ಬರ ಇಲ್ಲವೇ ದೇಹದಲ್ಲಿ ಊತದಂತಹ ಇತರ ಲಕ್ಷಣಗಳೂ ಕಾಣಿಸಿಕೊಳ್ಳಬಹುದು. ನಿರಂತರ ತುರಿಕೆ, ಚರ್ಮ ಒಣಗುವುದು ಯಕೃತ್ತಿಗೆ ಸಂಬಂಧಿಸಿದ ಸಮಸ್ಯೆಗಳ ಲಕ್ಷಣಗಳಾಗಿರಬಹುದು ಎಂದು ವೈದ್ಯರು ತಿಳಿಸುತ್ತಾರೆ. 'ಕ್ಲೀವ್‌ಲ್ಯಾಂಡ್ ಕ್ಲಿನಿಕ್' ತಿಳಿಸುವ ಪ್ರಕಾರ, ಯಕೃತ್ತಿನ ಕಾರ್ಯಕ್ಷಮತೆ ಕುಂಠಿತಗೊಂಡಾಗ ತೂಕ ಇಳಿಕೆ, ಆಯಾಸ, ದೌರ್ಬಲ್ಯ, ಚರ್ಮದಲ್ಲಿ ತುರಿಕೆ, ಚರ್ಮದ ಅಡಿಯಲ್ಲಿರುವ ರಕ್ತನಾಳಗಳು ಊದಿಕೊಳ್ಳುವಂತಹ ಲಕ್ಷಣಗಳು ಕಾಣಿಸಿಕೊಳ್ಳಬಹುದು.

ಮಧ್ಯರಾತ್ರಿಯಲ್ಲಿ ಎಚ್ಚರಗೊಳ್ಳುವುದು. ರಾತ್ರಿಯಲ್ಲಿ ನಿದ್ರೆಯಿಂದ ಎಚ್ಚರಗೊಳ್ಳಲು ಅನೇಕ ಕಾರಣಗಳಿರಬಹುದು. ಆದರೆ, ಈ ರೀತಿ ಪದೇ ಪದೇ ಸಂಭವಿಸುತ್ತಿದ್ದರೆ, ಎಚ್ಚರಿಕೆಯಿಂದ ಇರುವಂತೆ ತಜ್ಞರು ಸಲಹೆ ನೀಡುತ್ತಾರೆ. 'ನ್ಯಾಷನಲ್ ಲೈಬ್ರರಿ ಆಫ್ ಮೆಡಿಸಿನ್' ತಿಳಿಸುವ ಪ್ರಕಾರ, ಯಕೃತ್ತು ಸರಿಯಾಗಿ ಕಾರ್ಯನಿರ್ವಹಿಸದಿದ್ದಾಗ, ರಕ್ತದಲ್ಲಿ ತ್ಯಾಜ್ಯ ವಸ್ತುಗಳು ಸಂಗ್ರಹಗೊಳ್ಳುತ್ತವೆ. ಇವು ಮೆದುಳಿನ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುತ್ತವೆ ಹಾಗೂ ಇದರಿಂದ ನಿದ್ರೆಗೆ ಭಂಗ ಉಂಟಾಗುತ್ತದೆ. ಊಟದ ಬಳಿಕ ಹೊಟ್ಟೆ ನೋವು ಕಾಣಿಸಿಕೊಳ್ಳುವುದು ಯಕೃತ್ತಿನ ಕಾಯಿಲೆಯ ಚಿಹ್ನೆಯಾಗಿರಬಹುದು ಎಂದು ತಜ್ಞರು ಹೇಳುತ್ತಾರೆ. ಇದು ಉರಿಯೂತ, ಫ್ಯಾಟಿ ಲಿವರ್ ಇಲ್ಲವೇ ದೇಹದಲ್ಲಿ ದ್ರವ ಸಂಗ್ರಹವಾಗುವಂತಹ ಸಮಸ್ಯೆಗಳನ್ನು ಸೂಚಿಸಬಹುದು.

ಕಾಲಕ್ರಮೇಣ, ಇದು ಜೀರ್ಣಕ್ರಿಯೆಯ ಮೇಲೆ ಹಾಗೂ ಯಕೃತ್ತಿನ ಕಾರ್ಯನಿರ್ವಹಣಾ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ. ಯಕೃತ್ತಿನಲ್ಲಿ ಕೊಬ್ಬು ಶೇಖರಣೆಯಾಗುವುದು ಹಾಗೂ ಯಕೃತ್ತಿಗೆ ಹಾನಿಯಾಗುವುದು ಹೊಟ್ಟೆಯ ಕೆಳಭಾಗದಲ್ಲಿ ದ್ರವ ಸಂಗ್ರಹವಾಗಲು ಕಾರಣವಾಗಬಹುದು. ಇದರಿಂದ ಹೊಟ್ಟೆ ಉಬ್ಬರಿಸಿದಂತಾಗುವುದು ಹಾಗೂ ಹೊಟ್ಟೆ ತುಂಬಿದ ಅನುಭವ ಉಂಟಾಗಬಹುದು. ಊಟದ ನಂತರವೂ ಹೊಟ್ಟೆ ತುಂಬಿದ ಅನುಭವವಾಗದಿದ್ದರೆ, ಸ್ವಲ್ಪವೇ ಆಹಾರ ಸೇವಿಸಿದರೂ ವಾಕರಿಕೆ ಉಂಟಾದರೆ, ಅದು ಯಕೃತ್ತಿಗೆ ಸಂಬಂಧಿಸಿದ ಆಂತರಿಕ ಸಮಸ್ಯೆಯ ಸಂಕೇತವಾಗಿರಬಹುದು. ಯಕೃತ್ತು ಪೋಷಕಾಂಶಗಳನ್ನು ಹಾಗೂ ವಿಷಕಾರಿ ವಸ್ತುಗಳನ್ನು ಸರಿಯಾಗಿ ಸಂಸ್ಕರಿಸಲು ಸಾಧ್ಯವಾಗದಿದ್ದಾಗ ಹೀಗಾಗುತ್ತದೆ.

---



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

**ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯನ್ನು ಶಕ್ತಿ, ಜ್ಞಾನ, ಸಂಪತ್ತು ಮತ್ತು ಕರುಣೆಯ ಪ್ರತಿರೂಪವಾಗಿ ಆರಾಧಿಸಲಾಗುತ್ತದೆ. ನವರಾತ್ರಿಯ ಒಂಬತ್ತು ದಿನಗಳಲ್ಲಿ ದುರ್ಗೆ, ಲಕ್ಷ್ಮಿ, ಸರಸ್ವತಿ ಸೇರಿದಂತೆ ದೇವಿಯ ವಿವಿಧ ರೂಪಗಳನ್ನು ಭಕ್ತಿಯಿಂದ ಪೂಜಿಸಲಾಗುತ್ತದೆ. ಮನೆಮನೆಗಳಲ್ಲಿ ದೀಪ ಬೆಳಗಿಸಿ, ಹೂವುಗಳಿಂದ ಅಲಂಕರಿಸಿ, ವಿಶೇಷ ಪೂಜೆಗಳನ್ನು ನೆರವೇರಿಸಲಾಗುತ್ತದೆ. ಆದರೆ ಈ ಸಂಭ್ರಮದ ನಡುವೆ ನಮ್ಮನ್ನು ಕಾಡುವ ಪ್ರಶ್ನೆಯೊಂದಿದೆ. ದೇವಿಯನ್ನು ಪೂಜಿಸುವ ಸಮಾಜದಲ್ಲಿ ಮಹಿಳೆಗೆ ನಿಜವಾಗಿಯೂ ಗೌರವ, ಸ್ವಾತಂತ್ರ್ಯ ಮತ್ತು ಸಮಾನ ಅವಕಾಶಗಳು ದೊರೆಯುತ್ತಿವೆಯೇ?ದೇವಿಯ ಮುಂದೆ ತಲೆಬಾಗುವ ಸಮಾಜವು ಮಹಿಳೆಯ ಹಕ್ಕುಗಳ ವಿಚಾರದಲ್ಲಿ ಕೆಲವೊಮ್ಮೆ ಮೌನವಾಗಿರುವುದು ವಿಷಾದನೀಯ. ಆರಾಧನೆಯಲ್ಲಿ ಮಹಿಳೆಯನ್ನು ಶಕ್ತಿಯೆಂದು ಕೊಂಡಾಡುವ ನಾವು, ನಿತ್ಯ ಜೀವನದಲ್ಲಿ ಆಕೆಯ ಸಾಮರ್ಥ್ಯವನ್ನು ಅನುಮಾನಿಸುವುದು ಎಂತಹ ವೈರುಧ್ಯ! ಈ ಪ್ರಶ್ನೆಗೆ ಉತ್ತರ ಹುಡುಕುವುದೇ ನವರಾತ್ರಿಯ ಆಚರಣೆಗೆ ಸಾಮಾಜಿಕ ಅರ್ಥ ನೀಡುವ ಮೊದಲ ಹೆಜ್ಜೆಯಾಗಿದೆ.**

# ದೇವಿಯ ಆರಾಧನೆಯ ನಡುವೆ ಮಹಿಳೆಯ ಗೌರವವೆಲ್ಲಿ?

## ನವರಾತ್ರಿಯ ಭಕ್ತಿಯಾಚೆಗೆ ಮಹಿಳಾ ಶಿಕ್ಷಣ, ಸುರಕ್ಷತೆ, ಸಮಾನತೆ ಮತ್ತು ಸ್ವಾವಲಂಬನೆಯ ಅಗತ್ಯ

**ಮಹಿಳಾ ಶಿಕ್ಷಣ ಸಬಲೀಕರಣದ ಮೊದಲ ಮೆಟ್ಟಿಲು :** ಶಿಕ್ಷಣವು ಮಹಿಳೆಯ ಸ್ವಾವಲಂಬನೆಗೆ ಭದ್ರ ಬುನಾದಿಯಾಗಿದೆ. ಹೆಣ್ಣುಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆತಾಗ ಅವರಲ್ಲಿ ಆತ್ಮವಿಶ್ವಾಸ, ಸ್ವತಂತ್ರ ಚಿಂತನೆ ಮತ್ತು ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಬೆಳೆಯುತ್ತದೆ. ಆದರೆ ಇಂದಿಗೂ ಕೆಲವು ಕುಟುಂಬಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕಿಂತ ಮದುವೆಗೆ ಹೆಚ್ಚಿನ ಆದ್ಯತೆ ನೀಡುವ ಮನೋಭಾವ ಕಂಡುಬರುತ್ತದೆ. ಸರಸ್ವತಿಯನ್ನು ವಿದ್ಯೆಯ ಅಧಿದೇವತೆಯೆಂದು ಆರಾಧಿಸುವ ನಾವು, ನಮ್ಮ ಮನೆಯ ಹೆಣ್ಣುಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡದಿದ್ದರೆ ಆ ಆರಾಧನೆಯ ಅರ್ಥವೇನು? ಹೆಣ್ಣುಮಕ್ಕಳ ಕನಸುಗಳಿಗೆ ಅವಕಾಶ ನೀಡಬೇಕು. ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನ, ಕೃಷಿ, ಸಾಹಿತ್ಯ, ಆಡಳಿತ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ಸಾಧನೆ ಮಾಡಲು ಕುಟುಂಬ ಮತ್ತು ಸಮಾಜ ಬೆಂಬಲವಾಗಿ ನಿಲ್ಲಬೇಕು. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಮಾಡುವ ಹೂಡಿಕೆ ಕೇವಲ ಒಬ್ಬ ವ್ಯಕ್ತಿಯ ಭವಿಷ್ಯವನ್ನು ರೂಪಿಸುವುದಿಲ್ಲ ಅದು ಕುಟುಂಬ ಮತ್ತು ಸಮಾಜದ ಪ್ರಗತಿಗೂ ನೆರವಾಗುತ್ತದೆ.

**ಮಹಿಳಾ ಸುರಕ್ಷತೆ:** ಸಮಾಜದ ನೈತಿಕ ಜವಾಬ್ದಾರಿ ಮಹಿಳೆಯರಿಗೆ ಗೌರವ ನೀಡುವುದೆಂದರೆ ಕೇವಲ ಹಬ್ಬದ ದಿನಗಳಲ್ಲಿ ಸನ್ಮಾನಿಸುವುದಲ್ಲ. ಅವರು ಭಯವಿಲ್ಲದೆ ಬದುಕುವ ವಾತಾವರಣವನ್ನು ನಿರ್ಮಿಸುವುದಾಗಿದೆ. ಮನೆ, ಶಾಲೆ, ಕಾಲೇಜು, ಉದ್ಯೋಗಸ್ಥಳ ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಮಹಿಳೆಯರ ಸುರಕ್ಷತೆ ಖಚಿತವಾಗಬೇಕು.ಮಹಿಳೆಯರ ಮೇಲಿನ ಕಿರುಕುಳ, ಕೌಟುಂಬಿಕ ಹಿಂಸೆ, ಲೈಂಗಿಕ ದೌರ್ಜನ್ಯ ಮತ್ತು ಸಾಮಾಜಿಕ ಅವಮಾನಗಳು ನಾಗರಿಕ ಸಮಾಜಕ್ಕೆ ಕಳಂಕವಾಗಿವೆ. ಇಂತಹ ಘಟನೆಗಳನ್ನು ತಡೆಯಲು ಕಾನೂನುಗಳ ಪರಿಣಾಮಕಾರಿ ಅನುಷ್ಠಾನದ ಜೊತೆಗೆ ಜನರ ಮನೋಭಾವದಲ್ಲೂ ಬದಲಾವಣೆ ಅಗತ್ಯವಾಗಿದೆ.ದೇವಿಗೆ ಆರತಿ ಬೆಳಗುವ ಕೈಗಳು ಮಹಿಳೆಯರ ಮೇಲಿನ ಅನ್ಯಾಯವನ್ನು ಕಂಡಾಗ ಮೌನವಾಗಿರಬಾರದು. ಅನ್ಯಾಯವನ್ನು ಪ್ರಶ್ನಿಸುವ ಧೈರ್ಯ, ಸಂತ್ರಸ್ತರಿಗೆ ಬೆಂಬಲ ನೀಡುವ ಮಾನವೀಯತೆ ಮತ್ತು ತಪ್ಪಿತಸ್ಥರನ್ನು ಕಾನೂನಿನ ಮುಂದೆ ತರುವ ಜವಾಬ್ದಾರಿ ಸಮಾಜದಲ್ಲಿ ಬೆಳೆಯಬೇಕು. **ಸಮಾನತೆ:** ಪೂಜೆಯಲ್ಲಿ ಮಾತ್ರವಲ್ಲ, ಬದುಕಿನಲ್ಲೂ ಇರಲಿ :



ಮಹಿಳೆಯರನ್ನು ದೇವತೆಯ ಸ್ಥಾನದಲ್ಲಿಟ್ಟು ಪೂಜಿಸುವುದಕ್ಕಿಂತ ಅವರನ್ನು ಸಮಾನ ಹಕ್ಕುಗಳಿರುವ ವ್ಯಕ್ತಿಗಳಾಗಿ ಗೌರವಿಸುವುದು ಮುಖ್ಯವಾಗಿದೆ. ಕುಟುಂಬದ ನಿರ್ಧಾರಗಳಲ್ಲಿ ಮಹಿಳೆಯ ಅಭಿಪ್ರಾಯಕ್ಕೆ ಮನ್ನಣೆ ನೀಡಬೇಕು. ಉದ್ಯೋಗದಲ್ಲಿ ಸಮಾನ ಅವಕಾಶ, ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ನಾಯಕತ್ವದ ಸ್ಥಾನಗಳಲ್ಲಿ ಭಾಗವಹಿಸುವ ಅವಕಾಶ ದೊರೆಯಬೇಕು.ಮಹಿಳೆಯರನ್ನು ಕೇವಲ ತಾಯಿ, ಪತ್ನಿ ಅಥವಾ ಮಗಳ ಪಾತ್ರಗಳಿಗೆ ಸೀಮಿತಗೊಳಿಸದೆ, ಅವರ ವೈಯಕ್ತಿಕ ಆಸಕ್ತಿ, ಪ್ರತಿಭೆ ಮತ್ತು ಸ್ವತಂತ್ರ ವ್ಯಕ್ತಿತ್ವವನ್ನು ಗುರುತಿಸಬೇಕು. ಮನೆಯ ಜವಾಬ್ದಾರಿಗಳೂ ಮಹಿಳೆಯೊಬ್ಬಳದ್ದೇ ಎಂಬ ಮನೋಭಾವ ಬದಲಾಗಬೇಕು. ಕುಟುಂಬದ ಪ್ರತಿಯೊಬ್ಬರೂ ಜವಾಬ್ದಾರಿಗಳನ್ನು ಹಂಚಿಕೊಂಡಾಗ ಸಮಾನತೆಯ ಸಂಸ್ಕೃತಿ ಬೆಳೆಯುತ್ತದೆ. **ಸ್ವಾವಲಂಬನೆಯೇ ಮಹಿಳೆಯ ನಿಜವಾದ ಶಕ್ತಿ:** ಆರ್ಥಿಕ ಸ್ವಾವಲಂಬನೆ ಮಹಿಳೆಯ ಆತ್ಮವಿಶ್ವಾಸ ಮತ್ತು ಸ್ವತಂತ್ರ ನಿರ್ಧಾರಗಳಿಗೆ ಬಲ ನೀಡುತ್ತದೆ. ಉದ್ಯೋಗ, ಸ್ವಯಂ ಉದ್ಯಮ, ಕೃಷಿ, ವ್ಯಾಪಾರ ಹಾಗೂ ಕೌಶಲಾಭಿವೃದ್ಧಿಯ ಮೂಲಕ ಮಹಿಳೆಯರು ತಮ್ಮ ಬದುಕನ್ನು ರೂಪಿಸಿಕೊಳ್ಳಲು ಅವಕಾಶ ದೊರೆಯಬೇಕು. ಲಕ್ಷ್ಮಿಯನ್ನು ಸಂಪತ್ತಿನ ಅಧಿದೇವತೆಯೆಂದು ಆರಾಧಿಸುವ ಸಮಾಜವು ಮಹಿಳೆಯ ಆರ್ಥಿಕ ಸ್ವಾತಂತ್ರ್ಯವನ್ನೂ ಗೌರವಿಸಬೇಕು. ಮಹಿಳೆಯರು ಗಳಿಸುವ ಆದಾಯ, ಆಸ್ತಿ ಮತ್ತು ಉಳಿತಾಯದ ಮೇಲೆ ಅವರಿಗೆ ನ್ಯಾಯಯುತ ಹಕ್ಕು ಹಾಗೂ ನಿರ್ಧಾರ ಸ್ವಾತಂತ್ರ್ಯ ಇರಬೇಕು. ಮಹಿಳೆಯ ಸ್ವಾವಲಂಬನೆ ಕುಟುಂಬಕ್ಕೆ ಹೊರೆಯಾಗುವುದಿಲ್ಲ; ಬದಲಾಗಿ ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಬಲಪಡಿಸುತ್ತದೆ.

**ಆಚರಣೆಯಿಂದ ಆಚಾರದವರೆಗೆ :** ನವರಾತ್ರಿಯ ನಿಜವಾದ ಸಂದೇಶ ಶಕ್ತಿ, ಧೈರ್ಯ, ಜ್ಞಾನ ಮತ್ತು ಒಳಿತಿನ ವಿಜಯವಾಗಿದೆ. ಈ ಮೌಲ್ಯಗಳು ಕೇವಲ ಪೂಜಾಮಂದಿರಗಳಿಗೆ ಸೀಮಿತವಾಗದೆ ನಮ್ಮ ಮನೆಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ, ಉದ್ಯೋಗಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಪ್ರತಿಫಲಿಸಬೇಕು. ಹೆಣ್ಣುಮಗುವಿನ ಜನನವನ್ನು ಸಂಭ್ರಮಿಸುವುದು, ಆಕೆಯ ಶಿಕ್ಷಣಕ್ಕೆ ಬೆಂಬಲ ನೀಡುವುದು, ಮಹಿಳೆಯ ಅಭಿಪ್ರಾಯವನ್ನು ಗೌರವಿಸುವುದು ಮತ್ತು ಅನ್ಯಾಯದ ವಿರುದ್ಧ ಧ್ವನಿ ಎತ್ತುವುದು ನಿಜವಾದ ಸಾಮಾಜಿಕ ಪರಿವರ್ತನೆಯ ಹೆಜ್ಜೆಗಳಾಗಿವೆ. ದೇವಿಯನ್ನು ಪೂಜಿಸುವುದು ನಮ್ಮ ನಂಬಿಕೆ ಮಹಿಳೆಯನ್ನು ಗೌರವಿಸುವುದು ನಮ್ಮ ನೈತಿಕ ಕರ್ತವ್ಯ.

ದೇವಿಯ ಮುಂದೆ ಬೆಳಗುವ ದೀಪಕ್ಕಿಂತ ಮಹಿಳೆಯ ಬದುಕಿನಲ್ಲಿ ಬೆಳಗುವ ಶಿಕ್ಷಣ, ಸ್ವಾತಂತ್ರ್ಯ, ಸುರಕ್ಷತೆ ಮತ್ತು ಸಮಾನತೆಯ ಬೆಳಕು ಹೆಚ್ಚು ಅರ್ಥಪೂರ್ಣ. ಮಹಿಳೆಯನ್ನು ದೇವತೆಯೆಂದು ಕೊಂಡಾಡುವುದಕ್ಕಿಂತ ಆಕೆಯನ್ನು ಗೌರವಯುತವಾಗಿ ಬದುಕಲು ಬಿಡುವ ಸಮಾಜ ನಿರ್ಮಾಣವಾದಾಗಲೇ ನವರಾತ್ರಿಯ ಆರಾಧನೆ ನಿಜವಾದ ಸಾರ್ಥಕತೆ ಪಡೆಯುತ್ತದೆ.

---



# ರಾಮಾಯಣ

19.. ಹನುಮಂತನಿಂದ ಧೂಮಾಕ್ಷ

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಹಾಗೆ ನೆನೆಸಿಕೊಂಡಾಗ ಆ ಕ್ಷಣವೇ ಬಂದ ಗರುಡನು ಬಂಧನವನ್ನು ಬಿಡಿಸಿದ. ಪರಮಪುರುಷನಿಗೆ ಬಂಧನವೆಲ್ಲಿಯದು? ರಾಮಪುರದರಸನು ಮನುಜಾಕೃತಿಯನ್ನು ತಾಳಿ ಲೀಲೆಯನ್ನು ತೋರಿಸುತ್ತಾನಲ್ಲದೆ ಆ ನಿರ್ಮಾಯನು ಈ ಧರೆಯಲ್ಲಿ ಒಂದಿಷ್ಟುದರೂ ವಿಪತ್ತಿಗೆ ಒಳಗಾಗುತ್ತಾನೆಯೇ? ಭಕ್ತರ ಸಂಕ್ಲೇಶಗಳನ್ನು ಪರಿಹರಿಸುವ ಜಗತ್ ಸಾಕ್ಷಿಕನಿಗೆ, ಗಿರಿಸುತೆಯೇ, ಹೇಗೆ ತಾನೇ ಕಷ್ಟಗಳುಂಟಾಗಲು ಸಾಧ್ಯ? ಅಗಜೆಯೇ, ಈಶನ ಆಜ್ಞೆಯಿಂದ ಬಂದು ರಾಮಲಕ್ಷ್ಮಣರ ಕಟ್ಟುಗಳನ್ನು ತೆಗೆದುಹಾಕಿ ಪಕ್ಷಿರಾಜನು ಮರಳಿದ ಬಳಿಕ ಕಪಿಸಂತತಿಯು ಭೋರೆಂದು ಆರ್ಭಟಿಸುತ್ತ ಕೂಗಾಡುತ್ತಿದ್ದರು ದ್ವಾರಗಳಲ್ಲಿ ಎದುರಾದ ನಿಶಾಚರರನ್ನು ತರಿದು ಒಟ್ಟುತ್ತ ನಗರವನ್ನು ಹೊಕ್ಕು ಆವೇಶದಿಂದ ಹರಿದಾಡುತ್ತಿರಲು, ಆ ಗಲಭೆಯು ರಾವಣೇಶ್ವರನ ಕಿವಿಗಳಿಗೆ ಬಿದ್ದಿತು. ಆ ಕೋಲಾಹಲದ ಶಬ್ದವನ್ನು ಕೇಳಿ ಕೋಪಾತಿಶಯದಿಂದ ತನ್ನ ಸಭೆಗೆ ಬಂದ ಶೂರರಾದ ಸೇನಾಪತಿಗಳನ್ನೂ ಅಮಾತ್ಯರುಗಳನ್ನೂ ಕರೆದು ಖೇದದಿಂದ ಕೂಡಿ, ವಾನರಸೇನೆಯು ಮೇರೆವರಿಯುತ್ತ ಭೋರ್ಗರೆಯುತ್ತಿದೆಯಲ್ಲ, ಶುಭಕರವಾದುದೇನಾದರೂ ಅವರಿಗೆ ಸಂಭವಿಸಿರುವುದರಲ್ಲಿ ಸಂಶಯವೇ ಇಲ್ಲ, ಈಗ ಅವರದು ಸಂಕ್ಲೇಶಕರವಾದ ಕೋಲಾಹಲವಲ್ಲ. ಸುರಪಜಿತನು ಆ ರಾಜಕುಮಾರರಿಬ್ಬರನ್ನೂ ತನ್ನ ಸರ್ಪಾಸ್ತ್ರದಿಂದ ಕಟ್ಟಿಹಾಕಿ ನೆಲಕ್ಕುರುಳಿಸಿದ್ದಾನೆ. ಮಿಕ್ಕ ಕಪಿನಾಯಕರೂ ನೆಲದ ಮೇಲೆ ಬಿದ್ದಿದ್ದಾರೆ. ಹಾಗಾದುದನ್ನು ಎಲ್ಲರೂ ಬಲ್ಲರು. ಇದ್ದಕ್ಕಿದ್ದ ಹಾಗೇ ಅದ್ಭುತವಾದುದೇನೋ ಸಂಭವಿಸಿದಂತೆ ಕಾಣುತ್ತದೆ. ಅದೇನೆಂಬುದನ್ನು ತಿಳಿದು ಬನ್ನಿ ಎಂದು ದಶಾಸ್ಯನು ಬೆಸಸಿದ. ಆಗ ದೈತ್ಯರುಗಳು ಎತ್ತರವಾದ ಸೌದಗಳ ಮೇಲ್ತುದಿಗೆ ಹೋಗಿ ಸುತ್ತಲೂ ಕಪಿವೃಂದಗಳಿದ್ದತ್ತ ದುಮ್ಮಾನದಿಂದ ನಿಟ್ಟಿಸಿದರು. ನಕ್ಷತ್ರಗಳ ಮಧ್ಯದಲ್ಲಿ ನಿಂತುಕೊಳ್ಳುವಂತೆ ಕಪಿಸೈನ್ಯದ ನಡುವೆ ನಿಂತ ರಾಮಲಕ್ಷ್ಮಣರು ಅವರಿಗೆ ಸೂಚನೆಗಳನ್ನು ನೀಡುತ್ತಿರುವ ದೃಶ್ಯವು ಅವರ ಕಣ್ಣಿಗೆ ಬಿತ್ತು ಇದರಿಂದಾಗಿ ಅವರ ಹೃದಯಗಳು ಹೊಡೆದುಕೊಳ್ಳಲಾರಭಿಸಿದುವು. ಕೆಳಗಿಳಿದು ಬಂದ ಚಾರರು ಆ ವಿಚಾರವನ್ನು ದೈತ್ಯರಾಜನಿಗೆ ಹೇಳಿದರು. ಮಹಾಪ್ರಭು, ನೆಲದಲ್ಲಿ ಬಿದ್ದಿದ್ದ ಅರಸುಕುವರರು ಈಗ ಕಟ್ಟುಗಳಿಲ್ಲದ ಮದವಾರಣಗಳಂತೆ ಆಜ್ಞೆಗಳನ್ನು ನೀಡುತ್ತಿದ್ದಾರೆ. ಆ ಮಾತುಗಳನ್ನು ಕೇಳಿ ರಾವಣನಿಗೆ ಕಿವಿಯಲ್ಲಿ ಕಾಸಿದ ಕಬ್ಬಿಣದ ಸಲಾಕೆಗಳನ್ನು ಜೋರಾಗಿ ಎಟ್ಟಿದಂತೆ ಆಯಿತು. ಮಾತುಗಳೇ ಹೊರಡದೆ ಅವನು ಉದ್ವಿಗ್ನ ಕ್ಷಬವಣೆಯ ಮಧ್ಯದಲ್ಲಿಯೇ ಸಾವರಿಸಿಕೊಂಡ ಅಸುರೇಶ್ವರನು ನಿಧಾನವಾಗಿ, ದೇವಾಸುರಾದ್ಯರಿಗೆ ಬಿಡಿಸಲು ಸಾಧ್ಯವಾಗದ ನನ್ನ ಮಗನ ಓಇ ಅವರಿಬ್ಬರ ವಿಷಯದಲ್ಲಿ ಸುಳ್ಳಾಗಿಹೋಯಿತಲ್ಲ! ಶಿವ ಶಿವಾ, ಕಾಲಕರ್ಮಬಲವು ಇನ್ನೂ ಹೇಗಿದೆಯೋ! ಸರ್ಪಾಸ್ತ್ರದ ವೈಭವವೇ ಮುಗಿದುಹೋಯಿತೇ! ಕಪಿಸೇನೆಯು ಮತ್ತೆ ನನ್ನ ನಗರದ ಕಡೆಗೆ ಬರುವಂತಾಯಿತೇ? ಮತ್ತೆ ರಘುವರನ ಕೈ ಮೇಲಾಯಿತೇ!'' ಎಂದು ಕಾಳಿರಿಗದಂತೆ ಬುಸುಗುಟ್ಟಿದ ಈ ದುರಾತ್ಮರನ್ನು ತರಿದುಹಾಕದೆ ಉಳಿಸಿದರೆ ಎಂದಿಗಾದರೂ ಇವರು ಅಪಾಯಕಾರಿಗಳು ಎಂದುಕೊಂಡು ಧೂಮ್ರಾಕ್ಷನನ್ನು ಕರೆದು ಈ ರೀತಿ ಅಪ್ಪಣೆಯಿತ್ತ ನೀನು ಹಿಂದೆಲ್ಲ ಬಿಡುಗಣ್ಣರ ಬಲವನ್ನು ಅಸೀಮ ಸಾಹಸದಿಂದಲೂ ನಿರ್ಭೀತಿಯಿಂದಲೂ ಕಂಗೆಡಿಸಿದವನು ಆದ್ದರಿಂದಲೇ ನಾನೀಗ ರಾಮಲಕ್ಷ್ಮಣರನ್ನೆದುರಿಸಲು ನಿನ್ನನ್ನು ಕಳಿಸುತ್ತಿದ್ದೇನೆ. ಅವರಿಬ್ಬರನ್ನೂ ನೆಲಕ್ಕಿಕ್ಕಿ ಬಾ. ಆಗ ಧೂಮಾಕ್ಷನು ಮೀಸೆಯನ್ನು ತಿರುವಿಕೊಂಡ ನಮ್ಮ ಚದುರಂಗ ಬಲದೊಡನೆ ಹೋಗಿ ಶಾಖಾಮೃಗನಾಯಕರನ್ನೆಲ್ಲ ತರಿದಿಟ್ಟು, ರಘುವಂಶಜರನ್ನು ನೆಲಕ್ಕೆ ಅಪ್ಪಳಿಸಿ ಬೇಗನೇ ವಾಪಸಾಗುತ್ತೇನೆ ಎಂದು ಗರ್ಜಿಸಿದ ತಕ್ಷಣವೇ ನಿಶಾಚರಸೈನ್ಯವು ಸೇರಿತು. ರಥಗಳು ಗಾಡಿಗಳು ಕುದುರೆಗಳು ಆನೆಗಳು ಒಂಟೆಗಳು ನಾಗರುಗಳು ಮೊದಲಾದವುಗಳನ್ನೇರಿಯೂ ನೆಲದ ಮೇಲೆ ನಡೆಯುತ್ತಲೂ ಬರಸಿಡಿಲ ಬಳಗದಂತೆ ಸಿಡಿಯುತ್ತ ಅರೆನಿಮಿಷದಲ್ಲಿ ಸೈನ್ಯವು ಬಂದು ಸೇರಿತು. ಆ ಸೈನ್ಯದೊಡನೆ ಧೂಮ್ರಾಕ್ಷನು ಕೋಪಾವೇಶದಿಂದ ಯುದ್ಧಕ್ಕೆಂದು ಹೊರಟ. ಆಗ ನಾನಾ ಬಗೆಯ ದುಶ್ಶಕುನಗಳು ತೋರಿದವು ಭೂಮಿ ನಡುಗಿತು, ಆಕಾಶದಿಂದ ನೆತ್ತರ ಧಾರೆ ಸುರಿಯಿತು, ಮರಗಳು ನೆಲಕ್ಕುರುಳಿದುವು, ಬಿರುಗಾಳಿ ಬೀಸಿ ಭೂಮ್ಯಾಕಾಶಗಳನ್ನು ಧೂಳು ಆವರಿಸಿತು.

ಮುಂದುವರೆಯುವುದು

---

# ಅಸಹಿಷ್ಣುತೆ: ಬಲಶಾಲಿ ಭಾರತದ ಆತ್ಮಕ್ಕೆ ತಗುಲುತ್ತಿರುವ ಶಾಪ

ಒಂದು ನಾಡು ಕೇವಲ ಮಣ್ಣು, ಕಲ್ಲು ಅಥವಾ ಗಡಿರೇಖೆಗಳಿಂದ ರಾಷ್ಟ್ರವೆನಿಸಿಕೊಳ್ಳುವುದಿಲ್ಲ ಬದಲಿಗೆ ಅಲ್ಲಿಯ ಜನರ ಪರಸ್ಪರ ಪ್ರೀತಿ, ಸಾಮರಸ್ಯ, ಅನ್ಯೋನ್ಯತೆ ಮತ್ತು ಸಹಿಷ್ಣುತೆಯಿಂದ ರೂಪಿತವಾಗುತ್ತದೆ. ಜಗತ್ತಿಗೇ ವಸುಧೈವ ಕುಟುಂಬಕಂ (ಇಡೀ ಜಗತ್ತೇ ಒಂದು ಕುಟುಂಬ) ಎಂಬ ಉನ್ನತ ಸಂದೇಶ ನೀಡಿದ ಹೆಮ್ಮೆಯ ಇತಿಹಾಸ ನಮ್ಮ ಭಾರತದ್ದು. ಆದರೆ, ಇತ್ತೀಚಿನ ದಿನಗಳಲ್ಲಿ ನಮ್ಮ ಸಮಾಜದಲ್ಲಿ ಸದ್ದಿಲ್ಲದೆ ಚಿಗುರುತ್ತಿರುವ 'ಅಸಹಿಷ್ಣುತೆ' ಎಂಬ ವಿಷಬೀಜ, ನಮ್ಮ ದೇಶದ ಶ್ರೇಷ್ಠ ಪರಂಪರೆ ಮತ್ತು ಭವಿಷ್ಯದ ಅಡಿಪಾಯಕ್ಕೆ ಕಂಟಕವಾಗುತ್ತಿದೆಯೇ? ಎಂಬ ಆತಂಕ ಪ್ರತಿಯೊಬ್ಬ ಸತ್ಪ್ರಜೆಯನ್ನೂ ಕಾಡಲಾರಂಭಿಸಿದೆ. ನಮ್ಮ ನಡುವೆ ಬೆಳೆಯುತ್ತಿರುವ ಅಸಹಿಷ್ಣುತೆಯ ಕಹಿ ಮುಖಗಳುಇಂದು ನಮ್ಮ ಸುತ್ತಮುತ್ತ ನಡೆಯುತ್ತಿರುವ ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, **ಅಸಹಿಷ್ಣುತೆ ಹೇಗೆ ಪ್ರತಿಯೊಂದು ಕ್ಷೇತ್ರಕ್ಕೂ ಕಾಲಿಟ್ಟಿದೆ ಎಂಬುದು ಸ್ಪಷ್ಟವಾಗುತ್ತದೆ: ರಾಷ್ಟ್ರನಾಯಕರ ವೈಯಕ್ತಿಕ ನಿಂದನೆ:** ಈ ದೇಶದ ಸ್ವಾತಂತ್ರ್ಯಕ್ಕಾಗಿ, ಸಂವಿಧಾನ ರಚನೆಗಾಗಿ ತಮ್ಮ ಜೀವನವನ್ನೇ ಧಾರೆ ಎರೆದ ಡಾ. ಬಿ.ಆರ್. ಅಂಬೇಡ್ಕರ್,ಈ ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಜೀವಿತಾವಧಿಯ ಬಹುಪಾಲು ಸಮಯವನ್ನು ಕಳೆದ ಮಹಾತ್ಮ ಗಾಂಧೀಜಿ, ಅವರಂತಹ ಮಹಾನ್ ನಾಯಕರ ವೈಯಕ್ತಿಕ ವಿಚಾರಗಳನ್ನು ಸಾರ್ವಜನಿಕವಾಗಿ ಅಪಹಾಸ್ಯ ಮಾಡುವುದು ಮತ್ತು ಟೀಕಿಸುವುದು ಇತ್ತೀಚೆಗೆ ಸಾಮಾನ್ಯವಾಗಿದೆ.

**ರಾಜಕೀಯ ಸಂಸ್ಕೃತಿಯ ಕುಸಿತ:** ದೇಶದ ಪ್ರಧಾನಮಂತ್ರಿಗಳನ್ನು, ರಾಜ್ಯದ ಮುಖ್ಯಮಂತ್ರಿಗಳನ್ನು ಗೌರವಯುತವಾಗಿ ವಿಮರ್ಶಿಸುವ ಬದಲು ಜಾಲತಾಣಗಳಲ್ಲಿ ಅಸಭ್ಯವಾಗಿ ಟ್ರೋಲ್ ಮಾಡುವುದು, ಹೀಯಾಳಿಸುವುದು ಸಾಂವಿಧಾನಿಕ ಹುದ್ದೆಗಳ ಗೌರವಕ್ಕೆ ಧಕ್ಕೆ ತರುತ್ತಿದೆ. ಆಡಳಿತ ಮತ್ತು ವಿರೋಧ ಪಕ್ಷಗಳು ವೈಚಾರಿಕವಾಗಿ ಚರ್ಚಿಸುವ ಬದಲು, ಪರಸ್ಪರ ವೈಯಕ್ತಿಕ ನಿಂದನೆಗೆ ಇಳಿಯುತ್ತಿರುವುದು ಪ್ರಜಾಪ್ರಭುತ್ವದ ಮೂಲ ಆಶಯಕ್ಕೇ ಕೊಡಲಿಪೆಟ್ಟು. **ಸಾಹಿತ್ಯ, ಕ್ರೀಡೆ ಮತ್ತು ಪ್ರತಿಭಟನೆಗಳು:** ಸಾಹಿತಿಗಳಿಗೆ, ಕವಿಗಳಿಗೆ ಗೌರವ ಅಥವಾ ಪ್ರಶಸ್ತಿ ಬಂದಾಗ ಅಸೂಯೆಯಿಂದ ನೋಡಲಾಗುತ್ತಿದೆ. ವಿಶ್ವಮಟ್ಟದಲ್ಲಿ ದೇಶದ ಬಾವುಟ ಹಾರಿಸುವ ಕ್ರೀಡಾಪಟುಗಳು ಒಂದೆರಡು ಪಂದ್ಯಗಳಲ್ಲಿ ಸೋತರೆ, ಅವರ ಹಿಂದಿನ ಪರಿಶ್ರಮವನ್ನು ಮರೆತು ಕ್ರೂರವಾಗಿ ಟೀಕಿಸಲಾಗುತ್ತದೆ. ಸರ್ಕಾರದ ಯೋಜನೆಗಳ ಸಾಧಕ-ಬಾಧಕಗಳನ್ನು ವೈಜ್ಞಾನಿಕವಾಗಿ ಚರ್ಚಿಸದೆ, ಪೂರ್ವಗ್ರಹ ಪೀಡಿತರಾಗಿ ಪ್ರತಿಭಟಿಸುವುದು ಹೆಜ್ಜೆಗೆಜ್ಜೆಗೆ ಕಾಣಸಿಗುತ್ತಿದೆ.**ತಪ್ಪು ಮಾಡಿದವರ ಪರವಾಗಿ ನಿಲ್ಲುವುದು:** ತಪ್ಪು ಯಾರೇ ಮಾಡಿದರೂ ತಪ್ಪೇ. ಅದು ನಮ್ಮ ಧರ್ಮ, ನಮ್ಮ ಜಾತಿ, ನಮ್ಮ ಊರು, ನಮ್ಮ ಪಕ್ಷ, ಅಷ್ಟೇ ಏಕೆ? ನಮ್ಮ ಮನೆಯವರು, ನಾವು ಮಾಡಿದರೂ ಅದು ತಪ್ಪೇ. ಇದನ್ನು ಹೇಳಲು ನಮಗೇಕೆ ಹಿಂಜರಿಕೆ. ಈ ಮೇಲಿನ ಕಾರಣದಿಂದ ನಾವು ತಪ್ಪು ಮಾಡಿದವರ ಪದ ನಿಂತರೆ



ತಪ್ಪು ಮಾಡುವವರು ಸಂಖ್ಯೆ ಹೆಚ್ಚುತ್ತಲೇ ಹೋಗುತ್ತದೆ. ದೇಶದ ಸಂವಿಧಾನ, ಕಾನೂನಿನಡಿ ಎಲ್ಲರೂ ಸಮಾನರು ಎಂದು ಅರಿಯಬೇಕಿದೆ. **ಇತಿಹಾಸ ನೀಡುವ ಎಚ್ಚರಿಕೆ:** ಅಸಹಿಷ್ಣುತೆಯಿಂದ ಬೆಂಕಿ ಬಿದ್ದ ದೇಶಗಳು ಅಸಹಿಷ್ಣುತೆ ಎನ್ನುವುದು ಕೇವಲ ಮಾನಸಿಕ ವಿಕೃತಿಯಲ್ಲ, ಅದು ದೇಶಗಳನ್ನೇ ಸರ್ವನಾಶ ಮಾಡುವ ಅಸ್ತ್ರ. ಇತಿಹಾಸದ ಪುಟಗಳನ್ನು ತಿರುವಿದರೆ ಇದಕ್ಕೆ ಸಾಕ್ಷಿಗಳು ಸಿಗುತ್ತವೆ:1. ಸಿರಿಯಾ ಮತ್ತು ಇರಾಕ್: ಧಾರ್ಮಿಕ ಮತ್ತು ಗುಂಪುಗಾರಿಕೆಯ ಅಸಹಿಷ್ಣುತೆ ಲಕ್ಷಾಂತರ ಜನರ ಜೀವ ತೆಗೆದು, ಶತಮಾನಗಳ ನಾಗರಿಕತೆಯನ್ನು ಬೂದಿ ಮಾಡಿತು.2. ರುವಾಂಡಾ: ಜನಾಂಗೀಯ ಅಸಹಿಷ್ಣುತೆಯಿಂದಾಗಿ ಕೆಲವೇ ತಿಂಗಳುಗಳಲ್ಲಿ ಲಕ್ಷಾಂತರ ಸೋದರರು ಪರಸ್ಪರ ಕಡಿದುಕೊಂಡು ಇಡೀ ದೇಶವೇ ರಕ್ತದ ಮಡುವಾಯಿತು.3.ಯುಗೊಸ್ಲಾವಿಯಾ: ಭಾಷಿಕ ಮತ್ತು ಸಾಂಸ್ಕೃತಿಕ ಅಸಹಿಷ್ಣುತೆ ಹಾಗೂ ದ್ವೇಷದ ಪರಿಣಾಮವಾಗಿ ಒಂದು ಬಲಶಾಲಿ ದೇಶವೇ ತುಂಡುತುಂಡಾಗಿ ಚಿದ್ರವಾಯಿತು.ಅಸಹಿಷ್ಣುತೆ ಹೊತ್ತಿಸಿದ ಬೆಂಕಿಗೆ ಯಾವುದೇ ಗಡಿಗಳಿರುವುದಿಲ್ಲ. ಅದು ಆರಂಭದಲ್ಲಿ ನೆರೆಯವರನ್ನು ಸುಡುತ್ತದೆ, ಅಂತಿಮವಾಗಿ ಇಡೀ ದೇಶವನ್ನೇ ದಹಿಸಿಬಿಡುತ್ತದೆ. **ಭಾರತಕ್ಕೆ ಅಸಹಿಷ್ಣುತೆಯಿಂದ ಎದುರಾಗಲಿರುವ ಅಪಾಯಗಳು :** ನಮ್ಮ ದೇಶ ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡುಕೊಂಡ ನಾಡು. ಇಲ್ಲಿ ಅಸಹಿಷ್ಣುತೆ ಬೆಳೆದರೆ: ದೇಶದ ಆಂತರಿಕ ಭದ್ರತೆ ಮತ್ತು ನೆಮ್ಮದಿ ಹಾಳಾಗುತ್ತದೆ. ಯುವಜನರ ಶಕ್ತಿ ಅಭಿವೃದ್ಧಿಯತ್ತ ಹರಿಯುವ ಬದಲು ದ್ವೇಷ-ಸಾಮಾಜಿಕ ಜಾಲತಾಣಗಳ ಅನಗತ್ಯ ರಾದ್ಧಾಂತಗಳಲ್ಲಿ ಪೋಲಾಗುತ್ತದೆ. ವಿದೇಶಿ ಹೂಡಿಕೆಗಳು ಕಡಿಮೆಯಾಗಿ, ದೇಶದ ಆರ್ಥಿಕ ಪ್ರಗತಿಗೆ ದೊಡ್ಡ ಹಿನ್ನಡೆಯಾಗುತ್ತದೆ. ಪ್ರಜಾಪ್ರಭುತ್ವದ ನಾಲ್ಕನೇ ಕಂಬಗಳಾದ ವಿಚಾರಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಗಳು ನಾಶವಾಗುತ್ತವೆ. ಕತ್ತಲೆಯಿಂದ ಬೆಳಕಿನತ್ತ: ಸೂಕ್ತ ಪರಿಹಾರಗಳು ಮತ್ತು ನಮ್ಮ ಕರ್ತವ್ಯಗಳುಈ ಅಸಹಿಷ್ಣುತೆಯೆಂಬ ಮಾರಕ ಕಾಯಿಲೆಯನ್ನು ತಡೆದು, ಬಲವಾದ ದೇಶವನ್ನು ಕಟ್ಟಲು ಸರ್ಕಾರ ಮತ್ತು ಪ್ರಜೆಗಳು ಕೈಜೋಡಿಸಬೇಕಾಗಿದೆ. 1. ಸರ್ಕಾರದ ಮತ್ತು ಆಡಳಿತಗಾರರ ಜವಾಬ್ದಾರಿ: ಸಂವಿಧಾನತ್ಮಕ ಮೌಲ್ಯಗಳ ಬೋಧನೆ: ಶಾಲಾ-ಕಾಲೇಜುಗಳ ಪಠ್ಯಕ್ರಮದಲ್ಲಿ ಬಾಲ್ಯದಿಂದಲೇ ಸಹನೆ, ಸೋದರತ್ವ ಮತ್ತು ಸಂವಿಧಾನದ ಆಶಯಗಳನ್ನು ಬೋಧಿಸಬೇಕು. ಸಾಮಾಜಿಕ ಜಾಲತಾಣಗಳ ಸದ್ಬಳಕೆಗೆ ನಿಯಮ: ದ್ವೇಷಪೂರಿತ ಭಾಷಣಗಳು, ನಾಯಕರ ವೈಯಕ್ತಿಕ ನಿಂದನೆ ಮತ್ತು ಸುಳ್ಳು ಸುದ್ದಿಗಳನ್ನು ಹರಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. **ಮಾದರಿ ನಡೆ:** ಜನಪ್ರತಿನಿಧಿಗಳು ಕೇವಲ ಅಧಿಕಾರಕ್ಕಾಗಿ ವೈಯಕ್ತಿಕ ನಿಂದನೆ ಮಾಡದೆ, ನಡವಳಿಕೆಯಲ್ಲಿ ಜನರಿಗೆ ಮಾದರಿಯಾಗಬೇಕು. **ನಾಗರಿಕರು ಮತ್ತು ಸಮಾಜದ ಕರ್ತವ್ಯ: ವಿಮರ್ಶೆ ಮತ್ತು ನಿಂದನೆ ನಡುವಿನ ವ್ಯತ್ಯಾಸ ತಿಳಿಯುವುದು:** ಸರ್ಕಾರದ ನಡೆಗಳು, ನಾಯಕರ ನಿರ್ಧಾರಗಳನ್ನು ವಿಮರ್ಶಿಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಆದರೆ ಅದು ಅಭಿವೃದ್ಧಿಪರ ಮತ್ತು ವೈಜ್ಞಾನಿಕವಾಗಿರಬೇಕೇ ಹೊರತು ವೈಯಕ್ತಿಕ ನಿದನೆಯಾಗಿರಬಾರದು ಸಾಮಾಜಿಕ ಜಾಲತಾಣಗಳ ವಿವೇಕಯುತ ಬಳಕೆ ಯಾವುದೇ ವಿಷಯವನ್ನು ಪರಿಶೀಲಿಸದೆ ಶೇರ್ ಮಾಡುವುದು, ಯಾರದೋ ಪ್ರಚೋದನೆಗೆ ಒಳಗಾಗಿ ಜಾಲತಾಣಗಳಲ್ಲಿ ಇತರರನ್ನು ಹೀಯಾಳಿಸುವುದನ್ನು ತಕ್ಷಣ ನಿಲ್ಲಿಸಬೇಕು. **ಸಾಧನೆ ಮತ್ತು ಸೋಲನ್ನು ಸ್ವೀಕರಿಸುವ ಮನೋಭಾವ:** ಕ್ರೀಡಾಪಟುಗಳು, ಸಾಹಿತಿಗಳು, ವಿಜ್ಞಾನಿಗಳು ದೇಶಕ್ಕೆ ತರುವ ಕೀರ್ತಿಯನ್ನು ಸಂಭ್ರಮಿಸೋಣ. ಕಷ್ಟದ ಸಮಯದಲ್ಲಿ ಅವರಿಗೆ ಬೆಂಬಲವಾಗಿ ನಿಲ್ಲೋಣ. ದೇಶಪ್ರೇಮ ಎಂದರೆ ಕೇವಲ ಜೈಕಾರವಲ್ಲ ದೇಶಪ್ರೇಮ ಎಂದರೆ ಕೇವಲ ರಾಷ್ಟ್ರಧ್ವಜ ಹಿಡಿದು ಘೋಷಣೆ ಕೂಗುವುದಷ್ಟೇ ಅಲ್ಲ ನಮ್ಮ ದೇಶದ ಸಹಪ್ರಜೆಯನ್ನು, ಭಿನ್ನ ಅಭಿಪ್ರಾಯವುಳ್ಳವರನ್ನು, ದೇಶಕ್ಕಾಗಿ ಶ್ರಮಿಸಿದ ನಾಯಕರನ್ನು ಗೌರವಿಸುವುದೇ ನಿಜವಾದ ದೇಶಪ್ರೇಮ. ನಮಗೆ ರಾಜಕೀಯ ಭಿನ್ನಾಭಿಪ್ರಾಯಗಳಿರಬಹುದು, ಸಿದ್ಧಾಂತಗಳ ವ್ಯತ್ಯಾಸವಿರಬಹುದು. ಆದರೆ ನಾವೆಲ್ಲರೂ ಭಾರತೀಯರು ಎಂಬ ಒಕ್ಕೂಟದ ಭಾವನೆ ಎಂದಿಗೂ ಸಡಿಲವಾಗಬಾರದು. ಬನ್ನಿ, ಅಸಹಿಷ್ಣುತೆಯೆಂಬ ಕತ್ತಲೆಯನ್ನು ಓಡಿಸಿ, ಪ್ರೀತಿ, ಸಹನೆ ಮತ್ತು ಗೌರವ ಎಂಬ ದೀಪಗಳನ್ನು ಬೆಳಗಿಸೋಣ. ನಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಭಾರತವನ್ನು ವಿಶ್ವದ ಅತ್ಯಂತ ಶಾಂತಿಯುತ ಹಾಗೂ ಬಲಶಾಲಿ ರಾಷ್ಟ್ರವನ್ನಾಗಿ ಮಾಡಲು ಪಣತೊಡೋಣ.



ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್, ಮಾಗಳ
ಪದವೀಧರ ಪ್ರಾಥಮಿಕ ಶಿಕ್ಷಕರು
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಮುದೇನೂರು,
ಹೂವಿನಹಡಗಲಿ, ವಿಜಯನಗರ ಜಿಲ್ಲೆ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಂಜೆ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ. ನೀವು ಮಕ್ಕಳೊಡನೆ ಸ್ವಲ್ಪ ಸಮಯ ಕಳೆಯಬೇಕು.

**ವೃಷಭ** ವಿಶೇಷವಾಗಿ ಹೃದಯ ರೋಗಿಗಳು ಕಾಫಿಯನ್ನು ಬಿಡಬೇಕು. ಇಂದು ನಿಮ್ಮ ಯಾವುದೇ ಚಲಿಸಬಲ್ಲ ಅಸ್ತಿಯನ್ನು ಕದಿಯಬಹುದು ಆದ್ದರಿಂದ ಸಾಧ್ಯವಾದಷ್ಟು ಅದರ ಬಗ್ಗೆ ಗಮನ ಹರಿಸಿ. ಇಂದು ಹಾಜರಾಗುವ ಸಮಾರಂಭದಲ್ಲಿ ಹೊಸ ಸ್ನೇಹ ಅಭಿವೃದ್ಧಿಯಾಗುತ್ತದೆ.

**ಮಿಥುನ** ನಿಮ್ಮ ಒತ್ತಡವನ್ನು ನೀವು ತೊಡೆದುಹಾಕಬಹುದು. ಇಂದು, ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ, ಆದರೆ ಕೆಲವು ಅಮೂಲ್ಯ ವಸ್ತುವಿನ ಕಳ್ಳತನದಿಂದಾಗಿ, ನಿಮ್ಮ ಮನಸ್ಥಿತಿಗೆ ತೊಂದರೆಯಾಗಬಹುದು.

**ಕರ್ಕಾಟಕ** ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ. ಮಕ್ಕಳು ನಿಮ್ಮ ದಿನವನ್ನು ಕಠಿಣಗೊಳಿಸುತ್ತಾರೆ. ಅವರ ಆಸಕ್ತಿ ಕಾಯ್ದುಕೊಳ್ಳಲು ಪ್ರೀತಿಯ ಅಸ್ತ್ರ ಬಳಸಿ.

**ಸಿಂಹ** ನಿಮ್ಮ ಮನಸ್ಸಿನಲ್ಲಿ ಸಕಾರಾತ್ಮಕ ಆಲೋಚನೆಗಳನ್ನು ತನ್ನಿ. ಜೀವನ ಸಂಗಾತಿಯೊಂದಿಗೆ ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಜಗಳವಾಗುವ ಸಾಧ್ಯತೆ ಇದೆ. ಇಂದು ನಿಮ್ಮ ದುಂದುಗಾರಿಕೆಯ ಮೇಲೆ ನಿಮ್ಮ ಸಂಗಾತಿ ನಿಮಗೆ ಮಾತುಗಳು ಹೇಳಬಹುದು.

**ಕನ್ಯಾ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಯಾವುದೇ ಹಳೆಯ ಸ್ನೇಹಿತ ಇಂದು ನಿಮ್ಮ ಬಳಿ ಹಣವನ್ನು ಕೇಳಬಹುದು. ನೀವು ಅವರಿಗೆ ಸಹಾಯ ಮಾಡಿದರೆ, ನಿಮ್ಮ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು ನೀವು ಅಪರೂಪಕ್ಕೆ ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ.

**ತುಲಾ** ನಿಮ್ಮ ಭಯವನ್ನು ಗುಣಪಡಿಸಲು ಇದು ಒಳ್ಳೆಯ ಸಮಯ. ಇದು ಭೌತಿಕ ಚೈತನ್ಯವನ್ನು ಕಡಿಮೆ ಮಾಡುವುದಲ್ಲದೇ ಜೀವಿತಾವಧಿಯನ್ನೂ ಕಡಿಮೆ ಮಾಡುತ್ತದೆ ಎಂದು ನೀವು ಅರ್ಥ ಮಾಡಿಕೊಳ್ಳಬೇಕು. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ .

**ವೃಶ್ಚಿಕ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ನಿಮ್ಮ ನೆರೆಹೊರೆಯವರು ನಿಮ್ಮ ಹತ್ತಿರ ಹಣ ಸಾಲ ಕೇಳಲು ಬರಬಹುದು, ಅವರಿಗೆ ಸಾಲ ಕೊಡುವುದಕ್ಕಿಂತ ಮುಂಚೆ ಅವರ ನಂಬಿಕೆಯನ್ನು ಅಗತ್ಯವಾಗಿ ಪರೀಕ್ಷಿಸಿ, ಇಲ್ಲದಿದ್ದರೆ ಹಣದ ನಷ್ಟವಾಗುವ ಸಾಧ್ಯತೆ ಇದೆ.

**ಧನಸ್ಸು** ಸಂತೋಷದ ಸುದ್ದಿ ಪಡೆಯುವ ಸಾಧ್ಯತೆಯಿದೆ. ಇಂದಿನ ದಿನ ಯಾರಿಗೂ ಸಾಲ ನೀಡಬೇಡಿ ಮತ್ತು ಕೊಡುವುದು ಅಗತ್ಯವಾಗಿದ್ದರೆ ಕೊಡುವವರಿಂದ ಅವರು ಯಾವಾಗ ಹಣವನ್ನು ಮರುಪಾವತಿ ಮಾಡುತ್ತಾರೆಂದು ಬರವಣಿಗೆಯಲ್ಲಿ ತೆಗೆದುಕೊಳ್ಳಿ ನಿಮ್ಮನ್ನು ಸಂತೋಷವಾಗಿಡುವುದನ್ನೇನಾದರೂ ಮಾಡಿ,

**ಮಕರ** ನಿಮ್ಮ ಕೋಪ ಕಡ್ಡಿಯನ್ನು ಗುಡ್ಡ ಮಾಡಬಹುದು–ಇದು ನಿಮ್ಮ ಕುಟುಂಬದ ಸದಸ್ಯರ ಅಸಮಾಧಾನಕ್ಕೆ ಕಾರಣವಾಗುತ್ತದೆ. ಕೋಪವನ್ನು ನಿಯಂತ್ರಣದಲ್ಲಿಡುವುದನ್ನು ಕಲಿತ ಆ ಮಹಾನ್ ಆತ್ಮಗಳೇ ಅದೃಷ್ಟಶಾಲಿಗಳು. ನಿಮ್ಮ ಕೋಪ ನಿಮ್ಮನ್ನು ಸುಡುವ ಮೊದಲು ನೀವೇ ಅದನ್ನು ಸುಟ್ಟುಬಿಡಿ.

**ಕುಂಭ** ನಿಮ್ಮ ಪೋಷಕರನ್ನು ಸಂತೋಷಗೊಳಿಸು ಎರಡನ್ನೂ ಸಂಭಾಳಿಸಬೇಕು. ಪ್ರೀತಿಯ ಸಂಗೀತವನ್ನು ಯಾವಾಗಲೂ ಅದರಲ್ಲೇ ಮುಳುಗಿರುವವರು ಕೇಳಬಹುದು. ಇದು ನೀವು ಈ ಪ್ರಪಂಚದ ಎಲ್ಲಾ ಹಾಡುಗಳನ್ನು ಮರೆಯುವಂತೆ ಮಾಡುತ್ತದೆ. ಕುಟುಂಬಕ್ಕೆ ಸಾಕಷ್ಟು ಸಮಯವನ್ನು ನೀಡುವುದಿಲ್ಲ

**ಮೀನ** ನಿಮ್ಮ ಒರಟು ವರ್ತನೆ ನಿಮ್ಮ ಪತ್ನಿಯೊಂದಿಗಿನ ಸಂಬಂಧವನ್ನು ಹಾಳು ಮಾಡಬಹುದು. ಏನಾದರೂ ಬಾಲಿಶವಾದದ್ದನ್ನು ಮಾಡುವ ಮೊದಲು ನಿಮ್ಮ ವರ್ತನೆಯ ಪರಿಣಾಮದ ಬಗ್ಗೆ ಆಲೋಚಿಸಿ. ಸಾಧ್ಯವಾದಲ್ಲಿ ದೂರ ಹೋಗಿ ನಿಮ್ಮ ಮನಸ್ಥಿತಿಯನ್ನು ಬದಲಾಯಿಸಿ.

# ಹಗುರವಾಗಿ ಮಾತನಾಡುವುದು ಕುಮಾರಸ್ವಾಮಿ ಅವರಿಗೆ ಶೋಭೆ ತರುವುದಿಲ್ಲ

• **ಉದಯವಾಹಿನಿ ಕಲಬುರಗಿ,**

ಸ್ಟಿಂಗ್ ಆಪರೇಷನ್ ವಿಚಾರವಾಗಿ ಲಗಾಮು ಇಲ್ಲದಂತೆ ಹಗುರವಾಗಿ ಮಾತನಾಡುವದು ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿಯವರಿಗೆ ಶೋಭೆ ತರುವದಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಎಐಸಿಸಿ ಅಧ್ಯಕ್ಷರು ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ತಮ್ಮದೇ ಆದ ತತ್ವ ಸಿದ್ದಾಂತದ ಪ್ರಕಾರ ರಾಜಕೀಯ ಮಾಡುತ್ತಾ ಬಂದಿದ್ದಾರೆ. ಸಚಿವ ಕುಮಾರಸ್ವಾಮಿಯಂತೆ ಅಧಿಕಾರದ ಆಸೆಗಾಗಿ ಎಂದೂ ತಪ್ಪು ನಡೆದುಕೊಂಡವರಲ್ಲ.ಕೇಂದ್ರ ಸಚಿವ ಕುಮಾರಸ್ವಾಮಿಯವರು ಜಾತ್ಯಾತೀತ ಪಕ್ಷದ ನಾಯಕನೆಂದು ಹೇಳಿಕೊಂಡು ಜಾತ್ಯಾತೀತ ಪಕ್ಷದ ಎಲ್ಲಾ ತತ್ವ ಸಿದ್ದಾಂತಗಳನ್ನು


ಉದಯವಾಹಿನಿ ಚಿತ್ರ

ಗಾಳಿಗೆ ತೂರಿ ಅಧಿಕಾರದ ಆಸೆಗಾಗಿ ಕೋಮುವಾದಿ ಬಿಜೆಪಿಯೊಂದಿಗೆ ಕೈಜೋಡಿಸಿ ಕೇಂದ್ರ ಸಚಿವರಾಗಿದ್ದಾರೆ. ಕೇಂದ್ರದಲ್ಲಿ ಇವರಿಗೆ ಯಾರೂ ಕೇಳದ ಕಾರಣ ರಾಜ್ಯ ರಾಜಕಾರಣದಲ್ಲಿ ಕೈಹಾಕುತ್ತಾ ಕಾಂಗ್ರೆಸ್ ಹಿರಿಯ ವರಿಷ್ಠ ನಾಯಕರಿಗೆ ಏಕವಚನದಲ್ಲಿ ಮಾತನಾಡಿರುವುದನ್ನು ಅವರು ಖಂಡಿಸಿದ್ದಾರೆ.ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರು ಅಭಿವೃದ್ಧಿ ಹರಿಕಾರರೆಂದು ಹೆಸರು ಮಾಡಿದ್ದಾರೆ. ಹಗಲು ರಾತ್ರಿ ಎನ್ನದೇ ಜನಸಾಮಾನ್ಯರ ಕೆಲಸಗಳನ್ನು ಮಾಡುತ್ತಾ ಸಾಗಿದ್ದಾರೆ.

ಕುಮಾರಸ್ವಾಮಿಯಂತೆ ಅಧಿಕಾರಕ್ಕಾಗಿ ಪಕ್ಷದ ಮೌಲ್ಯಗಳನ್ನು ದಿಕ್ಕುಪಾಲು ಮಾಡಿ ಕೋಮುವಾದಿ ಪಕ್ಷದೊಂದಿಗೆ ಒಪ್ಪಂದ ಮಾಡಿಕೊಂಡವರಲ್ಲ. ಕುಮಾರಸ್ವಾಮಿ ಎಂತವರು ಅಧಿಕಾರಕ್ಕಾಗಿ ಯಾವ ಮಟ್ಟಕ್ಕೂ ಇಳಿಯಲು ಹಿಂದೆ ಸರಿಯುವದಿಲ್ಲ ಎಂಬುದು ಈಗಾಗಲೇ ರಾಜ್ಯದ ಜನತೆಗೆ ಗೊತ್ತಾಗಿದೆ. ಮುಂದಿನ ಚುನಾವಣೆಯಲ್ಲಿ ಕುಮಾರಸ್ವಾಮಿಯವರ ಜೆಡಿ (ಎಸ್) ಪಕ್ಷಕ್ಕೆ ರಾಜ್ಯದ ಜನತೆ ತಕ್ಕ ಪಾಠ ಕಲಿಸಲಿದ್ದಾರೆ. ಇದರಿಂದ ಗಾಬರಿಗೊಂಡು ಕುಮಾರಸ್ವಾಮಿಯವರ ಏನೂ ತಿಳಿಯದೇ ಹಗುರವಾಗಿ ಮಾತನಾಡುತ್ತಿದ್ದಾರೆ.

# ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಸಹಕರಿಸಲಿ

## ‘ಯೋಜನೆ ಆರಂಭದಲ್ಲಿ ಆಸಾಧ್ಯವೆಂಬ ಭಾವನೆ ಜನರಲ್ಲಿ ಇತ್ತು. ಆದರೆ ಇಂದು ನಮ್ಮ ಚಿತ್ರದುರ್ಗದ ಗೋನೂರು ತರಗೆ ನೀರು ಹರಿದು ಬಂದಿದೆ

• **ಉದಯವಾಹಿನಿ ಚಿತ್ರದುರ್ಗ:**

‘ಭದ್ರಾ ಮೇಲ್ದಂಡೆ ಯೋಜನೆ ಪೂರ್ಣಗೊಳ್ಳಲು 21,000 ಕೋಟಿ ಅಗತ್ಯವಿದೆ. ಕೇಂದ್ರ ಸರ್ಕಾರ ಈ 5,300 ಕೋಟಿ ನೀಡಿದರೆ ಉಳಿದ ಮೊತ್ತವನ್ನು ರಾಜ್ಯ ಸರ್ಕಾರ ಭರಿಸಲಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಟಿ.ರಘುಮೂರ್ತಿ ತಿಳಿಸಿದರು.

1 : ಜೋಡೆತ್ತು, ಸಾಕು ಪ್ರಾಣಿಗಳ ಪ್ರದರ್ಶನ
2 : ಮಧ್ಯ ಕರ್ನಾಟಕದ ದೊಡ್ಡ ಉತ್ಸವ
3 : ನೀರನ್ನು ಪ್ರಾಯೋಗಿಕವಾಗಿ ಹರಿಸುವ


ಉದಯವಾಹಿನಿ ಚಿತ್ರ

ನಗರದ ಮುರುಘಾ ಮಠದಲ್ಲಿ ಶರಣ ಸಂಸ್ಕೃತಿ ಉತ್ತವದ ಅಂಗವಾಗಿ ಆಯೋಜಿಸಿದ್ದ ಕೃಷಿ ಮೇಳ ಉದ್ಘಾಟಿಸಿದ ಅವರು, ’ನಾಲ್ಕು ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ನೆರವು ಅತ್ಯಗತ್ಯವಾಗಿದೆ. ಎಲ್ಲರೂ ಪಕ್ಷಾತೀತವಾಗಿ ಕಾರ್ಯನಿರ್ವಹಿಸಿದರೆ ಯೋಜಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಬಹುದು’ ಎಂದರು ‘ಅಭಿವೃದ್ಧಿ ಕಾರ್ಯಗಳು ಪರಿಣಾಮ ಕಾರಿಯಾಗಿ ನಡೆಯಲು ಸಮಗ್ರ ಯೋಜನೆ ಮತ್ತು ಸಂಘಟಿತ ಪ್ರಯತ್ನ ಅಗತ್ಯ. ಯೋಜನೆಗೆ ಚಾಲನೆ ದೊರೆತಿತ್ತು.

ಎಲ್ಲರ ಸಹಕಾರದಿಂದ ಸಾಕಾರಗೊಳ್ಳುತ್ತಿದೆ’ ಎಂದು ತಿಳಿಸಿದರು. ’ಪಕ್ಷದಲ್ಲಿದ್ದುಕೊಂಡು ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿಭಾಯಿಸಬೇಕು. ಅಷ್ಟೇ ಅಲ್ಲದೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುವಾಗಲೂ ಜನರ ಹಿತವನ್ನು ಗಮನದಲ್ಲಿಟ್ಟುಕೊಳ್ಳಬೇಕು.

**ನಾಲ್ಕು ಜಿಲ್ಲೆಗಳ ಸಮಗ್ರ ಅಭಿವೃದ್ಧಿ**

ಕ್ಷೇತ್ರದ ಜವಾಬ್ದಾರಿಯೇನು ಎಂಬುದನ್ನು ಅರಿತು ಕೆಲಸ ಮಾಡಬೇಕು. ಪಕ್ಷಾತೀತ ಮನೋಭಾವದಿಂದ ಕಾರ್ಯ ನಿರ್ವಹಿಸಿದಾಗ ಮಾತ್ರ ಜಿಲ್ಲೆಯ ಸಮಗ್ರ ಅಭಿವೃದ್ಧಿ ‘ಶ್ರೀಮಠದ ಸ್ವಾಮೀಜಿ ಭದ್ರಾ ಮೇಲ್ದಂಡ ಯೋಜನೆಗೆ ಅಗತ್ಯವಾದ ಸಹಕಾರ ನೀಡಿದ್ದಾರೆ.

ನಮ್ಮ ಸಚಿವರು ಮೂರು ತಾಲ್ಲೂಕುಗಳಿಗೆ ಭದ್ರಾ ನೀರನ್ನು ಪ್ರಾಯೋಗಿಕವಾಗಿ ಹರಿಸುವ ಮೂಲಕ ತಮ್ಮ ಬದ್ಧತೆ ತೋರಿಸಿದ್ದಾರೆ. ಇವರ ರೀತಿಯ ಬದ್ಧತೆಯನ್ನು ಎಲ್ಲಾ ರಾಜಕಾರಣಿಗಳು ತೋರಿದರೆ ಎಲ್ಲಾ ಯೋಜನೆಗಳನ್ನು ಸುಸೂತ್ರವಾಗಿ ಪೂರ್ಣಗೊಳಿಸಲು ಸಾಧ್ಯ’ ಎಂದು ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್ ತಿಳಿಸಿದರು. ’ಯೋಜನೆ ಆರಂಭದಲ್ಲಿ ಆಸಾಧ್ಯವೆಂಬ ಭಾವನೆ ಜನರಲ್ಲಿ ಇತ್ತು. ಆದರೆ ಇಂದು ನಮ್ಮ ಚಿತ್ರದುರ್ಗದ ಗೋನೂರು ತರಗೆ ನೀರು ಹರಿದು ಬಂದಿದೆ. ನೀರಿಗಾಗಿ ಹೋರಾಟ ಪ್ರಾರಂಭವಾದಾಗ ದಂತ ವೈದ್ಯಕೀಯ ಕಾಲೇಜಿನ ಕೊಠಡಿಯೊಂದನ್ನು ಹೋರಾಟಕ್ಕಾಗಿ ನೀಡುವ ಜತೆಗೆ ಸಂಪೂರ್ಣ ಸಹಕಾರ ನೀಡಿದ್ದ

> ‘ಬರಗಾಲದ ಕಾರಣಕ್ಕೆ ಜಿಲ್ಲೆ ಹಲವು ವರ್ಷಗಳಿಂದ ಅಭಿವೃದ್ಧಿಯಲ್ಲಿ ಹಿಂದುಳಿದಿತ್ತು. ಆದರೆ, ಇಂದು ಸಚಿವ ಟಿ. ರಘುಮೂರ್ತಿಯವರ ಬದ್ದತೆ ಹಾಗೂ ಪ್ರಯತ್ನಗಳಿಂದ ಭದ್ರಾ ನೀರು ಚಿತ್ರದುರ್ಗಕ್ಕೆ ಹರಿದು ಬಂದಿದೆ. ಇದರಿಂದ ಭದ್ರಾ ಮೇಲ್ಕಂಡ ಯೋಜನೆಯ ಪರಿಪೂರ್ಣತೆಯನ್ನು ಕಾಣಲು ಸಾಧ್ಯವಾಗಿದೆ’ ಎಂದು ಹೇಳಿದರು.
> –ಸಿದ್ದರಾಮೇಶ್ವರ ಸ್ವಾಮೀಜಿ

### ಸಚಿವರು ಕಾರಣಕರ್ತರಾಗಿದ್ದಾರೆ’

‘ಗ್ಯಾರಂಟಿ ಯೋಜನೆಗಳ ಮೂಲಕವೂ ಜನರಿಗೆ ಹಲವು ರೀತಿಯ ಸಹಾಯ ಒದಗಿಸಲಾಗಿದೆ. ನೀರಾವರಿ ಯೋಜನೆಗೆ ಮೀಸಲಿಟ್ಟ ಹಣವನ್ನು ಸಮರ್ಪಕವಾಗಿ ಬಳಸಿಕೊಂಡು, ರೈತರ ಸಹಕಾರದೊಂದಿಗೆ ಕರೆಗಳಿಗೆ ನೀರು ತುಂಬಿಸಲು ಸಚಿವರು ಕಾರಣಕರ್ತರಾಗಿದ್ದಾರೆ’ ಎಂದು ತಿಳಿಸಿದರು.

ಎಸ್‌ಜೆಎಂ ವಿದ್ಯಾಪೀಠ ಎಂದು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಹೇಳಿದರು. ಎಸ್‌ಜೆಎಂ ವಿದ್ಯಾಪೀಠದ ಆಡಳಿತ ಮಂಡಳಿ ಅಧ್ಯಕ್ಷ ಶಿವಯೋಗಿ ಸಿತಳಿಸದ ಸದಸ್ಯ, ಬಸವಕುಮಾರ ಸ್ವಾಮೀಜಿ, ಭದ್ರಾ ಮೇಲ್ದಂಡೆ ಯೋಜನೆ ನಿವೃತ್ತ ಮುಖ್ಯ ಇಂಜಿನಿಯರ್ ಚೆಲುವರಾಜ್, ರೈತ ಪ್ರತಿನಿಧಿ ಬಿ.ಎ.ಲಿಂಗಾರಡ್ಡಿ ಇದ್ದರು.ಜೋಡೆತ್ತು, ಸಾಕು ಪ್ರಾಣಿಗಳ ಪ್ರದರ್ಶನ ಕೃಷಿ ಮೇಳದ ಅಂಗವಾಗಿ ಜಿಲ್ಲಾ ಪಶು ಸಂಗೋಪನೆ ಮತ್ತು ವೈದ್ಯಕೀಯ ಇಲಾಖೆಯ ಸಹಯೋಗದೊಂದಿಗೆ ಜೋಡೆತ್ತುಗಳ ಹಾಗೂ ಸಾಕು ಪ್ರಾಣಿಗಳ ಪ್ರದರ್ಶನ ನಡೆಯಿತು. 711 ಜೋಡೆತ್ತು, 15 ನಾಟಹಸು, ಮಿತ್ರತ್ ಜಾನುವಾರುಗಳು, ಟಗರುಗಳು, ಕೋಳಿ, ಹುಂಜ, ಪಾರಿವಾಳಹಾಗೂ ಇತರ ಪ್ರಾಣಿಗಳು ಪ್ರದರ್ಶನದಲ್ಲಿದ್ದವು. ಕೃಷಿಮೇಣದಲ್ಲಿ ಸ್ವದೇಶಿ ಖಾದಿ, ರೇಷ್ಮೆ ಇಲಾಖೆ, ಆಯುಷ್ ಇಲಾಖೆ, ಮೀನುಗಾರಿಕೆ ಇಲಾಖೆ, ತೋಟಗಾರಿಕೆ ಇಲಾಖೆ, ಜಿಲ್ಲಾ ಜೈವಿಕ ಇಂಧನ ಪ್ರಾತ್ಯಕ್ಷಿಕೆ ಕೇಂದ್ರ ಸೇರಿದಂತೆ ಕೃಷಿಗೆ ಸಂಬಂಧಿಸಿದ ಹಲವು ಮಳಿಗೆಗಳು ಜನರನ್ನು ಆಕರ್ಷಿಸಿದವು.

# ಕೆಪಿಎಸ್‌ಸಿ ಹಗರಣ ಮುಚ್ಚಿ ಹಾಕಲು ಯತ್ನ

• **ಉದಯವಾಹಿನಿ ಕಲಬುರಗಿ,**


ಉದಯವಾಹಿನಿ ಚಿತ್ರ

ಕೆಪಿಎಸ್ಸಿ ಹಗರಣವನ್ನು ಮುಚ್ಚಿಹಾಕಿ ಲೂಟಿಕೋರರ ಪರ ನಿಲ್ಲಲು ಸರ್ಕಾರ ದಕ್ಷ ಅಧಿಕಾರಿ ಅಲೋಕಕುಮಾರ ಅವರನ್ನು ಎಸ್‌ಐಟಿಯಿಂದ ಹೊರಗಿಡುವ ಕುತಂತ್ರ ನಡೆಸಿದೆ ಎಂದು ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್ .ಪಾಟೀಲ ನರಿಬೋಳ ಆರೋಪಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆಯೊಂದನ್ನು ನೀಡಿರುವ ಅವರು, ಕೆಪಿಎಸ್‌ಸಿ ನೇಮಕಾತಿ ಅಕ್ರಮದ ತನಿಖೆಗೆ ಸಂಬಂಧಿಸಿದಂತೆ ರಾಜ್ಯ ಹೈಕೋರ್ಟ್ ರಚಿಸಿರುವ ವಿಶೇಷ ತನಿಖಾ ತಂಡದಲ್ಲಿ ಹಿರಿಯ ಐಪಿಎಸ್ ಅಧಿಕಾರಿಗಳಾದ ಅಲೋಕ್ ಕುಮಾರ್ ಹಾಗೂ ದಿವ್ಯಾ ಗೋಪಿನಾಥ್ ಅವರ ನೇಮಕ ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಈ ವಿಚಾರವಾಗಿ ಅಕ್ಟೋಬರ್ 1ರಂದು ಸುಪ್ರೀಂ ಕೋರ್ಟ್‌ನಲ್ಲಿ ನಡೆದ ವಿಚಾರಣೆ ವೇಳೆ, ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಅಲೋಕ್ ಕುಮಾರ್ ಅವರ ವಿರುದ್ಧ ಸಿಬಿಐ ತನಿಖೆ ಬಾಕಿ ಇದೆ ಎಂದು ವಾದ ಮಂಡಿಸಿದ್ದರು. ಈ ವಾದವನ್ನು ಖಂಡಿಸಿ ಅಲೋಕ್ ಕುಮಾರ್ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಅಕ್ಟೋಬರ್ 5 ರಂದು ಸುದೀರ್ಘ ಪತ್ರ ಬರೆದಿರುವ ಅಲೋಕ್ ಕುಮಾರ್ ಅವರು ಕಪಿಲ್ ಸಿಬಲ್ ಅವರು ನೀಡಿದ ಹೇಳಿಕೆಗಳನ್ನು ನಿರಾಕರಿಸಿದ್ದಾರೆ. ತಮ್ಮ ವಿರುದ್ಧ ಪ್ರಸ್ತುತ ಯಾವುದೇ ಸಿಬಿಐ ತನಿಖೆಯಾಗಲಿ ಅಥವಾ ಇಲಾಖಾ ವಿಚಾರಣೆಯಾಗಲಿ ಬಾಕಿ ಇಲ್ಲ ಎಂದು ಅಧಿಕೃತ ದಾಖಲೆಗಳ ಸಮೇತವಾಗಿ ಸ್ಪಷ್ಟಪಡಿಸಿದ್ದು ಅದಕ್ಕೆ ಉತ್ತರ ಇಲ್ಲವಾಗಿದೆ ಇದೆಲ್ಲವು ಗಮನಿಸಿದರೆ ಕೆಪಿಎಸ್ಸಿ ಹಗರಣವನ್ನು ಸಂಪೂರ್ಣ ಮುಚ್ಚಿಹಾಕುವ ಕುತಂತ್ರವಾಗಿದೆ ಹೀಗಾಗಿ ಹೈಕೋರ್ಟ್ ನಿರ್ದೇಶನದಂತೆ ಸರ್ಕಾರ ಮುಂದುವರೆಯಲಿ ಇಲ್ಲದಿದ್ದರೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

# CNG ತುಂಬಿದ್ದ ಲಾರಿಗೆ ಕಾರು ಡಿಕ್ಕಿ; ಇಬ್ಬರು ವಿದ್ಯಾರ್ಥಿಗಳು ಸಾವು

• **ಉದಯವಾಹಿನಿ ದಾವಣಗೆರೆ:**

ವೇಗವಾಗಿ ಬಂದ ಕಾರೊಂದು ಸಿಎನ್‌ಜಿ ತುಂಬಿದ್ದ ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟು, ಮತ್ತೊಬ್ಬ ವಿದ್ಯಾರ್ಥಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ದಾವಣಗೆರೆ ಹೊರವಲಯದ ಬಡಾ ಕ್ರಾಸ್ ಬಳಿ ನಡೆದಿದೆ. ಮೃತಪಟ್ಟವನ್ನು ಸುಜನ್ (16) ಹಾಗೂ ರಾಮ್ ತೇಜಾ ರೆಡ್ಡಿ (17) ಎಂದು ಗುರ್ತಿಸಲಾಗಿದೆ. ಅಪಘಾತದಲ್ಲಿ ಸುಜನ್ ಸ್ಥಳದಲ್ಲೇ ಮೃತಪಟ್ಟಿದ್ದರೆ, ಗಂಭೀರವಾಗಿ ಗಾಯಗೊಂಡಿದ್ದ ರಾಮ್ ತೇಜಾ ರೆಡ್ಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾನೆ. ಅಪಘಾತದಲ್ಲಿ ಗಾಯಗೊಂಡಿರುವ ಆದಿತ್ಯ (16)ರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ. ಮೃತ ಹಾಗೂ ಗಾಯಗೊಂಡ ವಿದ್ಯಾರ್ಥಿಗಳು ದಾವಣಗೆರೆಯ ಶಕ್ತಿ ನಗರ ಮತ್ತು ಜೆ.ಎಚ್. ಪಟೇಲ್ ಬಡಾವಣೆಯ ನಿವಾಸಿಗಳು ಎಂದು ತಿಳಿದುಬಂದಿದೆ.ಕಾರು ಬೆಂಗಳೂರಿನಿಂದ ದಾವಣಗೆರೆ ಕಡೆಗೆ ಬರುತ್ತಿದ್ದಾಗ ಬಡಾ ಕ್ರಾಸ್ ಸಮೀಪ ಸಿಎನ್‌ಜಿ ತುಂಬಿದ್ದ ಲಾರಿಯ ಹಿಂಭಾಗಕ್ಕೆ ಡಿಕ್ಕಿ ಹೊಡೆದಿದೆ. ಎಂದು ಪೊಲೀಸರು ಶಂಕಿಸಿದ್ದಾರೆ. ಘಟನಾ ಸ್ಥಳಕ್ಕೆ ದಾವಣಗೆರೆ ಉತ್ತರ ಸಂಚಾರ ಪೊಲೀಸ್ ಠಾಣೆಯ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ನಡುವೆ ಲಾರಿಗೆ ಅಳವಡಿಸಲಾಗಿದ್ದ ಕ್ಯಾಮೆರಾದಲ್ಲಿ ಅಪಘಾತದ ದೃಶ್ಯ ಸೆರೆಯಾಗಿದ್ದು, ವೀಡಿಯೋ ವೈರಲ್ ಆಗಿದೆ. ಘಟನೆಗೆ ನಿಖರ ಕಾರಣವೇನು ಎಂಬುದರ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ಪಾಕಿಸ್ತಾನ- ಬಾಂಗ್ಲಾದಂತೆ, ಭಾರತದ ಪ್ರಜಾಪ್ರಭುತ್ವ ಅಸ್ಥಿರಗೊಳಿಸಲು ಸಾಧ್ಯವಿಲ್ಲ

• **ಉದಯವಾಹಿನಿ ಹುಬ್ಬಳ್ಳಿ:**

ಆಡಳಿತ ಬದಲಾವಣೆ ಕುರಿತು ವಿರೋಧ ಪಕ್ಷಗಳು ಮಾಡುತ್ತಿರುವ ಹೇಳಿಕೆಗಳನ್ನು ತಳ್ಳಿಹಾಕಿದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಜೋಶಿ, ಕಾರ್ಯಕರ್ತೆ ನೇಹಾ ಬೋರಾ ಅವರ ವಿವಾದಾತ್ಮಕ ಹೇಳಿಕೆಗಳು ಮತ್ತು ಅದಕ್ಕೆ ರಾಹುಲ್ ಗಾಂಧಿ ನೀಡಿದ ಬೆಂಬಲದ ಕುರಿತು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ಭಾರತದ ಸಾಂವಿಧಾನಿಕ ಪ್ರಜಾಪ್ರಭುತ್ವವು ಜನರ ನಂಬಿಕೆಯಲ್ಲಿ ಆಳವಾಗಿ ಬೇರೂರಿದೆ ಮತ್ತು ಪಾಕಿಸ್ತಾನ ಅಥವಾ ಬಾಂಗ್ಲಾದೇಶದಂತೆ ಇದನ್ನು ಅಸ್ಥಿರಗೊಳಿಸಲು ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದರು.

ನೇಹಾ ಬೋರಾ ಅವರು ಬಾಂಗ್ಲಾದೇಶದ ದಂಗೆಯನ್ನು ಸ್ಫೂರ್ತಿಯಾಗಿ ಉಲ್ಲೇಖಿಸಿದ್ದರು. ಚುನಾಯಿತ ಸರ್ಕಾರಗಳನ್ನು ಉರುಳಿಸಬೇಕೆಂದು ಪ್ರತಿಪಾದಿಸುವವರೊಂದಿಗೆ ಕಾಂಗ್ರೆಸ್ ನಾಯಕತ್ವ ಏಕೆ ಗುರುತಿಸಿಕೊಳ್ಳುತ್ತಿದೆ ಎಂದು ಜೋಶಿ ಪ್ರಶ್ನಿಸಿದರು. ಪಾಕಿಸ್ತಾನ, ಬಾಂಗ್ಲಾದೇಶ ಅಥವಾ ನೇಪಾಳದಂತಲ್ಲದೆ, ಭಾರತದಲ್ಲಿ ಇಂತಹ ಘಟನೆಗಳು ನಡೆಯಲು ಸಾಧ್ಯವಿಲ್ಲ. ‘ಬಾಂಗ್ಲಾದೇಶ ನಮಗೆ ಸ್ಫೂರ್ತಿ ನೀಡಿದೆ’ ಎಂದು ನೇಹಾ ಬೋರಾ ಹೇಳಿದ್ದಾರೆ. ಇದರ ಅರ್ಥವೇನು? ಬಾಂಗ್ಲಾದೇಶದಲ್ಲಿ ಏನಾಯಿತು? ಮೊದಲನೆಯದಾಗಿ, ಅಲ್ಲಿ ಚುನಾಯಿತ ಸರ್ಕಾರವನ್ನು ಉರುಳಿಸಲಾಯಿತು ಮತ್ತು


ಉದಯವಾಹಿನಿ ಚಿತ್ರ

ನಂತರ, ಅಲ್ಲಿ ಅಲ್ಪಸಂಖ್ಯಾತ ಹಿಂದೂಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೊಲ್ಲಲಾಗುತ್ತಿದೆ. ನಿಮಗೆ ಅಂತಹ ಮಾದರಿ ಬೇಕೇ ಮತ್ತು ರಾಹುಲ್ ಗಾಂಧಿ ನಿರಂತರವಾಗಿ ಅವರೊಂದಿಗೆ ಗುರುತಿಸಿಕೊಳ್ಳುತ್ತಿದ್ದಾರಲ್ಲವೇ ಈ ದೇಶದಲ್ಲಿ ಏನಾಗಬೇಕೆಂದು ನೀವು ನಿರೀಕ್ಷಿಸುತ್ತಿದ್ದೀರಿ ಎಂದು ಜೋಶಿ ಕೇಳಿದರು.

ಅಂದಿನ ಪ್ರಧಾನ ಮಂತ್ರಿ ದೇಶ ಬಿಟ್ಟು ಪಲಾಯನ ಮಾಡುವಂತೆ ಒತ್ತಾಯಿಸಲಾಯಿತು. ಚುನಾವಣಾ ಸೋಲುಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ದೂಷಿಸುವ ಬದಲು, ಕಾಂಗ್ರೆಸ್ ಪಕ್ಷವು ತಳಮಟ್ಟದಲ್ಲಿ ಕಠಿಣ ಪರಿಶ್ರಮ ಪಡಬೇಕೆಂದು ಕೇಂದ್ರ ಸಚಿವರು ಸಲಹೆ ನೀಡಿದರು. ವಿವಿಧ ರಾಜ್ಯಗಳಲ್ಲಿ ದಶಕಗಳಿಂದ ಆ

# ಹಬ್ಬದ ಸಮಯದಲ್ಲಿ ಪ್ರತಿಭಟನೆ ಮಾಡಬೇಡಿ, ಸಮಿತಿ ರಾಜ್ಯಕ್ಕೆ ಭೇಟಿ ನೀಡಲಿದೆ

• **ಉದಯವಾಹಿನಿ ಹುಬ್ಬಳ್ಳಿ:**

ಸಕ್ಕರೆ ಎಂಎಸ್‌ಪಿ ಅಂದರೆ ಮಿನಿಮಮ್ ಸಪೋರ್ಟ್ ಪ್ರೈಸ್ ಅಲ್ಲ, ಅದು ಮಿಲ್ಲರ್‌ಗಳ ಕನಿಷ್ಠ ಮಾರಾಟ ದರ . ಸರ್ಕಾರ ನಿಗದಿಪಡಿಸಿದ 31 ರೂಪಾಯಿಗಿಂತ ಮಾರುಕಟ್ಟೆಯಲ್ಲಿ ಸಕ್ಕರೆ ಈಗಾಗಲೇ 50 ರೂಪಾಯಿಯಿಂದ 60 ರೂಪಾಯಿಗೆ ಮಾರಾಟವಾಗುತ್ತಿದೆ. ಕೇಂದ್ರ ಸರ್ಕಾರ ತಕ್ಷಣವೇ ಉನ್ನತ ಮಟ್ಟದ ಸಮಿತಿ ರಚಿಸಿದ್ದು, ನವರಾತ್ರಿ ಹಬ್ಬದ ನಂತರ ಸಮಿತಿ ರಾಜ್ಯಕ್ಕೆ ಭೇಟಿ ನೀಡಲಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಬ್ಬು ಬೆಳೆಗಾರರ ಬೇಡಿಕೆಗಳನ್ನು ಪರಿಹರಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ರೈತರ ಬೇಡಿಕೆಗಳನ್ನು ಪರಿಶೀಲಿಸಲು ತಜ್ಞರ ಉನ್ನತ ಮಟ್ಟದ ಸಮಿತಿ ರಚಿಸಲಾಗಿದ್ದು, ಎಂಎಸ್‌ಪಿ ಸೇರಿದಂತೆ ಪ್ರಮುಖ ವಿಷಯಗಳ ಬಗ್ಗೆ ಸಮಿತಿಯು ಧನಾತ್ಮಕ ಶಿಫಾರಸು ನೀಡಲಿದೆ. ರೈತರು ಕೇಳಿರುವ ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ಎಲ್ಲಾ ಬೇಡಿಕೆಗಳನ್ನು ಸಮಿತಿಯು ಧನಾತ್ಮಕವಾಗಿ ಪರಿಗಣಿಸಿ, ಶೀಘ್ರವಾಗಿ ಶಿಫಾರಸುಗಳನ್ನು ನೀಡುವಂತೆ ಸೂಚಿಸಲಾಗಿದೆ. ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ರೈತರ ಪ್ರತಿಭಟನೆಗಳಿಲ್ಲದೆ ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿರುವುದನ್ನು ಉಲ್ಲೇಖಿಸಿದರು.

ಕಬ್ಬಿನಿಂದ ಉತ್ಪಾದನೆಯಾಗುವ ಎಥೆನಾಲ್ ನ್ನು ಕೇಂದ್ರ ಸರ್ಕಾರ ಖರೀದಿಸುತ್ತಿದ್ದು, ಕಳೆದ ವರ್ಷ 165 ಲೀಟರ್ ಎಥೆನಾಲ್ ಖರೀದಿಸಲಾಗಿದೆ. ಕಬ್ಬಿನಿಂದ ಬರುವ ಎಥೆನಾಲ್ ಪ್ರಮಾಣವನ್ನು ಹೆಚ್ಚುವರಿಯಾಗಿ ಖರೀದಿಸುವ ಕುರಿತು ಪೆಟ್ರೋಲಿಯಂ ಸಚಿವರೊಂದಿಗೆ ಚರ್ಚಿಸುವುದಾಗಿ ಅವರು ಭರವಸೆ ನೀಡಿದರು. ರೈತರು ಸಮಿತಿಯೊಂದಿಗೆ ಸಹಕರಿಸಬೇಕು


ಉದಯವಾಹಿನಿ ಚಿತ್ರ

ಮತ್ತು ಶೀಘ್ರದಲ್ಲೇ ಪರಿಹಾರ ಸಿಗಲಿದೆ ಎಂದು ಜೋಶಿ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿಗಳು ರಾಜ್ಯ ಸಲಹಾ ಬೆಲೆ ಪರಿಗಣಿಸಬೇಕು ಹಾಗೂ ತೂಕ ಮತ್ತು ಯಾಂತ್ರಿಕ ಕಟಾವಿನ ನಷ್ಟದ (ವೇಸ್ಟೇಜ್) ಸಮಸ್ಯೆಗಳನ್ನು ಬಗೆಹರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದರು. ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಕಬ್ಬಿನ ನಷ್ಟ ಹೆಚ್ಚಿದ್ದು, ಅದನ್ನು ತಗ್ಗಿಸಲು ಫ್ಯಾಕ್ಟರಿಗಳಿಗೆ ಸೂಚಿಸಬೇಕು ಎಂದರು.

# ಮೋದಿ ವಿರುದ್ಧ ಯಾರೇ ಪ್ರತಿಭಟಿಸಿದರೂ ಕಾಂಗ್ರೆಸ್ ಹಣಕಾಸು ನೆರವು ನೀಡಲಿದೆ

• **ಉದಯವಾಹಿನಿ ಧಾರವಾಡ:**

ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ನಡೆಯುತ್ತಿರುವ ’ಕಾಕ್ರೋಚ್ ಜನತಾ ಪಾರ್ಟಿ’ ಮತ್ತು ಇತರ ಪ್ರತಿಭಟನೆಗಳಿಗೆ ಕಾಂಗ್ರೆಸ್ ಸದಸ್ಯರು ಆರ್ಥಿಕ ನೆರವು ನೀಡಲಿದ್ದಾರೆ ಎಂದು ಬಿ.ಕೆ. ಹರಿಪ್ರಸಾದ್ ಶನಿವಾರ ಹೇಳಿದ್ದಾರೆ. ಈ ಕುರಿತು ಮಾತನಾಡಿದ ಹರಿಪ್ರಸಾದ್, ಇದು ನಮ್ಮ ಹಕ್ಕು. ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಲು ಬಯಸುವ, ಪ್ರಧಾನಿ ಮೋದಿ ಅವರ ವಿರುದ್ಧ ಸಿಜೆಪಿ ಅಥವಾ ಯಾವುದೇ ಇತರ ಪ್ರತಿಭಟನೆಗಳಿಗೂ ನಾವು ಹಣಕಾಸು ನೆರವು ನೀಡುತ್ತೇವೆ ಎಂದು ತಿಳಿಸಿದರು.

ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಗಳಿಗೆ ಕರ್ನಾಟಕ ಸರ್ಕಾರವು ಹಣಕಾಸಿನ ನೆರವು ನೀಡುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಕಾಂಗ್ರೆಸ್ ಒಂದೇ ಎಂದು ಸ್ವತಃ ಗೃಹ ಸಚಿವರೇ ಹೇಳಿದ್ದಾರೆ. ಬೆಂಗಳೂರು ಸೇರಿದಂತೆ ಇಲ್ಲಿ ಎಲ್ಲೆಡೆ ಪ್ರತಿಭಟನೆಗಳು ನಡೆಯುತ್ತಿವೆ. ಇವರು ಎಷ್ಟು ಹಣಕಾಸಿನ ನೆರವು ನೀಡುತ್ತಿದ್ದಾರೆ ಎಂಬುದನ್ನು ಬಹಿರಂಗಪಡಿಸಲಿ ಎಂದು ಕುಮಾರಸ್ವಾಮಿ ಆಗ್ರಹಿಸಿದರು.

# ಅಪರಾಧಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದ ಕೋರ್ಟ್

## ಬಾಲಕಿಯನ್ನು ಪುಸಲಾಯಿಸಿ ಮದುವೆ ಮಾಡಿಕೊಳ್ಳುವುದಾಗಿ ಬೆಂಗಳೂರಿಗೆ ಕರೆದುಕೊಂಡು ಹೋಗಿ ಬಲವಂತವಾಗಿ ಅತ್ಯಾಚಾರ ಎಸಗಿತ ಆರೋಪ

• **ಉದಯವಾಹಿನಿ ದಾವಣಗೆರೆ:**

ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ ಮದುವೆಯಾಗಿ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಎಫ್‌ಟಿಎಸ್‌ಸಿ–1 ನ್ಯಾಯಾಲಯ ಅಪರಾಧಿಗೆ 20

1 : ಕಾರ್ತಿಕ್ ಪಿ.ಎಸ್ ಶಿಕ್ಷೆಗೆ ಒಳಗಾದ ಅಪರಾಧಿ
2 : ಅಪರಾಧಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ
3 : ಸಾಕ್ಷಿದಾರರ ಹೇಳಿಕೆಗಳಿಂದ ಆರೋಪ ದೃಢಪಟ್ಟಿದೆ

ವರ್ಷ ಕಠಿಣ ಕಾರಾಗೃಹ ಶಿಕ್ಷೆ, 40 ಸಾವಿರ ರೂ. ದಂಡ ವಿಧಿಸಿದೆ. ನ್ಯಾಯಾಧೀಶರಾದ ಶ್ರೀರಾಮ ನಾರಾಯಣ ಹೆಗಡೆ ಅವರು ಈ ಆದೇಶ ನೀಡಿದ್ದಾರೆ ಎಂದು ಜಿಲ್ಲಾ ಪೊಲೀಸರು ಪತ್ರಿಕಾ ಪ್ರಕಟಣೆ ನೀಡಿದ್ದಾರೆ. ಕಾರ್ತಿಕ್ ಪಿ.ಎಸ್ (22) ಶಿಕ್ಷೆಗೆ ಒಳಗಾದ ಅಪರಾಧಿ. ಇದರ ಸಂಬಂಧ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪತ್ರಿಕಾ ಪ್ರಕಟಣೆಯಲ್ಲಿರುವ ಮಾಹಿತಿ: 2022ರ ಫೆಬ್ರುವರಿ 3ರಂದು ಸಂತ್ರಸ್ತರ ಕುಟುಂಬಸ್ಥರು ಮಹಿಳಾ ಠಾಣೆಗೆ ಹಾಜರಾಗಿ ಈ ಕುರಿತು ದೂರು ನೀಡಿದ್ದರು. ತಮ್ಮ ಮಗಳು ಮನೆ ಬಿಟ್ಟು


ಉದಯವಾಹಿನಿ ಚಿತ್ರ



ಹೋದವಳು ಸಂಜೆಯಾದರೂ ವಾಪಸ್ ಬಂದಿಲ್ಲ, ಸಂಬಂಧಿಕರ ಮನೆ ಸೇರಿದಂತೆ ಅಲ್ಲಿ–ಇಲ್ಲಿ ಹುಡುಕಿದರೂ ಪತ್ತೆಯಾಗಿಲ್ಲ. ಹಾಗಾಗಿ ಹುಡುಕಿಕೊಡಿ ಎಂದು ಪೋಷಕರು ನೀಡಿದ ದೂರು ಹಿನ್ನೆಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿತ್ತು. ತನಿಖೆ ವೇಳೆ ಆರೋಪಿಯು ಬಾಲಕಿಯನ್ನು ಮದುವೆಯಾಗುವುದಾಗಿ ಬೆಂಗಳೂರಿಗೆ ಕರೆದುಕೊಂಡು ಹೋಗಿ ಎನ್‌ಜಿಆರ್ ಲೇಔಟ್ ನಲ್ಲಿರುವ ಗಣೇಶ ದೇವಸ್ಥಾನದಲ್ಲಿ ಅರಿಶಿಣ ಕೊಂಬಿನ ದಾರ ಕಟ್ಟಿ ಮದುವೆ ಮಾಡಿಕೊಂಡಿದ್ದ ವಿಚಾರ ತಿಳಿದಿತ್ತು. ಅಲ್ಲದೆ, ಬಾಡಿಗೆ ಮನೆಗೆ ಕರೆದುಕೊಂಡು ಹೋಗಿ ನಾವಿಬ್ಬರೂ ಗಂಡ–ಹೆಂಡತಿ ಆಗಿದ್ದೇವೆ. ನಾನು ಹೇಳಿದ ಹಾಗೆ ನೀನು ಕೇಳಬೇಕು ಅಂತೆಲ್ಲ

> ತಪ್ಪಿತಸ್ಥನಿಂದ ವಸೂಲಿ ಮಾಡಿದ ದಂಡದ ಒಟ್ಟು ಮೊತ್ತ 40,000 ರೂ.ಗಳನ್ನು ಪ್ರಕರಣದ ಸಂತ್ರಸ್ತೆಗೆ ನೀಡುವಂತೆ ಹಾಗೂ ಸಂತ್ರಸ್ತೆಗೆ ಸರ್ಕಾರದಿಂದ 5 ಲಕ್ಷ ರೂ. ಪರಿಹಾರ ನೀಡುವಂತೆ ತೀರ್ಪು ನೀಡಲಾಗಿದೆ.
> – ಶ್ರೀರಾಮ ನಾರಾಯಣ ಹೆಗಡೆ

ಬಲವಂತವಾಗಿ ಅತ್ಯಾಚಾರ ಎಸಗಿರುವುದು ತನಿಖೆಯಿಂದ ಹಾಗೂ ಸಂಗ್ರಹಿಸಿದ ದಾಖಲೆಗಳಿಂದ ಮತ್ತು ಸಾಕ್ಷಿದಾರರ ಹೇಳಿಕೆಗಳಿಂದ ಆರೋಪ ದೃಢಪಟ್ಟಿದೆ. ಮಹಿಳಾ ಠಾಣೆಯ ಪೊಲೀಸರು ಈ ಬಗ್ಗೆ ನ್ಯಾಯಾಲಯಕ್ಕೆ ದೋಷರೋಪಣ

ಸಂತ್ರಸ್ತೆ ಈ ಹಿಂದೆ ಅಪ್ರಾಪ್ತ (ಪ್ರಕರಣ ದಾಖಲಾದಾಗ ಅಪ್ರಾಪ್ತೆ) ಮದುವೆಯಾಗಿ ಅತ್ಯಾಚಾರ ವೆಸಗಿದ್ದನ್ನು, ಈ ಪ್ರಕರಣ ತನಿಖೆಯಲ್ಲಿ ಸಾಬೀತಾಗಿದ್ದು, ಆರೋಪಿ ಕಾರ್ತಿಕ್ (22) ಗೆ 20 ವರ್ಷದ ಕಠಿಣ ಕಾರಾಗೃಹ ಶಿಕ್ಷೆ 40 ಸಾವಿರ ದಂಡ ವಿಧಿಸಲಾಯಿತು ಎಂದರು ಅವರು ತಿಳಿಸಿದರು.

ಪಟ್ಟಿಯನ್ನು ಸಲ್ಲಿಸಿದ್ದರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಎಫ್‌ಟಿಎಸ್‌ಸಿ–1 ನ್ಯಾಯಾಲಯದಲ್ಲಿ ಪ್ರಕರಣದ ಸಂಬಂಧ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಶ್ರೀರಾಮ ನಾರಾಯಣ ಹೆಗಡೆ ಅವರು ಆರೋಪ ಸಾಬೀತಾಗಿದ್ದರಿಂದ ಆರೋಪಿ ಕಾರ್ತಿಕ್ ಪಿ.ಎಸ್ (22) ಎಂಬಾತನಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 40,000 ರೂ. ದಂಡ ವಿಧಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರಿ ಅಭಿಯೋಜಕರು ಹೇಳಿದ್ದೇನು ಸರ್ಕಾರಿ ವಕೀಲರಾದ ಬಸವರಾಜ್ ಎಎಂ ಅವರು ಮಾತನಾಡಿ ಅಪರಾಧಿಗೆ 20 ವರ್ಷದ ಶಿಕ್ಷೆ ನ್ಯಾಯಾಲಯ ವಿಧಿಸಿದೆ.ಪೊಲೀಸ್ ಅಧೀಕ್ಷಕ ಡಾ. ಶೇಖರ್ ಹೆಚ್.ಟಿ ಅವರು ಪೊಲೀಸ್ ಸಿಬ್ಬಂದಿಯ ಕಾರ್ಯ ವನ್ನು ಶ್ಲಾಘಿಸಿದ್ದಾರೆ.

# ಮಹಿಳೆಯ ಮೇಲಿನ ಹಲ್ಲೆ, ದೌರ್ಜನ್ಯ ಪ್ರಕರಣ; ಮೂವರು ಆರೋಪಿಗಳಿಗೆ ಜೈಲು ಶಿಕ್ಷೆ

• **ಉದಯವಾಹಿನಿ ಪುತ್ತೂರು**

ಜಾಗದ ವಿಚಾರಕ್ಕೆ ಸಂಬಂಧಿಸಿದ ವಿವಾದದ ಹಿನ್ನೆಲೆಯಲ್ಲಿ ಮಹಿಳೆಯ ಮೇಲೆ ಹಲ್ಲೆ ನಡೆಸಿ ದೌರ್ಜನ್ಯವೆಸಗಿದ ಪ್ರಕರಣದಲ್ಲಿ ಮೂವರು ಆರೋಪಿಗಳಿಗೆ ಪುತ್ತೂರಿನ ನ್ಯಾಯಾಲಯ ಶಿಕ್ಷೆ ವಿಧಿಸಿ ಆದೇಶಿಸಿದೆ. 2022ರ ಡಿಸೆಂಬರ್ 27ರಂದು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜಾಗದ ವಿಚಾರವಾಗಿ ತಕರಾರು ಉಂಟಾಗಿ, ಮೂವರು ಆರೋಪಿಗಳು ಮಹಿಳೆಯ ಮೇಲೆ ಹಲ್ಲೆ ನಡೆಸಿ ದೌರ್ಜನ್ಯವೆಸಗಿದ್ದರು.

ಈ ಕುರಿತು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 113/2022ರಂತೆ ಭಾರತೀಯ ದಂಡ ಸಂಹಿತೆಯ ಕಲಂ 447, 504, 506, 323, 354 ಹಾಗೂ 34ರ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆ ನಡೆಸಿದ ಅಂದಿನ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯ ಸಿಬ್ಬಂದಿ ಸುಬ್ರಮಣ್ಯ ಹೆಚ್. ಅವರು ಅಗತ್ಯ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ಆರೋಪಿಗಳಾದ ಅರುಣ್ ಕುಮಾರ್, ವಿನಯ ಕುಮಾರ್ ಜಿ. ಹಾಗೂ ಸುಂದರ ಪಿ. ಎಂ. ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆಯನ್ನು ನಡೆಸಿದ ಪುತ್ತೂರಿನ ಎಸ್‌ಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ದೇವರಾಜ್ ವೈ.ಹೆಚ್. ಅವರು ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಶಿಕ್ಷೆ ಪ್ರಕಟಿಸಿದ್ದಾರೆ.

**ಶಿಕ್ಷೆಯ ವಿವರ:** ಮೊದಲನೇ ಆರೋಪಿ ಅರುಣ್ ಕುಮಾರ್‌ಗೆ ಐಪಿಸಿ ಕಲಂ 323ರ ಅಡಿಯಲ್ಲಿ ಆರು ತಿಂಗಳ ಸರಳ ಕಾರಾಗೃಹ ಶಿಕ್ಷೆ ವಿಧಿಸಲಾಗಿದೆ. ಕಲಂ 354ರ ಅಡಿಯಲ್ಲಿ ಎರಡು ವರ್ಷಗಳ ಸರಳ ಕಾರಾಗೃಹ ಶಿಕ್ಷೆ ಹಾಗೂ 10,000 ದಂಡ ವಿಧಿಸಲಾಗಿದೆ. ದಂಡ ಪಾವತಿಸಲು ವಿಫಲವಾದಲ್ಲಿ ಹೆಚ್ಚುವರಿಯಾಗಿ ಮೂರು ತಿಂಗಳ ಸರಳ ಕಾರಾಗೃಹ ಶಿಕ್ಷೆ ಅನುಭವಿಸಬೇಕಾಗಿದೆ.

# ಸಿಇಸಿ ಗ್ಯಾನೇಶ್ ಕುಮಾರ್ ವಿರುದ್ಧದ ಶಾಂತಿಯುತ ಹೋರಾಟ ಮುಂದುವರೆಯುತ್ತೆ

**ತಿರುವನಂತಪುರಂ:** ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಗ್ಯಾನೇಶ್ ಕುಮಾರ್ ಮತ್ತು ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ದೇಶಾದ್ಯಂತ ನಡೆಯುತ್ತಿರುವ ಶಾಂತಿಯುತ ಪ್ರತಿಭಟನೆಗಳನ್ನು ದಮನಿಸಲು ಪ್ರಯತ್ನಿಸಿದರೂ, ಹೋರಾಟ ಮುಂದುವರಿಯಲಿದೆ ಎಂದು ನಟ ಹಾಗೂ ಕಾರ್ಯಕರ್ತ ಪ್ರಕಾಶ್ ರಾಜ್ ಹೇಳಿದ್ದಾರೆ.

ಇಲ್ಲಿನ ಮಾನವೀಯಂ ವೀಧಿಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಮತ್ತು ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ ವಿರುದ್ಧ ನಡೆದ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.



ಕಾರ್ಯಕ್ರಮ ಆರಂಭವಾಗುವ ಮುನ್ನ ಮೈಕ್ರೊಫೋನ್ ಬಳಸಲು ಆಯೋಜಕರು ಅನುಮತಿ ಪಡೆದಿಲ್ಲ ಎಂದು ಹೇಳಿ ಪೊಲೀಸರು ಮಧ್ಯಪ್ರವೇಶಿಸಿದರು. ಇದರಿಂದ ಸಣ್ಣ ಪ್ರಮಾಣದ ವಾಗ್ವಾದ ಮತ್ತು ತಳ್ಳಾಟ ನಡೆಯಿತು. ಬಳಿಕ ಪೊಲೀಸರು ಕಾರ್ಯಕ್ರಮ ಮುಂದುವರಿಸಲು ಅವಕಾಶ ನೀಡಿದರು.

ಮಹಾತ್ಮ ಗಾಂಧಿ, ಬಿ.ಆರ್. ಅಂಬೇಡ್ಕರ್ ಮತ್ತು ಭಗತ್ ಸಿಂಗ್ ಅವರಿಂದ ಸ್ಫೂರ್ತಿ ಪಡೆದು ದೇಶದ ಯುವಜನರು ಶಾಂತಿಯುತವಾಗಿ ಪ್ರತಿಭಟಿಸುವುದನ್ನು ಮುಂದುವರಿಸಲಿದ್ದಾರೆ ಎಂದು ಪ್ರಕಾಶ್ ರಾಜ್ ಹೇಳಿದರು. ನಮ್ಮಲ್ಲಿ ಗಾಂಧಿಯವರ ರಕ್ತವಿದೆ, ಅಂಬೇಡ್ಕರ್ ಅವರ ರಕ್ತವಿದೆ, ಭಗತ್ ಸಿಂಗ್ ಅವರ ರಕ್ತವಿದೆ. ನಾವು ಹೋರಾಟ ಮುಂದುವರಿಸುತ್ತೇವೆ ಮತ್ತು ದೇಶಾದ್ಯಂತ ಶಾಂತಿಯುತವಾಗಿ ಪ್ರತಿಭಟಿಸುತ್ತೇವೆ. ಈ ಸರ್ವಾಧಿಕಾರಿ ಧೋರಣೆಯೊಂದಿಗೆ ನೀವು ಸುಲಭವಾಗಿ ಪಾರಾಗಬಹುದು ಎಂದುಕೊಂಡಿದ್ದರೆ, ಅದು ತಪ್ಪು ಎಂಬುದನ್ನು ನಾವು ಸಾಬೀತುಪಡಿಸುತ್ತೇವೆ ಎಂದು ಅವರು ಹೇಳಿದರು.ಪ್ರತಿಭಟನೆಗಳ ಮೇಲಿನ ನಿರ್ಬಂಧಗಳ ಕುರಿತು ಸಿಇಸಿ ಅವರನ್ನು ಪ್ರಶ್ನಿಸಿದ ಪ್ರಕಾಶ್ ರಾಜ್, ನಾವು ಪ್ರಶ್ನೆಗಳನ್ನು ಕೇಳುತ್ತಿದ್ದೇವೆ. ಗ್ಯಾನೇಶ್ ಕುಮಾರ್ ಅವರೇ, ನಮ್ಮನ್ನು ಏಕೆ ತಡೆಯುತ್ತಿದ್ದೀರಿ? ನೀವು ನಮ್ಮನ್ನು ತಡೆಯುತ್ತಿದ್ದೀರಿ ಮತ್ತು ಅಕ್ರಮವಾಗಿ ವಶಕ್ಕೆ ಪಡೆಯುತ್ತಿದ್ದೀರಿ ಎಂಬ ಸಂಗತಿಯೇ ಇಲ್ಲಿ ಏನೋ ತಪ್ಪಾಗಿದೆ ಎಂಬುದನ್ನು ತೋರಿಸುತ್ತದೆ ಎಂದರು.

ಭಾರತವು ಪ್ರಜಾಪ್ರಭುತ್ವ ಮತ್ತು ಶಾಂತಿಪ್ರಿಯ ದೇಶವಾಗಿದ್ದು, ಇಲ್ಲಿ ಜನರಿಗೆ ಪ್ರಶ್ನೆಗಳನ್ನು ಕೇಳುವ ಹಾಗೂ ಪ್ರತಿಭಟಿಸುವ ಹಕ್ಕಿದೆ ಎಂದು ಅವರು ಹೇಳಿದರು.

## ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ



**ಶ್ರೀನಗರ (ಜಮ್ಮು ಮತ್ತು ಕಾಶ್ಮೀರ):** ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ಭದ್ರತಾ ಪಡೆ ಮತ್ತು ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತರ ಕಾಶ್ಮೀರದ ಕೇರಾನ್ ವಲಯದ ಜುಮ್‌ಗುಂಡ್ ಪ್ರದೇಶದಲ್ಲಿ, ನಿಯಂತ್ರಣ ರೇಖೆಯ ಉದ್ದಕ್ಕೂ ಅನುಮಾನಾಸ್ಪದ ಚಲನವಲನ ಪತ್ತೆಯಾದ ಹಿನ್ನೆಲೆ ಇಂದು ಬೆಳಗ್ಗೆ ಯೋಧರು ಕಾರ್ಯಾಚರಣೆ ಕೈಗೊಂಡಿದ್ದಾರೆ.

ಸದ್ಯ ಕಾರ್ಯಾಚರಣೆ ಮುಂದುವರೆದಿದ್ದು, ಈ ಕುರಿತು ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಯೋತ್ಪಾದಕರ ಒಳನುಸುಳುವಿಕೆ ಯತ್ನದ ಬಗ್ಗೆ ಈ ಇನ್ನೂ ಸ್ಪಷ್ಟವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಪಟ್ಟ ಸಿಕ್ಕರೂ ಪಾಕಿಗಳಿಗಿಲ್ಲ ಪವರ್!

**ಬ್ಯಾಂಕಾಕ್ :** ಯಾವಗಲೂ ಐಎಂಎಫ್ ಅರ್ಥಾತ್ ಅಂತರರಾಷ್ಟ್ರೀಯ ಹಣಕಾಸು ನಿಧಿ ಮುಂದೇ ಸಾಲಕ್ಕಾಗಿ ಕೈಚಾಚುವ ಪಾಕಿಸ್ತಾನಕ್ಕೆ ಅದೃಷ್ಟವೆಂಬಂತೆ, ಈಗ ಅದೇ ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್ ಗ್ರೂಪ್‌ನ ಬೋರ್ಡ್ ಆಫ್ ಗವರ್ನರ್ಸ್‌ನ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದೆ. ಆದರೆ, ತೀವ್ರ ಆರ್ಥಿಕ ಬಿಕ್ಕಟ್ಟಿನಿಂದಾಗಿ ಜಾಗತಿಕ ಮಟ್ಟದಲ್ಲಿ ಸದಾ ಸಾಲಕ್ಕಾಗಿ ಕೈಚಾಚುವ ಪಾಕಿಸ್ತಾನಕ್ಕೆ ಈ ಪ್ರತಿಷ್ಠಿತ ಪಟ್ಟ ಸಿಕ್ಕಿದ್ದರೂ, ಅದರ ಕೈಯಲ್ಲಿ ಯಾವುದೇ ನೈಜ ಅಧಿಕಾರ ಅಥವಾ ಪವರ್ ಇರುವುದಿಲ್ಲ.

ಹೌದು, ತೀವ್ರ ಆರ್ಥಿಕ ಬಿಕ್ಕಟ್ಟಿನಿಂದಾಗಿ ಸಾಲಕ್ಕಾಗಿ ಸದಾ ಜಾಗತಿಕ ಹಣಕಾಸು ಸಂಸ್ಥೆಗಳ ಮುಂದೆ ಕೈಯೊಡ್ಡುವ ಪಾಕಿಸ್ತಾನಕ್ಕೆ, 2027ರ ಸಾಲಿನ ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್ ಮಂಡಳಿಗಳ ಅಧ್ಯಕ್ಷ ಸ್ಥಾನ ಸಿಕ್ಕಿರುವುದು ನಿಜ. ಬ್ಯಾಂಕಾಕ್‌ನಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಪಾಕಿಸ್ತಾನದ ಆರ್ಥಿಕ ವ್ಯವಹಾರಗಳ ಸಚಿವ ಅಹದ್ ಖಾನ್ ಚೀಮಾ ಅವರನ್ನು ಮುಂಬರುವ ವರ್ಷದ ಅಧ್ಯಕ್ಷರನ್ನಾಗಿ ಅಧಿಕೃತವಾಗಿ ಘೋಷಿಸಲಾಗಿದೆ. ಸುಮಾರು 74 ವರ್ಷಗಳ ಸುದೀರ್ಘ ಅವಧಿಯ ಬಳಿಕ ಪಾಕಿಸ್ತಾನಕ್ಕೆ ಈ ಸ್ಥಾನ ಒಲಿದುಬಂದಿದೆ. ಹೆಸರಿಗೆ ಮಾತ್ರ ಪಾಕಿಸ್ತಾನ ಐಎಂಎಫ್ ಬಾಸ್ ಪಟ್ಟಕ್ಕೇರಲಿದೆಯಾದರೂ, ಅದಕ್ಕೆ ಯಾವುದೇ ನಿರ್ಣಾಯಕ ಅಧಿಕಾರ ಇರುವುದಿಲ್ಲ.

# ಕುಲ್ಲುದಲ್ಲಿ ದಸರಾ ವಿಭಿನ್ನ ಆಚರಣೆ

## ಏಳನೇ ದಿನದಿಂದ ಸಂಭ್ರಮ ಆರಂಭ

**ಕುಲ್ಲು (ಹಿಮಾಚಲ ಪ್ರದೇಶ):** ದಸರಾ ಆಚರಣೆಗಳು ರಾಜ್ಯದಿಂದ ರಾಜ್ಯಕ್ಕೆ ವಿಭಿನ್ನ. ಅದರಂತೆ ಕಣಿವೆ ರಾಜ್ಯದಲ್ಲೂ ರಾವಣದ ಪ್ರತಿಕೃತಿ ದಹನ ಬದಲಾಗಿ ಮುಖವಾಡಗಳನ್ನು ಸುಡಲಾಗುತ್ತದೆ. ದಸರಾ ಆಚರಣೆಗಳ ಧಾರ್ಮಿಕ ವಿಧಿಗಾಗಿ ಈಗಾಗಲೇ ರಾವಣ, ಆತನ ಸಹೋದರ ಕುಂಭಕರ್ಣ ಮತ್ತು ಮಗ ಮೇಘನಾದನ ಈ ಮುಖವಾಡಗಳನ್ನು ಬಿಸಿಲಿನಲ್ಲಿ ಒಣಗಿಸಿ, ಬಣ್ಣ ಬಳಿದು ಸಿದ್ಧಪಡಿಸಲಾಗುತ್ತದೆ.ಆಚರಣೆ ಹೊರತಾಗಿ ಆಚರಿಸುವ ಸಮಯದ ದೃಷ್ಟಿಯಿಂದಲೂ ಕುಲ್ಲು ವಿಶಿಷ್ಟವಾಗಿದೆ. ಹಿಮಾಲಯದ ಈ ಪಟ್ಟಣದಲ್ಲಿ ದಸರಾದ ಏಳನೇ ಉತ್ಸವದ ಆರಂಭವನ್ನು ಸೂಚಿಸುತ್ತದೆ.



ಇಲ್ಲಿನ ಸಂಭ್ರಮಾಚರಣೆಗಳು ಭಗವಾನ್ ರಘುನಾಥ ಮತ್ತು ಜಿಲ್ಲೆಯಾದ್ಯಂತದ ದೇವತೆಗಳ ಸಮ್ಮಿಲನದ ಸುತ್ತ ಕೇಂದ್ರೀಕೃತವಾಗಿರುತ್ತವೆ. ಇಲ್ಲಿ ರಾವಣನ ಬೃಹತ್ ಪ್ರತಿಕೃತಿಗಳನ್ನು ಪಟಾಕಿಗಳಿಂದ ಸಿಡಿಸುವ ವಾಡಿಕೆಯಿಲ್ಲ. ಬದಲಾಗಿ, ಕುಲ್ಲು ಪ್ರದೇಶದ ದೇವತಾ ಸಂಪ್ರದಾಯಗಳಲ್ಲಿ ಉಳಿದುಕೊಂಡು ಬಂದಿರುವ ವಿಭಿನ್ನ ಆಚರಣೆಗಳ ಮೂಲಕ ಶ್ರೀರಾಮನ ವಿಜಯವನ್ನು ಸ್ಮರಿಸಲಾಗುತ್ತದೆ.

ಹಬ್ಬ ಪ್ರಾರಂಭವಾಗುವ ಮುನ್ನ ನವರಾತ್ರಿಯ ಸಮಯದಲ್ಲಿ ಮುಖವಾಡಗಳನ್ನು ತಯಾರಿಸುವ ಕೆಲಸ ಆರಂಭವಾಗುತ್ತದೆ. ಭಗವಾನ್ ರಘುನಾಥ ದೇವಾಲಯದ ಅರ್ಚಕ ದಿನೇಶ್ ಕಿಶೋರ್ ಅವರ ಮೇಲ್ವಿಚಾರಣೆಯಲ್ಲಿ, ಮಣ್ಣು ಮತ್ತು ಸಗಣಿಯನ್ನು ಮಿಶ್ರಣ ಮಾಡಿ, ರಾವಣ, ಕುಂಭಕರ್ಣ, ಮೇಘನಾದ ಮತ್ತು ರಾವಣನ ಸೈನ್ಯದ ಇತರೆ ಪಾತ್ರಗಳನ್ನು ಪ್ರತಿನಿಧಿಸುವ ಮುಖವಾಡಗಳನ್ನು ರೂಪಿಸಲಾಗುತ್ತದೆ. ಇವುಗಳು ಗಟ್ಟಿಯಾಗಲು ಹಲವು ದಿನಗಳ ಕಾಲ ಬಿಸಿಲಿನಲ್ಲಿ ಇಡಲಾಗುತ್ತದೆ. ನಂತರ, ಲಂಕಾ ಬೇಕಾರ್‌ನಲ್ಲಿ ಕಾರ್ಯಕ್ರಮಕ್ಕೆ ಮೊದಲು ಅವುಗಳ ಮುಖಲಕ್ಷಣಗಳನ್ನು ರೂಪಿಸಿ, ಬಣ್ಣ ಬಳಿಯಲಾಗುತ್ತದೆ.

ಇತರೆ ಕಡೆಗಳಲ್ಲಿ ಕಂಡುಬರುವ ಬೃಹತ್ ಪ್ರತಿಕೃತಿಗಳ ನಿರ್ಮಾಣಕ್ಕೆ ಹೋಲಿಸಿದರೆ, ಇವುಗಳ ತಯಾರಿಕೆಯು ಅತ್ಯಂತ ಸರಳವಾದ ಪ್ರಕ್ರಿಯೆ. ಇಲ್ಲಿ ಸಣ್ಣ ವಸ್ತುಗಳು ಪ್ರಮುಖ ಸ್ಥಾನವನ್ನು ಹೊಂದುವ ಜೊತೆಗೆ ಲಂಕೆಯ ವಿನಾಶವನ್ನು ಸಾಂಕೇತಿಕವಾಗಿ ಪ್ರದರ್ಶಿಸುವಲ್ಲಿ ಇವು ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಈ ಕುರಿತು ಮಾತನಾಡಿರುವ ಕಿಶೋರ್, ಕುಲ್ಲುದಲ್ಲಿ ದಸರಾದ ಲಂಕಾ ದಹನ ಕೇವಲ ಒಂದು ಧಾರ್ಮಿಕ ಕಾರ್ಯಕ್ರಮವಷ್ಟೇ ಅಲ್ಲ, ಇದು ಜನರ ಉತ್ಸಾಹ ಮತ್ತು ಸಂತೋಷದ ಅಭಿವ್ಯಕ್ತಿಯೂ ಹೌದು. ಇದರಲ್ಲಿ ಪಾಲ್ಗೊಳ್ಳುವ ಸಾವಿರಾರು ಜನರು, ಭಗವಾನ್ ರಘುನಾಥನ ವಿಜಯ ರಥವನ್ನು ಕಣ್ತುಂಬಿಕೊಳ್ಳಲು ಅತ್ಯುತ್ಸಾಹದಿಂದ ಕಾಯುತ್ತಿರುತ್ತಾರೆ. ಮುಖವಾಡಗಳನ್ನು ಸುಡುವ ಈ ಪ್ರಾಚೀನ ಸಂಪ್ರದಾಯವು ಕುಲ್ಲು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದು, ಧಾರ್ಮಿಕ ನಂಬಿಕೆ ಮತ್ತು ಸಾಮೂಹಿಕ ಸಂಭ್ರಮಾಚರಣೆಯನ್ನು ಒಗ್ಗೂಡಿಸುತ್ತದೆ.

### ಲಂಕಾ ಬೇಕರ್ ಪ್ರಯಾಣ

**ದಸರಾದ ಏಳನೇ ಮತ್ತು ಅಂತಿಮ ದಿನದಂದು, ಭಗವಾನ್ ರಘುನಾಥರು ಸಮಾರೋಪ ವಿಧಿಗಾಗಿ ತಮ್ಮ ತಾತ್ಕಾಲಿಕ ಶಿಬಿರದಿಂದ ಹೊರಡುತ್ತಾರೆ. ಈ ರಥವು ಧಾಲ್‌ಪುರ ಮೈದಾನದಿಂದ ದನಗಳ ಮೈದಾನದ ಸಮೀಪವಿರುವ ಲಂಕಾ ಬೇಕರ್ ಕಡೆಗೆ ಸಾಗುತ್ತದೆ. ಅಲ್ಲಿಯೇ ಲಂಕೆಯ ದಹನ ಮತ್ತು ರಾವಣನ ಮೇಲೆ ಶ್ರೀರಾಮನ ವಿಜಯವನ್ನು ಸಂಕೇತಿಸುವ ರೀತಿಯಲ್ಲಿ, ಮುಖವಾಡಗಳೊಂದಿಗೆ ಮರದ ಕೊಂಬೆಗಳು ಮತ್ತು ಸೌದೆಗೆ ಬೆಂಕಿ ಹಚ್ಚಲಾಗುತ್ತದೆ. ಈ ಅಂತಿಮ ವಿಧಿವಿಧಾನಗಳಲ್ಲಿ ಹಿಂದಿನ ರಾಜವಂಶದ ಸದಸ್ಯರು ಭಾಗವಹಿಸುತ್ತಾರೆ.**



**ಭಗವಾನ್ ರಘುನಾಥರ ಪಾಲಕರಾದ ದಾನವೇಂದ್ರ ಸಿಂಗ್ ಮಾತನಾಡಿ, ದಸರಾ ಹಬ್ಬದ ಏಳನೇ ಮತ್ತು ಕೊನೆಯ ದಿನದಂದು ಲಂಕಾ ದಹನವನ್ನು ನಡೆಸಲಾಗುತ್ತದೆ. ಬಾಣಗಳನ್ನು ಸಾಂಕೇತಿಕವಾಗಿ ರಘುನಾಥನ ರಥದಿಂದ ಬಿಡಲಾಗುವುದು. ನಂತರ ಹಸುವಿನ ಸಗಣಿ ಮತ್ತು ಜೇಡಿಮಣ್ಣಿನಿಂದ ಮಾಡಿದ ಮುಖವಾಡಗಳನ್ನು ಸುಡಲಾಗುತ್ತದೆ. ಮುಖವಾಡಗಳು ಸುಟ್ಟುಹೋದ ನಂತರ, ರಘುನಾಥನ ವಿಜಯ ರಥವು ಅಲ್ಲಿಗೆ ಆಗಮಿಸಿ, ತಾಯಿ ಸೀತಾಮಾತೆಯೊಂದಿಗೆ ದೇವಾಲಯಕ್ಕೆ ಹಿಂತಿರುಗುತ್ತದೆ ಎಂದರು.**

### ಕಣಿವೆಯ ದೇವತೆಗಳಿಂದ ರೂಪಿತವಾದ ಹಬ್ಬ

**ಕುಲ್ಲು ದಸರಾ ಕೇಂದ್ರಬಿಂದುವೆಂದರೆ ಕಣಿವೆಯ ದೇವತೆಗಳೆಲ್ಲವೂ ಒಂದೆಡೆ ಸೇರುವುದು ಮತ್ತು ಭಗವಾನ್ ರಘುನಾಥನ ಉತ್ಸವಗಳಲ್ಲಿ ಪಾಲ್ಗೊಳ್ಳುತ್ತವೆ.ಏಳು ದಿನಗಳ ಕಾಲ, ಭಕ್ತರು ಪ್ರಾರ್ಥನೆ ಸಲ್ಲಿಸಲು ಮತ್ತು ಈ ಸಂಪ್ರದಾಯಗಳನ್ನು ಕಣ್ತುಂಬಿಕೊಳ್ಳಲು ಧಾಲ್‌ಪುರಕ್ಕೆ ಬರುತ್ತಾರೆ. ಭಾರತದ ಇತರೆ ಭಾಗಗಳಿಂದ ಹಾಗೂ ವಿದೇಶಗಳಿಂದಲೂ ಸಂದರ್ಶಕರು ಇಲ್ಲಿಗೆ ಆಗಮಿಸಿ, ಮೆರವಣಿಗೆಗಳನ್ನು ಮತ್ತು ದೇವತೆಗಳ ಸಮ್ಮಿಲನವನ್ನು ವೀಕ್ಷಿಸುತ್ತಾರೆ.ರಥಯಾತ್ರೆಯು ಎಲ್ಲರನ್ನೂ ಒಂದೆಡೆ ಸೇರಿಸಿ ಭಗವಾನ್ ರಘುನಾಥನು ದೇವಾಲಯದತ್ತ ಮರಳಲು ಸಿದ್ಧನಾಗುವ ಹೊತ್ತಿಗೆ, ಕುಲ್ಲು ಕಣಿವೆಯು ಒಂದು ವಾರ ಕಾಲ ಹಬ್ಬವನ್ನು ಆಚರಿಸಿರುತ್ತದೆ.**

## ಮಿನಿ ನ್ಯೂಸ್

### ಕೆನ್ನೆಗೆ ಹೊಡೆದು, ಅಸಭ್ಯ ವರ್ತನೆ

**ನವದೆಹಲಿ :** 'ಕಾಕ್ರೋಚ್ ಜನತಾ ಪಾರ್ಟಿ' (ಸಿಜೆಪಿ) ವತಿಯಿಂದ ಸಂಜೆ ಪಾಲಿಕಾ ಬಜಾರ್ ಬಳಿ ಆಯೋಜಿಸಲಾಗಿದ್ದ 'ಲೆಹ್ರಾ ದೋ ತಿರಂಗ' ಪ್ರತಿಭಟನಾ ರ‍್ಯಾಲಿ ವೇಳೆ ಪೊಲೀಸರ ಮೇಲೆ ನಡೆದಿದೆ ಎನ್ನಲಾದ ಹಲ್ಲೆಯ ದೃಶ್ಯಗಳಿರುವ ವಿಡಿಯೋವನ್ನು ದೆಹಲಿ ಪೊಲೀಸರು ಇಂದು ಬಿಡುಗಡೆ ಮಾಡಿದ್ದಾರೆ. ದೆಹಲಿಯ ರಾಜೀವ್ ಚೌಕ್ ಮೆಟ್ರೋ ನಿಲ್ದಾಣದ ಗೇಟ್ ಸಂಖ್ಯೆ 6ರ ಬಳಿ ಯೂಟ್ಯೂಬರ್ ಸೋಗಿನಲ್ಲಿ ಬಂದಿದ್ದ ಮಹಿಳೆಯೊಬ್ಬಳು ಸಿಆರ್‌ಪಿಎಫ್ ಕಾನ್‌ಸ್ಟೆಬಲ್‌ಗೆ ಕಪಾಳಮೋಕ್ಷ ಮಾಡಿದ್ದಾಳೆ.

ಪ್ರತಿಭಟನೆಯ ಮರೆಯಲ್ಲಿ ಹಲವು ಪೊಲೀಸ್ ಸಿಬ್ಬಂದಿ ಹಾಗೂ ಅರೆಸೇನಾ ಪಡೆಗಳನ್ನು ಗುರಿಯಾಗಿಸಿ ಹಲ್ಲೆ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿವಿಧ ಕ್ಯಾಮೆರಾಗಳ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದ್ದು, ಈ ಹಲ್ಲೆಯಲ್ಲಿ ಭಾಗಿಯಾಗಿರುವ ಪ್ರತಿಭಟನಾಕಾರರು ಮತ್ತು ಯೂಟ್ಯೂಬರ್‌ಗಳನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲು ಸಿದ್ಧತೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಸಿಜೆಪಿ ನಾಯಕರಾದ ಸೌರವ್ ದಾಸ್ ಮತ್ತು ಅಶೋಕ್ ರಾಂಕಾ ಅವರ ಅಕ್ರಮ ಬಂಧನ ಖಂಡಿಸಿ, ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪ್ಕೆ ನೇತೃತ್ವದಲ್ಲಿ ಅಕ್ಟೋಬರ್ 16ರಂದು ಸಂಜೆ 5 ಗಂಟೆಗೆ ಕನ್ನಾಟ್ ಪ್ಲೇಸ್‌ನಲ್ಲಿ 'ಲೆಹ್ರಾ ದೋ ತಿರಂಗ' ರ‍್ಯಾಲಿಗೆ ಕರೆ ನೀಡಲಾಗಿತ್ತು. ಪ್ರತಿಭಟನಾ ಸ್ಥಳವಾಗಿ ರದ್ದುಪಡಿಸಲಾಗಿದ್ದ ಜಂತರ್ ಮಂತರ್ ಪ್ರದೇಶಕ್ಕೆ ಅತಿಕ್ರಮ ಪ್ರವೇಶಕ್ಕೆ ಯತ್ನಿಸಿದ ಆರೋಪದ ಮೇಲೆ ಸೌರವ್ ದಾಸ್ ಮತ್ತು ರಾಂಕಾ ಅವರನ್ನು ಬಂಧಿಸಲಾಗಿತ್ತು.

### ಮಾರ್ಕೊ ರೂಬಿಯೊ ಭೇಟಿ ಮುಂಬೈ, ಜಾಮ್‌ನಗರದಲ್ಲಿ ಮಹತ್ವದ ಚರ್ಚೆ

**ಮುಂಬೈ:** ಅಮೆರಿಕದ ವಿದೇಶಾಂಗ ಸಚಿವ ಮಾರ್ಕೊ ರೂಬಿಯೊ ಅಕ್ಟೋಬರ್ 17ರಿಂದ 22ರವರೆಗೆ ಭಾರತ ಮತ್ತು ಉಜ್ಬೇಕಿಸ್ತಾನಕ್ಕೆ ಭೇಟಿ ನೀಡಲಿದ್ದಾರೆ. ಭಾರತದಲ್ಲಿ ಮುಂಬೈ ಮತ್ತು ಗುಜರಾತ್‌ನ ಜಾಮ್‌ನಗರಕ್ಕೆ ತೆರಳಲಿರುವ ಅವರು, ಹಿರಿಯ ಸರ್ಕಾರಿ ಅಧಿಕಾರಿಗಳು ಹಾಗೂ ಉದ್ಯಮ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ಭಾರತ-ಅಮೆರಿಕ ಕಾರ್ಯತಂತ್ರದ ಸಂಬಂಧ, ಇಂಧನ ಸಹಕಾರ ಮತ್ತು ವಾಣಿಜ್ಯ ಹೂಡಿಕೆಗಳ ಕುರಿತು ಚರ್ಚಿಸಲಿದ್ದಾರೆ.

ಮುಂಬೈನಲ್ಲಿ ನಡೆಯಲಿರುವ ಸಭೆಗಳಲ್ಲಿ ದ್ವಿಪಕ್ಷೀಯ ಸಂಬಂಧ, ಪ್ರಾದೇಶಿಕ ಬೆಳವಣಿಗೆಗಳು, ವ್ಯಾಪಾರ ಮತ್ತು ಹೂಡಿಕೆಯ ಅವಕಾಶಗಳು ಪ್ರಮುಖ ವಿಷಯಗಳಾಗುವ ನಿರೀಕ್ಷೆಯಿದೆ. ಭಾರತದ ಹಿರಿಯ ಅಧಿಕಾರಿಗಳು ಮತ್ತು ಉದ್ಯಮ ನಾಯಕರೊಂದಿಗೆ ರೂಬಿಯೊ ಮಾತುಕತೆ ನಡೆಸಲಿದ್ದಾರೆ.

ಗುಜರಾತ್‌ನ ಜಾಮ್‌ನಗರದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್‌ನ ಪ್ರಮುಖ ತೈಲ ಸಂಸ್ಕರಣಾ ಸಂಕೀರ್ಣವಿದೆ. ಇಲ್ಲಿ ಉದ್ಯಮ ಪ್ರತಿನಿಧಿಗಳೊಂದಿಗೆ ನಡೆಯಲಿರುವ ಚರ್ಚೆಗಳು ಇಂಧನ ಸಹಕಾರ ಮತ್ತು ವಾಣಿಜ್ಯ ಹೂಡಿಕೆಗೆ ಸಂಬಂಧಿಸಿರಲಿವೆ.

### ಅಮೆರಿಕದ ಶಾಲೆಯಲ್ಲಿ ಅಪ್ರಾಪ್ತನಿಂದ ಗುಂಡಿನ ದಾಳಿ

**ವಾಷಿಂಗ್ಟನ್ :** ಅಮೆರಿಕದ ಒರೆಗಾನ್ ಪ್ರಾಂತ್ಯದ ಬೆಂಡ್ ನಗರದಲ್ಲಿರುವ ಸಿಲ್ವರ್ ರೈಲ್ ಎಲಿಮೆಂಟರಿ ಶಾಲೆ ಯಲ್ಲಿ ಭೀಕರ ಸಾಮೂಹಿಕ ಗುಂಡಿನ ದಾಳಿ ನಡೆದಿದೆ. 16 ವರ್ಷದ ಬಾಲಕ ನಡೆಸಿದ ಈ ಗುಂಡಿನ ದಾಳಿಯಲ್ಲಿ ಮೂವರು ಪುಟ್ಟ ಮಕ್ಕಳು ಹಾಗೂ ಒಬ್ಬ ಶಿಕ್ಷಕ ಸೇರಿದಂತೆ ಒಟ್ಟು ಐದು ಜನರು ಸಾವನ್ನಪ್ಪಿದ್ದಾರೆ. ಮೃತಪಟ್ಟ ಮಕ್ಕಳನ್ನು 5, 8 ಮತ್ತು 11 ವರ್ಷ ವಯಸ್ಸಿನವರೆಂದು ಗುರುತಿಸಲಾಗಿದೆ. ಘಟನೆಯಲ್ಲಿ 7 ವರ್ಷದ ಮತ್ತೊಬ್ಬ ಬಾಲಕಿ ಹಾಗೂ 54 ವರ್ಷದ ಶಿಕ್ಷಕಿಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮಧ್ಯಾಹ್ನ ಸುಮಾರು 1 ಗಂಟೆಯ ವೇಳೆಗೆ ಶಾಲಾ ಆವರಣದ ಸಮೀಪ ನಿಲ್ಲಿಸಲಾಗಿದ್ದ ಕಾರೊಂದರ ಮೇಲೆ ವ್ಯಕ್ತಿಯೊಬ್ಬ ಗುಂಡು ಹಾರಿಸುತ್ತಿದ್ದಾನೆ ಎಂದು ಪೊಲೀಸರ ತುರ್ತು ಸಹಾಯವಾಣಿ '911'ಗೆ ಕರೆಗಳು ಬಂದವು. ಕೆಲವೇ ನಿಮಿಷಗಳಲ್ಲಿ ಶಂಕಿತ ಶಸ್ತ್ರಸಜ್ಜಿತನಾಗಿ ಶಾಲೆಯ ಕಟ್ಟಡದೊಳಗೆ ನುಗ್ಗಿದ್ದ.

ಶಂಕಿತ ಕೈಯಲ್ಲಿ ಬಂದೂಕು ಹಿಡಿದು ಶಾಲೆಯೊಳಗೆ ಪ್ರವೇಶಿಸುವುದನ್ನು ಕಂಡ ಸ್ಥಳೀಯ ಸಮುದಾಯದ ಪ್ರಜೆಯೊಬ್ಬರು ತಕ್ಷಣವೇ ಆತನ ಮೇಲೆ ಗುಂಡು ಹಾರಿಸಿ, ಶಾಲೆಯೊಳಗೆ ಹಿಂಬಾಲಿಸಿ ಆತನನ್ನು ನಿಷ್ಕ್ರಿಯಗೊಳಿಸಿ ಹೊಡೆದುರುಳಿಸಿದ್ದಾರೆ.

### ಉಕ್ರೇನ್‌ಗೆ ಪಲಾಯನ ಮಾಡಿದ್ದೇ ಒಂದು ರೋಚಕ ಸಾಹಸ

**ರಷ್ಯಾ :** ಉಕ್ರೇನ್ ಹಾಗೂ ರಷ್ಯಾ ಯುದ್ಧದ ನಡುವೆ, ತನ್ನದೇ ದೇಶದ ಸೇನೆಗೆ ದ್ರೋಹ ಬಗೆದು 300ಕ್ಕೂ ಹೆಚ್ಚು ರಷ್ಯನ್ ಸೈನಿಕರ ಹತ್ಯೆಗೆ ಕಾರಣನಾದ ರಷ್ಯಾದ ಯುವ ಸೇನಾಧಿಕಾರಿಯ ಕಥೆ ಈಗ ಜಾಗತಿಕವಾಗಿ ಭಾರಿ ಸಂಚಲನ ಮೂಡಿಸಿದೆ. ರಷ್ಯನ್ ಸೇನೆಯ ಲೆಫ್ಟಿನೆಂಟ್ ಲೆವ್ ಸ್ಟುಪ್ನಿಕೋವ್ ಎಂಬ 26 ವರ್ಷದ ರಷ್ಯನ್ ಸಂವಹನ ಅಧಿಕಾರಿ ಉಕ್ರೇನ್ ಪರ ಗೂಢಚಾರಿಕೆ ನಡೆಸಿ, 300 ಕ್ಕೂ ಹೆಚ್ಚು ಸೈನಿಕರ ಹತ್ಯೆಗೆ ಕಾರಣವಾಗಿದ್ದಾನೆ. ಇದಾದ ನಂತರ ಅಲ್ಲಿಗೇ ಪಲಾಯನ ಮಾಡಿದ್ದಾನೆ. ಫೆಬ್ರವರಿ 2024ರಲ್ಲಿ ಪೂರ್ವ ಉಕ್ರೇನ್‌ನ ಮುಂಚೂಣಿಯ ಯುದ್ಧರಂಗದ ಬಳಿ ರಷ್ಯಾದ ಹಿರಿಯ ಅಧಿಕಾರಿಗಳು ಮತ್ತು ಸೈನಿಕರು ತರಬೇತಿಗಾಗಿ ಒಂದೆಡೆ ಜಮಾಯಿಸಿದ್ದರು. ಸ್ಟುಪ್ನಿಕೋವ್ ಈ ಸೈನಿಕರ ಸಂಖ್ಯೆಯನ್ನು ಅಂದಾಜಿಸಿ, ಅವರ ನಿಖರವಾದ ಲೊಕೇಶನ್ ಅನ್ನು ಉಕ್ರೇನಿಯನ್ ಗುಪ್ತಚರ ಅಧಿಕಾರಿಗಳಿಗೆ ರಹಸ್ಯವಾಗಿ ರವಾನಿಸಿದ್ದ. ಮಾಹಿತಿ ಸಿಕ್ಕ ತಕ್ಷಣ ಉಕ್ರೇನ್ ಸೇನೆ ಅಲ್ಲಿಗೆ ಭೀಕರ ಕ್ಷಿಪಣಿ ದಾಳಿ ನಡೆಸಿತು. ದಾಳಿಯ ನಂತರ ಉಕ್ರೇನ್ ಅಧಿಕಾರಿ, ಅಲ್ಲಿ ಸ್ಫೋಟಗಳಾಯಿತೇ ಫೋಟೋ ಕಳುಹಿಸು ಎಂದು ಸ್ಟುಪ್ನಿಕೋವ್‌ಗೆ ಮೆಸೇಜ್ ಮಾಡಿದ್ದರು.

ಅದಕ್ಕೆ ಆತ, ಅಲ್ಲಿ ಫೋಟೋ ತೆಗೆಯಲು ಏನೂ ಉಳಿದಿಲ್ಲ, ಬರೀ ಸೈನಿಕರ ಮಾಂಸದ ಮುದ್ದೆಗಳಷ್ಟೇ ಇವೆ ಎಂದು ಪ್ರತಿಕ್ರಿಯಿಸಿದ್ದ.

ಈ ಒಂದೇ ದಾಳಿಯಲ್ಲಿ ರಷ್ಯಾದ 36ನೇ ಮೋಟರೈಸ್ಡ್ ರೈಫಲ್ ಬ್ರಿಗೇಡ್‌ನ ಕಮಾಂಡರ್ ಕರ್ನಲ್ ಗುಸೇನ್ ಮುಸಾಯೆವ್ ಸೇರಿದಂತೆ 68 ಸೈನಿಕರು ಸಾವನ್ನಪ್ಪಿದ್ದರು.

ಮುಂದುವರೆದು, ಸ್ಟುಪ್ನಿಕೋವ್ ರಷ್ಯಾ ಸೇನೆಯಲ್ಲಿ ಸಿಗ್ನಲ್ಸ್ ಅಧಿಕಾರಿಯಾಗಿದ್ದರಿಂದ ಆತನಿಗೆ ರಷ್ಯಾದ ಯುದ್ಧ ಯೋಜನೆಗಳು, ಸೈನಿಕರ ಚಲನವಲನಗಳು ಮತ್ತು ಡ್ರೋನ್ ಕಂಟ್ರೋಲರ್‌ಗಳ ಸಂಪೂರ್ಣ ಪ್ರವೇಶವಿತ್ತು. ಹಾಗಾಗಿ, ಆತ ನಿರಂತರವಾಗಿ ರಷ್ಯಾದ ರೇಡಿಯೋ ತರಂಗಾಂತರಗಳು ಮತ್ತು ರಹಸ್ಯ ಯೋಜನೆಗಳನ್ನು ಉಕ್ರೇನ್‌ಗೆ ಶೇರ್ ಮಾಡುತ್ತಿದ್ದ. ಇದರೊಂದಿಗೆ, ರಷ್ಯಾದ ನಿಗಾ ಕ್ಯಾಮೆರಾಗಳನ್ನು ನಿಷ್ಕ್ರಿಯಗೊಳಿಸುತ್ತಿದ್ದ ಹಾಗೂ ಡ್ರೋನ್ ಬ್ಯಾಟರಿಗಳನ್ನು ಹಾಳುಗೆಡವಿ ರಷ್ಯಾ ಸೇನೆಗೆ ಒಳಗಿನಿಂದಲೇ ಭಾರಿ ನಷ್ಟ ಉಂಟುಮಾಡುತ್ತಿದ್ದ.

## ಆಲ್ಕೋಹಾಲ್ ಪಾರ್ಟಿ ಮಾಡಿದ ವೈದ್ಯರ ಅಮಾನತು

**ಮುಂಬೈ :** ಮಹಾರಾಷ್ಟ್ರದ ಪಿಂಪ್ರಿ–ಚಿಂಚ್‌ವಾಡದ ಪ್ರತಿಷ್ಠಿತ ಯಶವಂತರಾವ್ ಚವಾಣ್ ಸ್ಮಾರಕ ಆಸ್ಪತ್ರೆಯ ಶವಾಗಾರದಲ್ಲಿ ವೈದ್ಯರೊಬ್ಬರು ಎಣ್ಣೆ ಪಾರ್ಟಿ ಮಾಡಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ, ಆ ವೈದ್ಯರನ್ನು ತಕ್ಷಣವೇ ಅಮಾನತುಗೊಳಿಸಲಾಗಿದೆ. ಪಿಂಪ್ರಿ–ಚಿಂಚ್‌ವಾಡ ಮುನ್ಸಿಪಲ್ ಕಾರ್ಪೊರೇಷನ್‌ಗೆ ಸೇರಿದ ವೈಸಿಎಂ ಆಸ್ಪತ್ರೆಯ ಶವಾಗಾರದಲ್ಲಿ ಈ ಘಟನೆ ನಡೆದಿದೆ. ಮೃತ ವ್ಯಕ್ತಿಯ ಮರಣ ಪ್ರಮಾಣಪತ್ರ ಹಾಗೂ ಶವವನ್ನು ಪಡೆದುಕೊಳ್ಳಲು ಕುಟುಂಬಸ್ಥರು ಆಸ್ಪತ್ರೆಯ ಹೊರಗೆ ಕಾದು ಕುಳಿತಿದ್ದರು. ಆದರೆ ಒಳಗಡೆ ವೈದ್ಯರೊಬ್ಬರು ಟೇಬಲ್ ಮೇಲೆ ಮದ್ಯದ ಬಾಟಲಿಗಳು,



ತಿಂಡಿ–ತಿನಿಸುಗಳನ್ನು ಇಟ್ಟುಕೊಂಡು ಆಲ್ಕೋಹಾಲ್ ಕುಡಿಯುವುದರಲ್ಲಿ ಮಗ್ನರಾಗಿರುವುದು ವಿಡಿಯೋದಲ್ಲಿ ಸೆರೆಯಾಗಿದೆ.

ವೈರಲ್ ಆದ ಈ ವಿಡಿಯೋವನ್ನು ಗಂಭೀರವಾಗಿ ಪರಿಗಣಿಸಿದ ಆಡಳಿತ ಮಂಡಳಿ ವೈದ್ಯ ಡಾ. ವೈಭವ್ ಅವಿನಾಶ್ ಮಹಾಸ್ಕೆ ಅವರನ್ನು ತಕ್ಷಣವೇ ಜಾರಿಗೆ ಬರುವಂತೆ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

## ಶಿವ ಶರ್ಮಾ ಸಾವು ಪ್ರಕರಣ; ಶ್ರದ್ಧಾ ದುಬೆ ಮತ್ತಿತರರ ವಿರುದ್ಧ ಜಾಮೀನು ರಹಿತ ವಾರೆಂಟ್ ಜಾರಿ

**ಲಕ್ನೋ (ಉತ್ತರ ಪ್ರದೇಶ):** ಸಹಜೀವನ ನಡೆಸುತ್ತಿದ್ದ ಉದ್ಯಮಿ ಶಿವ ಶರ್ಮಾ ಅವರ ಸಾವಿಗೆ ಪ್ರಕರಣದಲ್ಲಿ ಸೋಶಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ ಶ್ರದ್ಧಾ ದುಬೆ ಮತ್ತು ಇತರೆ ಇಬ್ಬರಿಗೆ ಉತ್ತರ ಪ್ರದೇಶದ ನ್ಯಾಯಾಲಯವೊಂದು ಜಾಮೀನು ರಹಿತ ವಾರಂಟ್‌ಗಳನ್ನು ಹೊರಡಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಕ್ಟೋಬರ್ 9ರಂದು ಹಜರತ್‌ಗಂಜ್ ಪ್ರದೇಶದ ಬಾಲೂ ಅಡ್ಡಾ ಬಳಿ ಇರುವ ಅವಧ್ ಗ್ರೀನ್ ಅಪಾರ್ಟ್‌ಮೆಂಟ್'ನ ನಾಲ್ಕನೇ ಮಹಡಿಯಿಂದ ಬಿದ್ದು ಶಿವ ಶರ್ಮಾ ಸಾವನ್ನಪ್ಪಿದ್ದರು. ಈ ಘಟನೆ ಬಳಿಕ ಶರ್ಮಾ ಅವರೊಂದಿಗೆ ಸಹಜೀವನ ನಡೆಸುತ್ತಿದ್ದ ದುಬೆ ಎಂಬುವರು ಈಗ ತಲೆಮರೆಸಿಕೊಂಡಿದ್ದು, ಇತ್ತೀಚೆಗೆ ನೇಪಾಳದಲ್ಲಿ ಪ್ರಯಾಣಿಸಿದ್ದು ತಿಳಿದು ಬಂದಿತ್ತು. ಪ್ರಮುಖ ಆರೋಪಿ ದುಬೆ, ಆಕೆಯ ಸಹೋದರಿ ರಶ್ಮಿ ದುಬೆ ಮತ್ತು ಅವರ ಚಾಲಕ ತನ್ವೀರ್ ಅಲಿ ಅಲಿಯಾಸ್ ದಾನಿಶ್ ವಿರುದ್ಧ ನ್ಯಾಯಾಲಯವು ಜಾಮೀನು ರಹಿತ ವಾರಂಟ್‌ಗಳನ್ನು ಹೊರಡಿಸಿದೆ. ಆರೋಪಿಗಳ ವಿರುದ್ಧ ಪ್ರಮುಖ ಸಾಕ್ಷ್ಯಗಳು ಪತ್ತೆಯಾಗಿವೆ ಎಂದು ಅವರನ್ನು ಬಂಧಿಸಲು ಅನುಮತಿ ಕೋರಿ ಹಜರತ್‌ಗಂಜ್ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಮೂವರ ಶೋಧ ನಡೆಸಲು ಮುಂದಾದ ಲಕ್ನೋ ಪೊಲೀಸರ ತಂಡಕ್ಕೆ ಇವರು ನೇಪಾಳ ಗಡಿ ಸಮೀಪವಿರುವುದು ಪತ್ತೆಯಾಗಿತ್ತು. ಬಹ್ರೈಚ್ ಪೊಲೀಸರು ಹಾಗೂ ನೇಪಾಳದ ಸಂಬಂಧಿತ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುತ್ತಿದ್ದಾರೆ.

ಈ ಪ್ರಕರಣದ ತನಿಖೆ ನಡೆಸುತ್ತಿರುವ ಹಜರತ್‌ಗಂಜ್ ಇನ್ಸ್‌ಪೆಕ್ಟರ್ ವಿಕ್ರಮ್ ಸಿಂಗ್ ಮಾತನಾಡಿ, ಸಂಗ್ರಹಿಸಲಾದ ಸಾಕ್ಷ್ಯಗಳ ಆಧಾರದ ಮೇಲೆ ಆರೋಪಿಗಳನ್ನು ಬಂಧಿಸಲು ಪ್ರಯತ್ನಗಳು ನಡೆಯುತ್ತಿವೆ.

## ಆರ್‌ಎಸ್‌ಎಸ್ ಮುಖ್ಯಸ್ಥ ಭಾಗವತ್ ಮೋಹನ್ ಕಸರತ್ತು

**ಜಬಲ್‌ಪುರ:** ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ಅಕ್ಟೋಬರ್ 24ರಿಂದ ಮಧ್ಯಪ್ರದೇಶದ ಜಬಲ್‌ಪುರಕ್ಕೆ ಮೂರು ದಿನಗಳ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಅವರು ಕಾಲೇಜು ವಿದ್ಯಾರ್ಥಿಗಳಾಗಿರುವ ಸ್ವಯಂಸೇವಕರೊಂದಿಗೆ ಸಂವಾದ ನಡೆಸಲಿದ್ದಾರೆ. ಈ ಪ್ರದೇಶದಲ್ಲಿ ಯುವಜನರನ್ನು ತಲುಪುವ ಪ್ರಯತ್ನವನ್ನು ಸಂಘವು ತೀವ್ರಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಈ ಭೇಟಿ ಮಹತ್ವ ಪಡೆದಿದೆ. ಆರ್‌ಎಸ್‌ಎಸ್ ಪ್ರಾಂತ ಪ್ರಚಾರ ಪ್ರಮುಖ್ ವಿನೋದ್ ಕುಮಾರ್ ಅವರು ಪಿಟಿಐಗೆ ತಿಳಿಸಿದಂತೆ, ಅಕ್ಟೋಬರ್ 25ರಂದು ಮಹಾಕೌಶಲ ಪ್ರಾಂತದ ಜೆನ್–ಝೀ (ಇಂದಿನ ಯುವ ಪೀಳಿಗೆ) ಸ್ವಯಂಸೇವಕರಿಗಾಗಿ ಆಯೋಜಿಸಲಾದ ಶಿಬಿರವನ್ನು ಉದ್ದೇಶಿಸಿ ಭಾಗವತ್ ಮಾತನಾಡಲಿದ್ದಾರೆ. ಇದಲ್ಲದೆ, ಅವರು ಸ್ಥಳೀಯ ಪದಾಧಿಕಾರಿಗಳು ಮತ್ತು ಪ್ರಾಂತೀಯ ಕಾರ್ಯಕಾರಿ ತಂಡಗಳೊಂದಿಗೆ ಪ್ರಮುಖ ಸಭೆಗಳನ್ನು ನಡೆಸಲಿದ್ದಾರೆ.

ಆರ್‌ಎಸ್‌ಎಸ್‌ನ ಮಧ್ಯ ಕ್ಷೇತ್ರದ ವ್ಯಾಪ್ತಿಗೆ ಬರುವ ಮಹಾಕೌಶಲ ಪ್ರಾಂತವು 38 ಕಂದಾಯ ಜಿಲ್ಲೆಗಳನ್ನು ಒಳಗೊಂಡಿದ್ದು, ಜಬಲ್‌ಪುರ, ಸಾಗರ್ ಮತ್ತು ರೇವಾಗಳಲ್ಲಿ ಇದರ ವಿಭಾಗೀಯ ಕೇಂದ್ರ ಕಚೇರಿಗಳಿವೆ.ಭೇಟಿಯ ಮೊದಲ ದಿನವಾದ ಅಕ್ಟೋಬರ್ 24ರಂದು ಆರ್‌ಎಸ್‌ಎಸ್ ಮುಖ್ಯಸ್ಥರು ಸ್ಥಳೀಯ ಪ್ರಮುಖ ನಾಯಕರು, ಮುಖ್ಯ ಶಿಕ್ಷಕರು (ತರಬೇತುದಾರರು) ಮತ್ತು ನಗರ ಮಟ್ಟದ ಹಿರಿಯ ಪದಾಧಿಕಾರಿಗಳನ್ನು ಭೇಟಿಯಾಗಿ ಸಂಘಟನೆಯ ಆಂತರಿಕ ವಿಷಯಗಳ ಕುರಿತು ಚರ್ಚಿಸಲಿದ್ದಾರೆ.

## ರಾಜಸ್ಥಾನದಲ್ಲಿ ಭೀಕರ ರಸ್ತೆ ಬಸ್ ಅಪಘಾತ : 8 ಮಂದಿ ಸಾವು, 15 ಜನರಿಗೆ ಗಾಯ

**ಕೋಟಾ :** ರಾಜಸ್ಥಾನದ ಕೋಟಾ ಜಿಲ್ಲೆಯಲ್ಲಿ ಇಂದು ಬೆಳಿಗ್ಗೆ ಸುಮಾರು 6 ಗಂಟೆಗೆ ದೆಹಲಿಮುಂಬೈ ಎಕ್ಸ್‌ಪ್ರೆಸ್‌ವೇಯಲ್ಲಿ ಸುಮಾರು 23 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಮಿನಿ ಬಸ್ ಚಾಲಕನ ನಿಯಂತ್ರಣ ತಪ್ಪಿ, ರಸ್ತೆಯ ಪಕ್ಕದಲ್ಲಿದ್ದ 15 ಅಡಿ ಆಳದ ಚರಂಡಿಗೆ ಬಿದ್ದ ಪರಿಣಾಮ ಎಂಟು ಮಂದಿ ಮೃತಪಟ್ಟಿದ್ದು, 15 ಮಂದಿ ಗಾಯಗೊಂಡಿದ್ದಾರೆ.

ಗಾಯಗೊಂಡವರ ಪೈಕಿ ಎಂಟು ಮಂದಿಯ ಸ್ಥಿತಿ ಗಂಭೀರವಾಗಿದೆ. ಎಕ್ಸ್‌ಪ್ರೆಸ್‌ವೇಯ 384ನೇ ಕಂಬದ ಬಳಿ ಈ ಅಪಘಾತ ಸಂಭವಿಸಿದೆ. ವಾಹನ ಚಲಾಯಿಸುತ್ತಿದ್ದಾಗ ಚಾಲಕನಿಗೆ ನಿದ್ದೆ ಬಂದಿರಬಹುದು ಅಥವಾ ತೂಕಡಿಕೆ ಉಂಟಾಗಿರಬಹುದು. ಇದರಿಂದಾಗಿ ಎಂಟು ಪಥಗಳ ರಸ್ತೆಯಲ್ಲಿ ವಾಹನ ನಿಯಂತ್ರಣ ತಪ್ಪಿ




ಪಕ್ಕಕ್ಕೆ ಸರಿದಿರಬಹುದು ಎಂದು ಅಧಿಕಾರಿಗಳು ಶಂಕಿಸಿದ್ದಾರೆ. ಘಟನೆ ನಡೆದ ಕೂಡಲೇ ತುರ್ತು ಸೇವಾ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು. ಚರಂಡಿಯಲ್ಲಿದ್ದ ಕೆಸರು ಮತ್ತು ನೀರು ರಕ್ಷಣಾ ಕಾರ್ಯಕ್ಕೆ ಅಡ್ಡಿಯುಂಟುಮಾಡಿದ ಹಿನ್ನೆಲೆಯಲ್ಲಿ, ಕ್ರೇನ್‌ಗಳನ್ನು ಬಳಸಿ ಜಖಂಗೊಂಡ ವಾಹನವನ್ನು ಹೊರತೆಗೆಯಲಾಯಿತು ಮತ್ತು ಅದರೊಳಗೆ ಸಿಲುಕಿದ್ದವರನ್ನು ರಕ್ಷಿಸಲಾಯಿತು.ಮಧ್ಯಪ್ರದೇಶದ ಭೋಪಾಲ್ ಮತ್ತು ಬೆತುಲ್ ಜಿಲ್ಲೆಗಳಿಗೆ ಸೇರಿದ ಒಂದೇ ಕುಟುಂಬದ ಸಂಬಂಧಿಕರು ಇದರಲ್ಲಿ ಪ್ರಯಾಣಿಸುತ್ತಿದ್ದರು ಎಂದು ಕೋಟಾ ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಸುಜೀತ್ ಶಂಕರ್ ತಿಳಿಸಿದ್ದಾರೆ. ರಾಜಸ್ಥಾನದಲ್ಲಿ ನಾಲ್ಕರಿಂದ ಐದು ದಿನಗಳ ತೀರ್ಥಯಾತ್ರೆ ಕೈಗೊಳ್ಳಲು ಅವರು ನಿನ್ನೆ ಸಂಜೆ ಭೋಪಾಲ್‌ನಿಂದ ಪ್ರಯಾಣ ಆರಂಭಿಸಿದ್ದರು ಎಂದು ಅವರು ಹೇಳಿದರು. ಗಾಯಗೊಂಡ ಪ್ರಯಾಣಿಕರಲ್ಲೊಬ್ಬರಾದ ಅಂಶಿಕಾ ಅವರು, ತಾವು ಚಿಕ್ಕಪ್ಪಂದಿರು, ಅತ್ತೆಯಂದಿರು ಮತ್ತು ಇತರ ಸಂಬಂಧಿಕರೊಂದಿಗೆ ಪ್ರಯಾಣಿಸುತ್ತಿದ್ದುದಾಗಿ ತಿಳಿಸಿದರು. ಸಂಜೆ 7 ಗಂಟೆಗೆ ಭೋಪಾಲ್‌ನಿಂದ ಹೊರಟಿದ್ದ ತಾವು ಖಾತು ಶ್ಯಾಮ್‌ಜಿ ದೇವಾಲಯಕ್ಕೆ ದರ್ಶನಕ್ಕಾಗಿ ತೆರಳುತ್ತಿದ್ದಾಗ ಈ ಅಪಘಾತ ಸಂಭವಿಸಿದೆ ಎಂದು ಅವರು ಹೇಳಿದರು. ವಾಹನದಲ್ಲಿ ಸುಮಾರು 23 ಪ್ರಯಾಣಿಕರಿದ್ದರು. ಅಪಘಾತ ಸಂಭವಿಸಿದಾಗ ಅವರಲ್ಲಿ ಬಹುತೇಕರು ನಿದ್ರಿಸುತ್ತಿದ್ದರು ಎಂದು ಅಂಶಿಕಾ ತಿಳಿಸಿದರು. ಚಾಲಕನಿಗೆ ನಿದ್ದೆ ಬಂದಿರಬಹುದು ಎಂದು ಅವರು ಅಭಿಪ್ರಾಯಪಟ್ಟರು.ಗಾಯಗೊಂಡವರನ್ನು ತಕ್ಷಣವೇ ನ್ಯೂ ಮೆಡಿಕಲ್ ಕಾಲೇಜು ಆಸ್ಪತ್ರೆ ಮತ್ತು ಎಂಬಿಎಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಎನ್‌ಎಂಸಿಎಚ್ ಪ್ರಾಂಶುಪಾಲ ಡಾ. ನಿಲೇಶ್ ಜೈನ್ ಮಾತನಾಡಿ, ಗಾಯಾಳುಗಳಿಗೆ ತಕ್ಷಣವೇ ಚಿಕಿತ್ಸೆ ಆರಂಭಿಸಲಾಗಿದ್ದು, ಸಿಟಿ ಸ್ಕ್ಯಾನ್‌ನಂತಹ ಅಗತ್ಯ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ .

# ದೇಶದ ಆಂತರಿಕ ಭದ್ರತೆಯ ಸವಾಲುಗಳನ್ನು ಎದುರಿಸಲು ಸಿದ್ಧರಾಗಿ

## ಪ್ರೊಬೆಷನರಿ ಐಪಿಎಸ್ ಅಧಿಕಾರಿಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಲಹೆ

**ಹೈದರಾಬಾದ್:** ದೇಶದ ಆಂತರಿಕ ಭದ್ರತೆಗೆ ಸಂಬಂಧಿಸಿದಂತೆ ಉದ್ಭವಿಸುತ್ತಿರುವ ಸವಾಲುಗಳನ್ನು ಎದುರಿಸಲು ಸಿದ್ಧರಾಗುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಯುವ ಐಪಿಎಸ್ ಅಧಿಕಾರಿಗಳಿಗೆ ಕರೆ ನೀಡಿದರು.




ತಮ್ಮ ಅಧಿಕಾರವನ್ನು ಒಂದು ಸ್ಥಾನಮಾನವೆಂದು ಪರಿಗಣಿಸುವ ಬದಲು, ಅದನ್ನು ಒಂದು ಜವಾಬ್ದಾರಿಯೆಂದು ಭಾವಿಸಬೇಕು.

ಪ್ರಚಾರದ ಹಿಂದೆ ಬೀಳದೆ, ಫಲಿತಾಂಶಗಳನ್ನು ನೀಡುವತ್ತ ಗಮನಹರಿಸಬೇಕು ಎಂದು ಅವರು ಸಲಹೆ ನೀಡಿದರು.ಇಲ್ಲಿನ ಸರ್ದಾರ್ ವಲ್ಲಭಭಾಯಿ ಪಟೇಲ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ ನಡೆದ 78ನೇ ಬ್ಯಾಚ್‌ನ ತರಬೇತಿ ಮುಕ್ತಾಯ ಸಮಾರಂಭದಲ್ಲಿ ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಅವರು ಅಮಿತ್ ಶಾ ಅವರ ಸಂದೇಶವನ್ನು ಓದಿ ಹೇಳಿದರು. ಪೊಲೀಸ್ ಅಧಿಕಾರಿಗಳು ಪ್ರಚಾರದ ಹಂಬಲದಿಂದ ದೂರವಿರಬೇಕು. ತಮ್ಮ ಕಾರ್ಯಕ್ಷಮತೆಯ ಮೂಲಕವೇ ಮನ್ನಣೆ ಗಳಿಸಿಕೊಳ್ಳಬೇಕು. ವಿನಮ್ರತೆ, ಸಂಯಮ ಮತ್ತು ಸಂವಿಧಾನದ ಬಗೆಗಿನ ದೃಢ ಬದ್ಧತೆಯೇ ಒಬ್ಬ ಪೊಲೀಸ್ ಅಧಿಕಾರಿಯ ನಿಜವಾದ ಶಕ್ತಿಗಳಾಗಿವೆ ಎಂದು ಅವರು ಪ್ರತಿಪಾದಿಸಿದ್ದಾರೆ. ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಯನ್ನು ಕಾಯ್ದುಕೊಳ್ಳುವ ಅಗತ್ಯವಿದೆ.

ರಾಷ್ಟ್ರೀಯ ಭದ್ರತೆಗೆ ಎಲ್ಲಕ್ಕಿಂತ ಹೆಚ್ಚಿನ ಆದ್ಯತೆ ನೀಡಬೇಕು. ಗಡಿ ಭದ್ರತೆಯನ್ನು ಕಾಪಾಡಲು ತಂತ್ರಜ್ಞಾನ ಮತ್ತು ಕಣ್ಗಾವಲು ವ್ಯವಸ್ಥೆಗಳ ಬಳಸಿಕೊಳ್ಳಬೇಕು. ಹೊಸ ಕ್ರಿಮಿನಲ್ ನ್ಯಾಯ ಕಾನೂನುಗಳ ಆಶಯವನ್ನು ತಳಮಟ್ಟದಲ್ಲಿ ಜಾರಿಗೊಳಿಸುವಂತೆ ಕರೆ ನೀಡಿದ ಅವರು, ಆಧುನಿಕ ತಂತ್ರಜ್ಞಾನ ಮತ್ತು ವಿಧಿವಿಜ್ಞಾನದ ಬಳಕೆಯ ಮೂಲಕ ತನಿಖಾ ಪ್ರಕ್ರಿಯೆಯನ್ನು ಬಲಪಡಿಸುವಂತೆ ಒತ್ತಾಯಿಸಿದರು. ಇದೇ ವೇಳೆ ಮಾತನಾಡಿದ ಅವರು, ಭವಿಷ್ಯದಲ್ಲಿ ಪೊಲೀಸ್ ಅಧಿಕಾರಿಗಳು ಎದುರಿಸಬಹುದಾದ ಐದು ಪ್ರಮುಖ ಸವಾಲುಗಳನ್ನು ವಿವರಿಸಿದರು. ಮಾದಕವಸ್ತು ಕಳ್ಳಸಾಗಣೆ ಜಾಲಗಳನ್ನು ಧ್ವಂಸಗೊಳಿಸುವಂತೆ ಮತ್ತು ನಶಾ ಮುಕ್ತ ಭಾರತ ಗುರಿಯತ್ತ ಶ್ರಮಿಸುವಂತೆ ಅವರು ಕರೆ ನೀಡಿದರು.

ಸೈಬರ್ ಅಪರಾಧಗಳನ್ನು, ವಿಶೇಷವಾಗಿ 'ಮ್ಯೂಲ್' ಬ್ಯಾಂಕ್ ಖಾತೆಗಳನ್ನು ಬಳಸಿಕೊಂಡು ನಡೆಯುವ ವಂಚನೆಗಳು ಮತ್ತು ನಕಲಿ ಸಿಮ್ ಕಾರ್ಡ್‌ಗಳ ಬಳಕೆಯನ್ನು ತಡೆಯಲು ರಾಜ್ಯ ಮಟ್ಟದಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತೆ ಅವರು ಸಲಹೆ ನೀಡಿದರು.

ದೇಶದ ಒಳಗಿನಿಂದ ಉದ್ಭವಿಸುವ ಅಥವಾ ವಿದೇಶದಿಂದ ಪ್ರೇರಿತವಾದ ಭಯೋತ್ಪಾದಕ ಬೆದರಿಕೆಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಬೇಕಾದ ಅಗತ್ಯವಿದೆ.

ದೇಶದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳನ್ನು ಗುರುತಿಸುವುದು ಎಷ್ಟು ಮುಖ್ಯ ಎಂಬುದರ ಕುರಿತಾಗಿಯೂ ಅವರು ಬೆಳಕು ಚೆಲ್ಲಿದರು.

### ಅಧಿಕಾರಿಗಳಿಗೆ ಪ್ರಶಸ್ತಿ ಪ್ರದಾನ

**ಹೈದರಾಬಾದ್‌ನ ಸರ್ದಾರ್ ವಲ್ಲಭಭಾಯಿ ಪಟೇಲ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ 78ನೇ ಬ್ಯಾಚ್‌ನ ತರಬೇತಿಯನ್ನು ಪೂರ್ಣಗೊಳಿಸಿದ 151 ಅಧಿಕಾರಿಗಳು (ಇವರಲ್ಲಿ 37 ಮಹಿಳೆಯರು ಸೇರಿದ್ದಾರೆ) ಈ ಸಮಾರಂಭದಲ್ಲಿ ಪಾಲ್ಗೊಂಡರು.**

**ಈ ಗುಂಪಿನಲ್ಲಿ 135 ಐಪಿಎಸ್ ಅಧಿಕಾರಿಗಳು ಹಾಗೂ ನೇಪಾಳ, ಭೂತಾನ್ ಮತ್ತು ಮಾಲ್ಡೀವ್ಸ್‌ನ 16 ಅಧಿಕಾರಿಗಳು ಇದ್ದರು.ಮುಖ್ಯ ಅತಿಥಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಅವರು ಪರೇಡ್ ಅನ್ನು ವೀಕ್ಷಿಸಿದರು. ಅತ್ಯುತ್ತಮ ಸಾಧನೆ ತೋರಿದ ಅಧಿಕಾರಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.**

# ತಮಿಳಿನ ಸ್ಟಾರ್ ನಿರ್ದೇಶಕನ ಜೊತೆಗೆ ಕೈಜೋಡಿಸಿದ ಜೂ ಎನ್‌ಟಿಆರ್

ಜೂ ಎನ್‌ಟಿಆರ್ ಪ್ರಸ್ತುತ ಪ್ರಶಾಂತ್ ನೀಲ್ ನಿರ್ದೇಶನ ಮಾಡುತ್ತಿರುವ 'ಡ್ರ್ಯಾಗನ್' ಸಿನಿಮಾನಲ್ಲಿ ನಟನೆ ಮಾಡುತ್ತಿದ್ದಾರೆ. ಸಿನಿಮಾ ಮುಂದಿನ ವರ್ಷ ಬಿಡುಗಡೆ ಆಗಲಿದೆ. ಸಿನಿಮಾದ ಬಗ್ಗೆ ಖುದ್ದು ಜೂ ಎನ್‌ಟಿಆರ್‌ಗೆ ಹಾಗೂ ಅವರ ಅಭಿಮಾನಿಗಳಿಗೆ ಸಾಕಷ್ಟು ನಿರೀಕ್ಷೆಗಳಿವೆ. 'ಡ್ರ್ಯಾಗನ್' ಸಿನಿಮಾದ ಬಳಿಕವೂ ಸಹ ಜೂ ಎನ್‌ಟಿಆರ್ ಅವರಿಗೆ ಸಾಕಷ್ಟು ಒಳ್ಳೆಯ ಲೈನಪ್‌ಗಳು ಇವೆ. ವಿಶೇಷವಾಗಿ ತ್ರಿವಿಕ್ರಮ್ ಶ್ರೀನಿವಾಸ್ ನಿರ್ದೇಶನದ ಹೊಸ ಭರ್ಜರಿ ಆಕ್ಷನ್ ಸಿನಿಮಾನಲ್ಲಿ ಜೂ ಎನ್‌ಟಿಆರ್ ನಟನೆ ಮಾಡಲಿದ್ದಾರೆ. ಅದರ ಬಳಿಕ ಜೂ ಎನ್‌ಟಿಆರ್ ನಟಿಸಲಿರುವ ಸಿನಿಮಾವನ್ನು ತಮಿಳಿನ ಸ್ಟಾರ್ ನಿರ್ದೇಶಕರೊಬ್ಬರು ನಿರ್ದೇಶನ ಮಾಡುತ್ತಿರುವುದು ಮತ್ತೊಂದು ವಿಶೇಷ.

ಜೂ ಎನ್‌ಟಿಆರ್ ಅವರು ತ್ರಿವಿಕ್ರಮ್ ಶ್ರೀನಿವಾಸ್ ಬಳಿಕ ನಟಿಸಲಿರುವ ಹೊಸ ಸಿನಿಮಾ ಅನ್ನು ತಮಿಳಿನ ನಿರ್ದೇಶಕ ನೆಲ್ಸನ್ ನಿರ್ದೇಶಿಸಲಿದ್ದಾರೆ. ರಜನೀಕಾಂತ್ ನಿರ್ದೇಶನದ 'ಜೈಲರ್' ಮತ್ತು 'ಜೈಲರ್ 2' ಸಿನಿಮಾಗಳನ್ನು ನಿರ್ದೇಶಿಸಿರುವ ನೆಲ್ಸನ್ ಪಕ್ಕಾ ಆಕ್ಷನ್, ಮಾಸ್ ಎಂಟರ್ಟೈನರ್‌ಗಳನ್ನು ನೀಡುವುದರಲ್ಲಿ ನಿಸ್ಸೀಮರು. ಈಗ ಅವರು ಜೂ ಎನ್‌ಟಿಆರ್ ಜೊತೆಗೆ ಕೈ ಜೋಡಿಸಿದ್ದು, ಸಿನಿಮಾದ ಯೋಜನೆ ಬಹುತೇಕ ಅಂತಿಮಗೊಂಡಿದೆ.ಅಸಲಿಗೆ 2025ರಲ್ಲೇ ನೆಲ್ಸನ್ ಅವರು ಜೂ ಎನ್‌ಟಿಆರ್‌ಗಾಗಿ ಸಿನಿಮಾ ನಿರ್ದೇಶನ ಮಾಡಬೇಕಿತ್ತು. ಆದರೆ ಜೂ ಎನ್‌ಟಿಆರ್ ಅವರು 'ಡ್ರ್ಯಾಗನ್' ಸಿನಿಮಾನಲ್ಲಿ ಬ್ಯುಸಿಯಾಗಿದ್ದ ಕಾರಣದಿಂದಾಗಿ ಆ ಸಿನಿಮಾ ಯೋಜನೆ ಮುಂದೂಡಲ್ಪಟ್ಟಿತ್ತು.



ಆ ಬಳಿಕ ಹರಿದಾಡಿದ್ದ ಕೆಲ ಸುದ್ದಿಗಳ ಪ್ರಕಾರ, ನೆಲ್ಸನ್ ಹಾಗೂ ಜೂ ಎನ್‌ಟಿಆರ್ ಸಿನಿಮಾ ಚರ್ಚೆಯ ಹಂತದಲ್ಲಿಯೇ ನಿಂತು ಹೋಗಿದೆ ಎಂದೆಲ್ಲ ಹೇಳಲಾಗಿತ್ತು. ಆದರೆ ಅದು ಸುಳ್ಳಾಗಿದೆ. ಜೂ ಎನ್‌ಟಿಆರ್ ಅವರು ನೆಲ್ಸನ್ ಜೊತೆಗೆ ಕೆಲಸ ಮಾಡುವ ವಿಷಯವನ್ನು ಖುದ್ದು ನಿರ್ಮಾಪಕ ನಾಗವಂಶಿ ಅವರೇ ಖಚಿತಪಡಿಸಿದ್ದಾರೆ. ಸಿನಿಮಾಕ್ಕೆ ಬಂಡವಾಳವನ್ನು ಅವರೇ ಹೂಡಲಿದ್ದಾರೆ. ಜೂ ಎನ್‌ಟಿಆರ್ ಅವರು ಮುಂದಿನ ಎರಡು ಮೂರು ವರ್ಷಗಳಿಗೆ ಬ್ಯುಸಿ ಆಗಿಬಿಟ್ಟಿದ್ದಾರೆ. 'ಡ್ರ್ಯಾಗನ್' ಬಳಿಕ ತ್ರಿವಿಕ್ರಮ್ ಜೊತೆಗೆ 'ಗಾಡ್ ಆಫ್ ವಾರ್' ಆ ಬಳಿಕ ನೆಲ್ಸನ್ ಜೊತೆಗೆ ಸಿನಿಮಾ. ಈ ಸಿನಿಮಾಗಳ ಬಳಿಕ ಬಹುಷಃ 'ದೇವರ 2' ಸಿನಿಮಾ ಮಾಡಬಹುದು ಎನ್ನಲಾಗುತ್ತಿದೆ.

ಇನ್ನುಳಿದಂತೆ ಜೂ ಎನ್‌ಟಿಆರ್ ಅವರು ತಮಿಳಿನ ವೆಟ್ರಿಮಾರನ್ ನಿರ್ದೇಶನದ ಸಿನಿಮಾನಲ್ಲಿ ನಟನೆ ಮಾಡಲಿದ್ದಾರೆ ಎಂಬ ಮಾತುಗಳು ಸಹ ಕೇಳಿ ಬಂದಿತ್ತು. ಆದರೆ ಅದು ಇನ್ನೂ ಖಾತ್ರಿ ಆಗಿಲ್ಲ. ಜೊತೆಗೆ ಹಿಂದಿಯ ಯಶ್ ರಾಜ್ ಫಿಲಮ್ಸ್, ಜೂ ಎನ್‌ಟಿಆರ್ ಅವರಿಗಾಗಿ ಪ್ರತ್ಯೇಕ ಸೋಲೊ ಆಕ್ಷನ್ ಸಿನಿಮಾ ಸಹ ನಿರ್ಮಾಣ ಮಾಡಲಿದೆ ಎಂಬ ಮಾತುಗಳು ಸಹ ಹರಿದಾಡಿದ್ದವು. ಅದೂ ಸಹ ಇನ್ನಷ್ಟೆ ಖಾತ್ರಿ ಆಗಬೇಕಿದೆ.



# 'ಪ್ರೇಮದ ಊರಲ್ಲಿ' ಸಿನಿಮಾ ಅಬ್ಬರ

ರಜನಿಕಾಂತ್ ಅಭಿನಯದ ಬಹುನಿರೀಕ್ಷಿತ 'ಜೈಲರ್ 2' ಸಿನಿಮಾ ತೆರೆಗೆ ಬಂದ ಬಳಿಕ 'ಪ್ರೇಮದ ಊರಲ್ಲಿ' ಚಿತ್ರದ ಪ್ರದರ್ಶನಗಳ ಸಂಖ್ಯೆಯಲ್ಲಿ ತುಸು ಇಳಿಕೆಯಾಗಿದೆ. ಆದಾಗ್ಯೂ, ಬಾಕ್ಸ್ ಆಫೀಸ್‌ನಲ್ಲಿ 'ಪ್ರೇಮದ ಊರಲ್ಲಿ' ಸಿನಿಮಾ ಯಶಸ್ವಿ ಪ್ರದರ್ಶನವನ್ನು ಮುಂದುವರಿಸಿದೆ. ಬಿಡುಗಡೆಯಾಗಿ 22 ದಿನಗಳನ್ನು ಕಳೆದಿದ್ದರೂ ಸಹ ಈ ಚಿತ್ರದ ಗರ್ಜನೆ ಇನ್ನೂ ಕಡಿಮೆಯಾಗಿಲ್ಲ.

ಆದಾಗ್ಯೂ, ಪ್ರೇಕ್ಷಕರ ಬೇಡಿಕೆ ಮತ್ತು ಸಕಾರಾತ್ಮಕ ಪ್ರತಿಕ್ರಿಯೆಯಿಂದಾಗಿ ಈ ಸಿನಿಮಾ ತನ್ನ ಓಟವನ್ನು ಯಾವುದೇ ಕಾರಣಕ್ಕೂ ನಿಲ್ಲಿಸಿಲ್ಲ. ಅಕ್ಟೋಬರ್ 16ರಂದು ಅಂದರೆ ನಾಲ್ಕನೇ ಶುಕ್ರವಾರದಂದು (22ನೇ ದಿನ) ಈ ಚಿತ್ರವು ದೇಶಾದ್ಯಂತ ಒಟ್ಟು 861 ಪ್ರದರ್ಶನಗಳ ಮೂಲಕ ಭರ್ಜರಿ ರೂ. 3 ಕೋಟಿ ರೂಪಾಯಿ ನೆಟ್ ಕಲೆಕ್ಷನ್ ಬಾಚಿಕೊಂಡಿದೆ. ಇದರೊಂದಿಗೆ ಭಾರತದಲ್ಲಿ ಚಿತ್ರದ ಒಟ್ಟು ನೆಟ್ ಗಳಿಕೆಯು 68.37 ಕೋಟಿ ರೂಪಾಯಿಗೆ ತಲುಪಿದ್ದರೆ, ಒಟ್ಟು ಗ್ರಾಸ್ ಕಲೆಕ್ಷನ್ ರೂ. 79.86 ಕೋಟಿ ರೂಪಾಯಿಗೆ ಏರಿಕೆಯಾಗಿದೆ.

ವಿದೇಶಿ ಮಾರುಕಟ್ಟೆಯಲ್ಲೂ ಈ ಚಿತ್ರವು ತನ್ನ ಪರಾಕ್ರಮ ಮುಂದುವರಿಸಿದೆ. ಅಲ್ಲಿ ಈ ಸಿನಿಮಾ 1.75 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ದೇಶ ಹಾಗೂ ವಿದೇಶಿ ಮಾರುಕಟ್ಟೆಯ ಒಟ್ಟು ಗಳಿಕೆಯನ್ನು ಸೇರಿಸಿದರೆ, 'ಪ್ರೇಮದ ಊರಲ್ಲಿ' ಚಿತ್ರದ ಒಟ್ಟು ವಿಶ್ವದ್ಯಂತ ಗ್ರಾಸ್ ಕಲೆಕ್ಷನ್ 81.61 ಕೋಟಿಗೆ ತಲುಪಿದೆ. ಬಿಗ್ ಬಜೆಟ್ ಸಿನಿಮಾಗಳ ಸ್ಪರ್ಧೆ ಮತ್ತು ಶೋಗಳ ಸಂಖ್ಯೆ ಕಡಿತಗೊಂಡ ನಡುವೆಯೂ ಪ್ರೇಕ್ಷಕರು ಈ ಚಿತ್ರಕ್ಕೆ ತೋರುತ್ತಿರುವ ಬೆಂಬಲ ನಿಜಕ್ಕೂ ಗಮನಾರ್ಹವಾಗಿದೆ. ಯಾವ ಹಂತದಲ್ಲೂ ತನ್ನ ಪ್ರದರ್ಶನವನ್ನು ನಿಲ್ಲಿಸದ ಬಾಕ್ಸ್ ಆಫೀಸ್‌ನಲ್ಲಿ ಗಟ್ಟಿಯಾಗಿ ನೆಲೆನಿಂತಿರುವ ಈ ಸಿನಿಮಾ, ನೂರು ಕೋಟಿ ರೂಪಾಯಿ ತಲುಪೋ ಸಾಧ್ಯತೆ ಇದೆ.

'ಪ್ರೇಮದ ಊರಲ್ಲಿ' ಸಿನಿಮಾಗೆ ಮನೋಜ್ ಕುಮಾರ್ ನಿರ್ದೇಶನ ಇದೆ. ಈ ಚಿತ್ರದಲ್ಲಿ ಶ್ರೀರಾಮ್, ರಮಿಕಾ ಶಿವು, ತಪಸ್ವಿನಿ ಪೂಣಚ್ಚ ಮೊದಲಾದವರು ನಟಿಸಿದ್ದಾರೆ.

# ಅನಿರುದ್ಧ್-ಕಾವ್ಯಾ ಮಾರನ್ ಮದುವೆ: ಸಿಎಂ ಡಿಕೆ ಶಿಗೆ ಆಹ್ವಾನ ಪತ್ರಿಕೆ ನೀಡಿದ ಕಲಾನಿಧಿ ಮಾರನ್ ದಂಪತಿ!

ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ ಅನಿರುದ್ಧ್ ರವಿಚಂದರ್ ಮತ್ತು ಐಪಿಎಲ್‌ನ ಸನ್‌ರೈಸರ್ಸ್ ಹೈದರಾಬಾದ್ ತಂಡದ ಸಿಇಒ ಕಾವ್ಯಾ ಮಾರನ್ ಅವರ ವಿವಾಹ ನಿಗದಿ ಆಗಿದ್ದು, ನವೆಂಬರ್ ತಿಂಗಳಲ್ಲಿ ಚೆನ್ನೈನಲ್ಲಿ ಮದುವೆ ನಡೆಯಲಿದೆ. ಈಗಾಗಲೇ ಮದುವೆ ಕಾರ್ಯಗಳು ಶುರುವಾಗಿದ್ದು, ಗಣ್ಯರಿಗೆ ಆಹ್ವಾನ ಪತ್ರಿಕೆ ನೀಡಲಾಗುತ್ತಿದೆ. ಕರ್ನಾಟಕ ಸಿಎಂ ಡಿಕೆ ಶಿವಕುಮಾರ್ ಅವರಿಗೂ ಮದುವೆ ಆಹ್ವಾನ ಪತ್ರಿಕೆ ನೀಡಲಾಗಿದೆ. ಸನ್ ಟಿವಿ ಗ್ರೂಪ್ ಅಧ್ಯಕ್ಷ ಕಲಾನಿಧಿ ಮಾರನ್ ಮತ್ತು ಅವರ ಪತ್ನಿ ಕಾವೇರಿ ಮಾರನ್ ಅವರು ಇಂದು ಬೆಂಗಳೂರಿನಲ್ಲಿ ರಾಜ್ಯದ ಸಿಎಂ ಡಿಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿದರು. ತಮ್ಮ ಮಗಳ ಮದುವೆಯ ಆಮಂತ್ರಣ ಪತ್ರಿಕೆಯನ್ನು ನೀಡಿದ್ದಾರೆ. ಈ ವೇಳೆ ಕಾವ್ಯ ಕಲಾನಿಧಿ ಅವರು ಕೂಡ ಜೊತೆಗಿದ್ದರು. ಸದ್ಯ ಅನಿರುದ್ಧ್ ಮತ್ತು ಕಾವ್ಯಾ ಅವರ ವಿವಾಹದ ಸಕಲ ಸಿದ್ಧತೆಗಳು ಭರದಿಂದ ಸಾಗಿದೆ. ಚಿತ್ರರಂಗದ ನಟ, ನಟಿಯರು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಪ್ರಮುಖ ರಾಜಕಾರಣಿಗಳಿಗೆ ಕಲಾನಿಧಿ ಮಾರನ್ ದಂಪತಿ ಖುದ್ದಾಗಿ ತಾವೇ ಆಹ್ವಾನ ಪತ್ರಿಕೆ ನೀಡುತ್ತಿದ್ದಾರೆ. ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಅವರನ್ನು ಹೈದರಾಬಾದ್‌ನಲ್ಲಿರುವ ಅವರ ನಿವಾಸಕ್ಕೆ ತೆರಳಿ ಆಹ್ವಾನ ಪತ್ರಿಕೆ ನೀಡಲಾಗಿದೆ. ಜೊತೆಗೆ ಆಂಧ್ರಪ್ರದೇಶ ಸಿಎಂ ಎನ್. ಚಂದ್ರಬಾಬು ನಾಯ್ಡು ಅವರನ್ನು ಭೇಟಿ ಮಾಡಿ ತಮ್ಮ ಮಗಳ ವಿವಾಹ ಆರತಕ್ಷತೆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ನೀಡಿದ್ದಾರೆ. ಜೊತೆಗೆ ಆಂಧ್ರಪ್ರದೇಶದ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ನಾರಾ ಲೋಕೇಶ್‌ರನ್ನು ಭೇಟಿಯಾಗಿ ಆಮಂತ್ರಣ ಪತ್ರಿಕೆ ನೀಡಲಾಗಿದೆ. ಇನ್ನು ಅನಿರುದ್ಧ್ ಮತ್ತು ಕಾವ್ಯಾ ಅವರ ವಿವಾಹ ನವೆಂಬರ್ 11ರಂದು ಗ್ರೀಸ್‌ನಲ್ಲಿ ನಡೆಯಲಿದೆ. ಬಳಿಕ ನವೆಂಬರ್ 21ರಂದು ಚೆನ್ನೈನಲ್ಲಿ ಆರತಕ್ಷತೆ ನಡೆಯಲಿದೆ. ಚಿತ್ರರಂಗ, ರಾಜಕೀಯ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.



# 'ಅಮೃತವರ್ಷಿಣಿ', 'ಕೋಟಿಗೊಬ್ಬ' ಮ್ಯೂಸಿಕ್ ಡೈರೆಕ್ಟರ್ ದೇವಾ ನಿಧನ

ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ ಹಾಗೂ ಗಾಯಕ 'ತೆನಿಸೈ ತೆಂದ್ರಲ್' ಎಂದೇ ಖ್ಯಾತರಾಗಿದ್ದ ದೇವಾ ಅವರು ನಿಧನರಾಗಿದ್ದಾರೆ. ತಮ್ಮ 75ನೇ ವಯಸ್ಸಿನಲ್ಲಿ ಅವರು ಚೆನ್ನೈನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆದರು. ತಮಿಳು ಮಾತ್ರವಲ್ಲದೆ ಕನ್ನಡದ 'ಅಮೃತವರ್ಷಿಣಿ', 'ಸಿಂಹಾದ್ರಿಯ ಸಿಂಹ' ಹಾಗೂ 'ಕೋಟಿಗೊಬ್ಬ' ಸೇರಿದಂತೆ ಹಲವು ಜನಪ್ರಿಯ ಸಿನಿಮಾಗಳಿಗೆ ಅವರು ಸಂಗೀತ ಸಂಯೋಜನೆ ಮಾಡುವ ಮೂಲಕ ಕನ್ನಡಿಗರ ಮನಸೂರೆಗೊಂಡಿದ್ದರು. ಅವರ ಅಗಲಿಕೆ ಸಂಗೀತ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ.

ತಮಿಳು ಚಿತ್ರರಂಗದಲ್ಲಿ ಎಪ್ಪತ್ತರ ದಶಕದ ಕೊನೆಯಲ್ಲಿ ಹಾಗೂ ಎಂಬತ್ತರ ದಶಕದಲ್ಲಿ ದೇವಾ ಅವರು ಸಂಗೀತ ಲೋಕದಲ್ಲಿ ಹೊಸ ಸಂಚಲನ ಮೂಡಿಸಿದರು. ಜಾನಪದ ಶೈಲಿಯ ಹಾಡುಗಳನ್ನು ಮುಖ್ಯವಾಹಿನಿಗೆ ತರುವಲ್ಲಿ ಇವರ ಪಾತ್ರ ಹಿರಿದಾದದ್ದು. 'ಅಣ್ಣಾಮಲೈ', 'ಬಾಷಾ', 'ಖುಷಿ' ಮುಂತಾದ ನೂರಾರು ಸಿನಿಮಾಗಳಿಗೆ ಅವರು ಜೀವ ತುಂಬಿದ್ದಾರೆ. ಇವರ ಮಧುರವಾದ ಸಂಯೋಜನೆಗಳು ಇಂದಿಗೂ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ದೇವಾ ಅವರ ಸಂಗೀತ ವೃತ್ತಿಜೀವನವು ಮೂರು ದಶಕಗಳಿಗೂ ಹೆಚ್ಚು ಕಾಲ ಯಶಸ್ವಿಯಾಗಿ ಸಾಗಿತು. ತಮಿಳು, ತೆಲುಗು, ಕನ್ನಡ ಹಾಗೂ ಮಲಯಾಳಂ ಭಾಷೆಗಳಲ್ಲಿ ನೂರಾರು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದರು.



ಇವರ ವಿಶಿಷ್ಟವಾದ ರಾಗಗಳು ಹಾಗೂ ಶ್ರುತಿ ಮಾಧುರ್ಯವು ಎಲ್ಲಾ ವರ್ಗದ ಜನರ ಮೆಚ್ಚುಗೆಗೆ ಪಾತ್ರವಾಯಿತು. ಗಾಯಕರಾಗಿಯೂ ಕೂಡ ಅವರು ತಮ್ಮದೇ ಆದ ವಿಭಿನ್ನ ಶೈಲಿಯನ್ನು ಗುರುತಿಸಿಕೊಂಡಿದ್ದರು. ತಮಿಳುನಾಡು ಸರ್ಕಾರದ 'ಕಲಾಮಾಮಣಿ' ಸೇರಿದಂತೆ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಇವರನ್ನು ಹುಡುಕಿ ಬಂದಿವೆ 'ಅಮೃತವರ್ಷಿಣಿ' ಚಿತ್ರಕ್ಕೆ ಫಿಲ್ಮ್‌ಫೇರ್ ಅವಾರ್ಡ್ ಸಿಕ್ಕಿದೆ.

'ಆಸೆ' ಚಿತ್ರದ ಅತ್ಯುತ್ತಮ ಸಂಗೀತ ನಿರ್ದೇಶನಕ್ಕಾಗಿ ಇವರಿಗೆ ತಮಿಳುನಾಡು ರಾಜ್ಯ ಚಲನಚಿತ್ರ ಪ್ರಶಸ್ತಿ ಲಭಿಸಿದೆ. ಇವರ ಕುಟುಂಬದಿಂದಲೂ ಮಗ ಶ್ರೀಕಾಂತ್ ದೇವಾ ಸೇರಿದಂತೆ ಹಲವರು ಸಂಗೀತ ರಂಗದಲ್ಲಿ ತೊಡಗಿಸಿಕೊಂಡು ತಮ್ಮದೇ ಆದ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ. ಇಂದು ದೇವಾ ಅವರು ಭೌತಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ ಅವರು ನೀಡಿದ ಮಧುರ ಧ್ವನಿಯ ಗೀತೆಗಳು ಎಂದೆಂದಿಗೂ ಅಮರ. ಅವರ ಅಗಲಿಕೆಗೆ ಇಡೀ ದಕ್ಷಿಣ ಭಾರತದ ಚಿತ್ರರಂಗ ಕಂಬನಿ ಮಿಡಿದಿದೆ. ಅಪಾರ ಸಂಖ್ಯೆಯ ಅಭಿಮಾನಿಗಳು ಹಾಗೂ ಗಣ್ಯರು ತಮ್ಮ ನೆಚ್ಚಿನ ಸಂಗೀತ ನಿರ್ದೇಶಕನಿಗೆ ಅಂತಿಮ ನಮನಗಳನ್ನು ಸಲ್ಲಿಸುತ್ತಿದ್ದಾರೆ.

# ವಿವರ್ಸ್ ಕಾನ್ ಫೆಸ್ಟಿವಲ್ ಕಲಾವಿದರ ಲಿಸ್ಟ್ ರಿಲೀಸ್

ಭಾರತದ ಕೆ-ಪಾಪ್ ಅಭಿಮಾನಿಗಳಿಗೆ ಹೈಬ್ ಸಂಸ್ಥೆಯು ಅತ್ಯಂತ ಸಂತೋಷದ ಸುದ್ದಿಯೊಂದನ್ನು ನೀಡಿದೆ. ಪ್ರಸಿದ್ಧ 'ವಿವರ್ಸ್ ಕಾನ್ ಫೆಸ್ಟಿವಲ್' ಇದೇ ಮೊದಲ ಬಾರಿಗೆ ದಕ್ಷಿಣ ಕೊರಿಯಾದಿಂದ ಹೊರಗೆ ಅಂದರೆ ಭಾರತದಲ್ಲಿ ಆಯೋಜನೆಗೊಳ್ಳುತ್ತಿದೆ. 2027ರ ಮಾರ್ಚ್ 27 ಮತ್ತು 28ರಂದು ನವದೆಹಲಿಯಲ್ಲಿ ಈ ಬೃಹತ್ ಸಂಗೀತ ಉತ್ಸವ ನಡೆಯಲಿದೆ. ಜಾಗತಿಕ ಮಟ್ಟದ ಪ್ರಖ್ಯಾತ ಸಂಗೀತ ಕಲಾವಿದರು ಈ ವೇದಿಕೆಯಲ್ಲಿ ಒಂದಾಗಲಿದ್ದಾರೆ. ಈ ಸಂಗೀತ ಕಾರ್ಯಕ್ರಮದಲ್ಲಿ ಹತ್ತು ಅಂತರರಾಷ್ಟ್ರೀಯ ಕಲಾವಿದರು ಭಾಗವಹಿಸಲಿದ್ದಾರೆ. ಪ್ರಮುಖ ಕೆ-ಪಾಪ್ ತಂಡಗಳಾದ ಎನ್‌ಹೈಫನ್, ಟುಮಾರೋ ಬೈ ಟುಗೆದರ್ ಮತ್ತು ಲೆ ಸೆರಾಫಿಮ್ ತಮ್ಮ ಪ್ರದರ್ಶನ ನೀಡಲಿವೆ. ಜನಪ್ರಿಯ ಗಾಯಕಿ ಹ್ವಾಸಾ ತಮ್ಮ ಸೋಲೋ ಪ್ರದರ್ಶನದ ಮೂಲಕ ಮನರಂಜಿಸಲಿದ್ದಾರೆ. ಪ್ರಸಿದ್ಧ ಸಿಂಗರ್ ಎರಿಕ್ ನಾಮ್ ಹಾಗೂ ಕ್ಯಾಟ್ಸ್‌ಯೆ ಗ್ರೂಪ್‌ನ ಲಾರಾ ರಾಜ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ. ಅಂತರರಾಷ್ಟ್ರೀಯ ಕಲಾವಿದರ ಜೊತೆಗೆ ಭಾರತೀಯ ಸಂಗೀತಗಾರರು ಕೂಡ ಈ ವೇದಿಕೆಯನ್ನು ಹಂಚಿಕೊಳ್ಳಲಿದ್ದಾರೆ. ಭಾರತದ ಪ್ರಸಿದ್ಧ ರಾಪರ್ ಕಿಂಗ್, ಗಿನಿ, ರೇಬೆಲ್ ಹಾಗೂ ಡಿಜೆ ಝುಲೋ ಈ ಉತ್ಸವದಲ್ಲಿ ಗಾನಬಜಾನ ನಡೆಸಲಿದ್ದಾರೆ. ಭಾರತೀಯ ಹಿಪ್-ಹಾಪ್ ಹಾಗೂ ಇಂಡಿ ಸಂಗೀತ ಶೈಲಿಗಳು ಕೊರಿಯನ್ ಸಂಗೀತದ ಜೊತೆಗೆ ಸಂಗಮವಾಗಲಿವೆ. ಇದು ಭಾರತೀಯ ಹಾಗೂ ವಿದೇಶಿ ಸಂಗೀತ ಪ್ರಿಯರಿಗೆ ವಿಶಿಷ್ಟ ಅನುಭವ ನೀಡಲಿದೆ. ವಿವರ್ಸ್ ಕಾನ್ ಫೆಸ್ಟಿವಲ್ ಇಂಡಿಯಾವನ್ನು ಹೈಬ್ ಇಂಡಿಯಾ ಹಾಗೂ ಬುಕ್‌ಮೈಶೋ ಲೈವ್ ಸಂಸ್ಥೆಗಳು ಜಂಟಿಯಾಗಿ ನಿರ್ಮಿಸುತ್ತಿವೆ. ಟಿಕೆಟ್‌ಗಳ ಮುಂಗಡ ಕಾಯ್ದಿರಿಸುವಿಕೆ 2026ರ ಅಕ್ಟೋಬರ್ 27ರಿಂದ ಆರಂಭವಾಗಲಿದೆ. ಸಾಮಾನ್ಯ ಟಿಕೆಟ್‌ಗಳ ಮಾರಾಟವು ಅಕ್ಟೋಬರ್ 30ರಿಂದ ಸಾರ್ವಜನಿಕರಿಗೆ ಲಭ್ಯವಾಗಲಿದೆ. ಪ್ರಮುಖ ಕೆ-ಪಾಪ್ ಬ್ಯಾಂಡ್‌ಗಳನ್ನು ಒಂದೇ ವೇದಿಕೆಯಲ್ಲಿ ನೋಡಲು ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ. ದೆಹಲಿಯಲ್ಲಿ ನಡೆಯಲಿರುವ ಈ ಕಾರ್ಯಕ್ರಮವು ಭಾರತದಲ್ಲಿ ಕೆ-ಪಾಪ್ ಸಂಸ್ಕೃತಿ ಬೆಳೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ವಿಭಿನ್ನ ಶೈಲಿಯ ಪ್ರದರ್ಶನಗಳು ಹಾಗೂ ಅದ್ಭುತ ನೃತ್ಯದ ಮೂಲಕ ಕೊರಿಯನ್ ಬ್ಯಾಂಡ್‌ಗಳು ಪ್ರೇಕ್ಷಕರನ್ನು ರಂಜಿಸಲಿವೆ.



# ಚಿರಂಜೀವಿ ಸರ್ಜಾ ಜನ್ಮದಿನಕ್ಕೆ ಭಾವುಕ ಪೋಸ್ಟ್ ಹಾಕಿದ ಮೇಘನಾ ರಾಜ್



ಕನ್ನಡ ಚಿತ್ರರಂಗದ ಪ್ರೀತಿಯ ಜೋಡಿ ಚಿರಂಜೀವಿ ಸರ್ಜಾ ಹಾಗೂ ಮೇಘನಾ ರಾಜ್ ಅವರ ಪ್ರೇಮಕಥೆ ಯಾರಿಗೆ ತಾನೇ ತಿಳಿದಿಲ್ಲ. ಅ.17ರಂದು ಚಿರಂಜೀವಿ ಸರ್ಜಾ ಅವರ ಜನ್ಮದಿನದ ವಿಶೇಷ ಸಂದರ್ಭದಲ್ಲಿ ಮೇಘನಾ ರಾಜ್ ಅವರು ತಮ್ಮ ನೆಚ್ಚಿನ ಪತಿಯನ್ನು ಭಾವುಕವಾಗಿ ಸ್ಮರಿಸಿಕೊಂಡಿದ್ದಾರೆ. ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಂಚಿಕೊಳ್ಳುವ ಮೂಲಕ ತಮ್ಮ ಪ್ರೀತಿಯ ಚಿರುವನ್ನು ಮತ್ತೊಮ್ಮೆ ನೆನಪಿಸಿಕೊಂಡಿದ್ದಾರೆ. ಚಿರಂಜೀವಿ ಸರ್ಜಾ ಮತ್ತು ಮೇಘನಾ ರಾಜ್ ಅವರದ್ದು ಸ್ನೇಹದಿಂದ ಆರಂಭವಾದ ಸುಂದರ ಪ್ರೇಮಕಥೆ. ಹಲವು ವರ್ಷಗಳ ಕಾಲ ಪರಸ್ಪರ ಆಳವಾಗಿ ಪ್ರೀತಿಸಿದ ಈ ಜೋಡಿ, ಹಿರಿಯರ ಒಪ್ಪಿಗೆಯೊಂದಿಗೆ ಅದ್ದೂರಿಯಾಗಿ ಮದುವೆಯಾದರು. ದಾಂಪತ್ಯ ಜೀವನಕ್ಕೆ ಕಾಲಿಟ್ಟ ಇವರ ಜೋಡಿ ಎಲ್ಲರಿಗೂ ಮಾದರಿಯಾಗಿತ್ತು. ಸದಾ ನಗುತ್ತಾ ಇರುತ್ತಿದ್ದ ಈ ಜೋಡಿಯ ಜೀವನದಲ್ಲಿ ಖುಷಿ ತುಂಬಿತ್ತು. ಆದರೆ ವಿಧಿಯಾಟವೇ ಬೇರೆ ಇತ್ತು. ಅನಿರೀಕ್ಷಿತವಾಗಿ ಬಂದೆರಗಿದ ದುರಂತದಿಂದ ಚಿರಂಜೀವಿ ಸರ್ಜಾ ಅವರು ಅಕಾಲಿಕ ಮರಣ ಹೊಂದಿದರು. ಚಿರು ಸಾವು ಇಡೀ ಕನ್ನಡ ಚಿತ್ರರಂಗಕ್ಕೆ ಹಾಗೂ ಅಭಿಮಾನಿಗಳಿಗೆ ದೊಡ್ಡ ಆಘಾತ ತಂದಿತ್ತು. ಅದರಲ್ಲೂ ಮೇಘನಾ ರಾಜ್ ಅವರಿಗೆ ಇದು ಸಾಕಷ್ಟು ನೋವಾಗಿತ್ತು. ಗರ್ಭಿಣಿಯಾಗಿದ್ದ ಮೇಘನಾ ಅವರ ಬದುಕು ಕತ್ತಲಾದಂತೆ ಭಾಸವಾಗಿತ್ತು. ಚಿರು ಅಗಲಿಕೆಯ ನೋವಿನಲ್ಲೇ ಮೇಘನಾ ಅವರು ಗಂಡು ಮಗುವಿಗೆ ಜನ್ಮ ನೀಡಿದರು. ಆ ಮಗುವಿನಲ್ಲಿಯೇ ಚಿರು ಅವರನ್ನು ಕಾಣುತ್ತಾ ಮೇಘನಾ ಧೈರ್ಯದಿಂದ ಬದುಕನ್ನು ಎದುರಿಸುತ್ತಾ ಬಂದಿದ್ದಾರೆ. ಚಿರು ಮಗ ರಾಯನ್ ರಾಜ್ ಸರ್ಜಾ ಈಗ ಎಲ್ಲರ ಅಚ್ಚುಮೆಚ್ಚಿನ ಹುಡುಗನಾಗಿದ್ದಾನೆ. ಮಗನ ಮುಖದಲ್ಲಿ ಚಿರು ಅವರ ನಗುವನ್ನು ಕಾಣುತ್ತಾ ಮೇಘನಾ ಒಂಟಿ ಜೀವನವನ್ನು ನಡೆಸುತ್ತಿದ್ದಾರೆ. ಇಂದಿನ ಹುಟ್ಟುಹಬ್ಬದ ವಿಶೇಷ ದಿನದಂದು ಪತಿಯ ನೆನಪುಗಳನ್ನು ಹಂಚಿಕೊಂಡಿರುವ ಮೇಘನಾ ರಾಜ್ ಅವರ ಪೋಸ್ಟ್ ಅಭಿಮಾನಿಗಳ ಕಣ್ಣಂಚಿನಲ್ಲಿ ನೀರು ತರಿಸಿದೆ. ಚಿರು ನಮ್ಮೊಂದಿಗೆ ಭೌತಿಕವಾಗಿ ಇಲ್ಲದಿದ್ದರೂ ಪ್ರತಿಯೊಬ್ಬರ ಹೃದಯದಲ್ಲಿ ಸದಾ ಜೀವಂತವಾಗಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ.

# ಭುವನೇಶ್ವರ್ ಔಟ್, ಟೀಂ ಇಂಡಿಯಾಕ್ಕೆ ಕೃನಾಲ್ ಪಾಂಡ್ಯ ನಾಯಕ..!



ಹಾಂಗ್ ಕಾಂಗ್ ಸಿಕ್ಸಸ್ ಟೂರ್ನಮೆಂಟ್ ಇದೇ ಅಕ್ಟೋಬರ್ 30 ರಿಂದ ನವೆಂಬರ್ 1 ರವರೆಗೆ ನಡೆಯಲಿದೆ. ಈ ಟೂರ್ನಿಗಾಗಿ ಭುವನೇಶ್ವರ್ ಕುಮಾರ್ ನಾಯಕತ್ವದ ಟೀಂ ಇಂಡಿಯಾ ಬಿಸಿಸಿಐ ಪ್ರಕಟಿಸಿತ್ತು. ಈ ಟೂರ್ನಿ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಇರುವಾಗ ಟೀಂ ಇಂಡಿಯಾದ ನಾಯಕನ ಬದಲಾವಣೆಯಾಗಿದೆ.

ಅನುಭವಿ ಬೌಲರ್ ಭುವನೇಶ್ವರ್ ಕುಮಾರ್ ನ್ಯೂಜಿಲೆಂಡ್ ಪ್ರವಾಸಕ್ಕಾಗಿ ರಾಷ್ಟ್ರೀಯ ತಂಡಕ್ಕೆ ಸೇರ್ಪಡೆಯಾದ ಕಾರಣದಿಂದಾಗಿ ಅವರನ್ನು ಹಾಂಗ್ ಕಾಂಗ್ ಸಿಕ್ಸಸ್ ಟೂರ್ನಮೆಂಟ್‌ನಿಂದ ಕೈಬಿಡಲಾಗಿದೆ. ಹೀಗಾಗಿ ಭುವನೇಶ್ವರ್ ಕುಮಾರ್ ಬದಲಿಗೆ ಸ್ಟಾರ್ ಆಲ್‌ರೌಂಡರ್ ಕೃನಾಲ್ ಪಾಂಡ್ಯ ಅವರನ್ನು ಟೀಂ ಇಂಡಿಯಾದ ಹೊಸ ನಾಯಕನನ್ನಾಗಿ ನೇಮಿಸಲಾಗಿದೆ.

ಭಾರತದ ನ್ಯೂಜಿಲೆಂಡ್ ಪ್ರವಾಸವು ಅಕ್ಟೋಬರ್ 22 ರಂದು ಆರಂಭವಾಗಲಿದೆ. ಇತ್ತ ಅಕ್ಟೋಬರ್ 30 ರಿಂದ ಹಾಂಗ್ ಕಾಂಗ್ ಸಿಕ್ಸಸ್ ಟೂರ್ನಿ ಕೂಡ ಶುರುವಾಗಲಿದೆ. ಇದರಿಂದಾಗಿ ಭುವಿ ಈ ಪಂದ್ಯಾವಳಿಯಿಂದ ಹಿಂದೆ ಸರಿಯಬೇಕಾಯಿತು. ಭುವನೇಶ್ವರ್ ಕುಮಾರ್ ಬದಲಿಗೆ ಗುಜರಾತ್ ಟೈಟಾನ್ಸ್ ತಂಡದ ವೇಗಿ ಕುಲ್ವಂತ್ ಖೇಜ್ರೋಲಿಯಾ ಅವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ. ನಾಯಕತ್ವ ವಹಿಸಿಕೊಂಡ ನಂತರ ಕೃನಾಲ್ ಪಾಂಡ್ಯ ಸಾಮಾಜಿಕ ಜಾಲತಾಣಗಳಲ್ಲಿ ವೀಡಿಯೊವನ್ನು ಹಂಚಿಕೊಂಡಿದ್ದು, 'ಹಾಂಗ್ ಕಾಂಗ್ ಸಿಕ್ಸ್' ನಲ್ಲಿ ಟೀಮ್ ಇಂಡಿಯಾವನ್ನು ಹುರಿದುಂಬಿಸುವಂತೆ ಅಭಿಮಾನಿಗಳನ್ನು ಕೇಳಿಕೊಂಡಿದ್ದಾರೆ. ಇನ್ನು ಕೃನಾಲ್ ಪಾಂಡ್ಯಗೆ ನಾಯಕತ್ವದ ಅನುಭವವೂ ಇದ್ದು, ಐಪಿಎಲ್‌ನಲ್ಲಿ 6 ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ ಅನುಭವವನ್ನು ಹೊಂದಿದ್ದಾರೆ. ಅವರ ನಾಯಕತ್ವದಲ್ಲಿ ತಂಡವು ಮೂರು ಪಂದ್ಯಗಳನ್ನು ಗೆದ್ದಿದ್ದರೆ, ಎರಡು ಪಂದ್ಯಗಳಲ್ಲಿ ಸೋತಿದೆ.

2025ರ ಹಾಂಗ್ ಕಾಂಗ್ ಸಿಕ್ಸಸ್ ಸೀಸನ್ ಭಾರತಕ್ಕೆ ನಿರಾಶಾದಾಯಕವಾಗಿತ್ತು. ರಾಬಿನ್ ಉತ್ತಪ್ಪ ಮತ್ತು ದಿನೇಶ್ ಕಾರ್ತಿಕ್ ಅವರಂತಹ ಆಟಗಾರರನ್ನು ಒಳಗೊಂಡ ಭಾರತೀಯ ತಂಡವು ಗುಂಪು ಹಂತದಲ್ಲಿ ದುರ್ಬಲ ಕುವೈತ್ ವಿರುದ್ಧ ಸೋತಿತು. ತಂಡವು ಬೌಲ್ ಫೈನಲ್‌ನಲ್ಲಿ ನೇಪಾಳ, ಯುಎಇ ಮತ್ತು ಶ್ರೀಲಂಕಾ ವಿರುದ್ಧ ಸೋತು ಕೊನೆಯ ಸ್ಥಾನ ಗಳಿಸಿತು. ಇತ್ತ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ಪ್ರಶಸ್ತಿ ಗೆಲ್ಲುವಲ್ಲಿ ಯಶಸ್ವಿಯಾಗಿತ್ತು.

# ಅಹಂಕಾರಿ ಮತ್ತು ಗರ್ವಿಷ್ಠ'; ಕೊಹ್ಲಿಯ ಬಗ್ಗೆ ಡಿವಿಲಿಯರ್ಸ್ ಅಚ್ಚರಿಯ ಹೇಳಿಕೆ..!

ಕ್ರಿಕೆಟ್ ಲೋಕದ ಇಬ್ಬರು ದಿಗ್ಗಜ ಕ್ರಿಕೆಟಿಗರಾದ ವಿರಾಟ್ ಕೊಹ್ಲಿ ಹಾಗೂ ಎಬಿ ಡಿವಿಲಿಯರ್ಸ್ ಎಂತಹ ಸ್ನೇಹಿತರು ಎಂಬುದು ಎಲ್ಲರಿಗೂ ತಿಳಿದಿರುವಂತದ್ದೆ. ಐಪಿಎಲ್‌ನಲ್ಲಿ ವರ್ಷಗಳ ಕಾಲ ಜೊತೆಯಲ್ಲಿ ಆಡಿದ್ದ ಇವರಿಬ್ಬರು ಕ್ರಿಕೆಟ್ ಅಂಗಳದಲ್ಲಿ ಮಾತ್ರವಲ್ಲದೆ ಕ್ರಿಕೆಟ್ ಹೊರತಾಗಿಯೂ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಸಂದರ್ಶನಗಳಲ್ಲಿ ಹಾಗೂ ಪಾಡ್‌ಕ್ಯಾಸ್ಟ್‌ಗಳಲ್ಲಿ ಒಬ್ಬರಿಗೊಬ್ಬರು ಮೆಚ್ಚುಗೆಯ ಮಾತುಗಳನ್ನೇ ಆಡುತ್ತಿರುತ್ತಾರೆ. ಹೀಗಿರುವಾಗ ಡಿವಿಲಿಯರ್ಸ್, ಕೊಹ್ಲಿಯ ಬಗ್ಗೆ ನೀಡಿರುವ ಅದೊಂದು ಹೇಳಿಕೆ ಎಲ್ಲರಿಗೂ ಅಚ್ಚರಿ ಮೂಡಿಸಿದೆ. ಪ್ರಖರ್ ಗುಪ್ತಾ ಅವರೊಂದಿಗಿನ ಪಾಡ್‌ಕ್ಯಾಸ್ಟ್‌ನಲ್ಲಿ ಮಾತನಾಡಿರುವ ಡಿವಿಲಿಯರ್ಸ್, ವಿರಾಟ್ ಕೊಹ್ಲಿ ಆರಂಭದ ದಿನಗಳಲ್ಲಿ ಅಹಂಕಾರಿ ಮತ್ತು ಗರ್ವಿಷ್ಠರಂತೆ ಕಾಣುತ್ತಿದ್ದರು ಎಂಬ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಪ್ರಖರ್ ಗುಪ್ತಾ ಅವರೊಂದಿಗಿನ ಪಾಡ್‌ಕ್ಯಾಸ್ಟ್‌ನಲ್ಲಿ ಭಾಗವಹಿಸಿದ್ದ ಡಿವಿಲಿಯರ್ಸ್ ಬಳಿ, 'ವಿರಾಟ್ ಕೊಹ್ಲಿ ಅವರನ್ನು ಮೊದಲ ಬಾರಿಗೆ ಭೇಟಿಯಾದಾಗ ಅವರ ಬಗ್ಗೆ ತಮಗಿದ್ದ ಅಭಿಪ್ರಾಯವೇನು.

ಕೊಹ್ಲಿ ನಿಜವಾಗಿಯೂ 'ಅಹಂಕಾರಿ ಮತ್ತು ಅತಿಯಾದ ಆತ್ಮವಿಶ್ವಾಸವುಳ್ಳವರು' ಎಂದು ನಿಮಗೆ ಅನ್ನಿಸಿತ್ತೇ ಎಂದು ಕೇಳಲಾಯಿತು. ಇದಕ್ಕೆ ಉತ್ತರಿಸಿದ ಡಿವಿಲಿಯರ್ಸ್, 'ಹೌದು, ಮತ್ತು ಅವರು ಕೂಡ ಇದಕ್ಕೆ ಸಂಪೂರ್ಣವಾಗಿ ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ' ಎಂದು ಹೇಳಿದರು.



# ಮಿನಿ ಹರಾಜಿಗೂ ಮುನ್ನವೇ ಮುಂಬೈ ತೊರೆದ ಜಯವರ್ಧನೆ ಮತ್ತೆ ಕ್ಯಾಪ್ಟನ್ ಪಟ್ಟಕ್ಕೆ ಹಿಟ್‌ಮ್ಯಾನ್

2027ರ ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ನಡೆಯಲಿರುವ ಮಿನಿ ಹರಾಜಿಗೂ ಮುನ್ನವೇ ಫ್ರಾಂಚೈಸಿಗಳಲ್ಲಿ ಮಹತ್ವದ ಬೆಳವಣಿಗೆಗಳು ನಡೆದಿವೆ.

ಮುಂಬೈ ಇಂಡಿಯನ್ಸ್ ಫ್ರಾಂಚೈಸಿಯಲ್ಲಿ ಭಾರೀ ಏರಿಳಿತ ಕಂಡುಬಂದಿದೆ. ಮಹೇಲ ಜಯವರ್ಧನೆ ಮುಂಬೈ ತಂಡದ ಮುಖ್ಯ ಕೋಚ್ ಹುದ್ದೆಗೆ ಗುಡ್‌ಬೈ ಹೇಳಿದ್ದಾರೆ. ಮುಂಬೈ ಇಂಡಿಯನ್ಸ್ ತಂಡಕ್ಕೆ ಜಯವರ್ಧನೆ ರಾಜೀನಾಮೆ ನೀಡಿದ್ದು, ಈ ಬಗ್ಗೆ ಮುಂಬೈ ಇಂಡಿಯನ್ಸ್ ತನ್ನ ಅಧಿಕೃತ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದೆ.

ಈ ಬೆಳವಣಿಗೆ ಮಧ್ಯೆ, ಮುಂಬೈ ಇಂಡಿಯನ್ಸ್ ತಂಡ ಮತ್ತೆ ರೋಹಿತ್ ಶರ್ಮಾ ಅವರಿಗೆ ನಾಯಕತ್ವದ ಹೊಣೆ ನೀಡಲು ಮುಂದಾಗಿದೆ ಅನ್ನೋ ಚರ್ಚೆಗಳು ಜೋರಾಗಿವೆ. ಇದಕ್ಕೆ ಕಾರಣವೂ ಇದೆ.ಹಾರ್ದಿಕ್ ಪಾಂಡ್ಯ ಅವರ ನಾಯಕತ್ವದಲ್ಲಿ ಕಳೆದ ಮೂರು ಆವೃತ್ತಿಗಳನ್ನು ಎದುರಿಸಿದ ಮುಂಬೈ ಇಂಡಿಯನ್ಸ್ ತಂಡ ಕೇವಲ ಒಂದೇ ಒಂದು ಬಾರಿ ಪ್ಲೇ ಆಫ್ ಪ್ರವೇಶಿಸಿತ್ತು. ಅದ್ರಲ್ಲೂ 2026ರ ಐಪಿಎಲ್‌ನಲ್ಲಿ 14 ಪಂದ್ಯಗಳಲ್ಲಿ ಕೇವಲ 4 ಪಂದ್ಯ ಗೆದ್ದು 9ನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿತು. ಮೂರು ಆವೃತ್ತಿಗಳಲ್ಲಿ ಒಮ್ಮೆಯೂ ಟ್ರೋಫಿ ತಂದುಕೊಡುವಲ್ಲಿ ವಿಫಲವಾದ ಹಿನ್ನೆಲೆ ಪಾಂಡ್ಯ ಅವರ ನಾಯಕತ್ವಕ್ಕೆ ಕೊಕ್ ನೀಡಲು ಫ್ರಾಂಚೈಸಿ ನಿರ್ಧರಿಸಿದೆ ಎನ್ನಲಾಗಿದೆ. ಇನ್ನೂ, ಹಾರ್ದಿಕ್ ಪಾಂಡ್ಯ ಅವರಿಂದ ತೆರವಾಗುವ ನಾಯಕನ ಸ್ಥಾನಕ್ಕೆ ಮೊದಲು ಬುಮ್ರಾ ಅವರನ್ನ ಕೂರಿಸುವ ಚಿಂತನೆ ಮಾಡಿತ್ತು ಫ್ರಾಂಚೈಸಿ. ಆದ್ರೆ ಬುಮ್ರಾ ಅವರು ಆಗಾಗ್ಗೆ ಗಾಯದ ಸಮಸ್ಯೆಗೆ ಒಳಗಾಗುತ್ತಿರುವ ಹಿನ್ನೆಲೆ ಮತ್ತೊಮ್ಮೆ ರೋಹಿತ್ ಶರ್ಮಾ ಅವರಿಗೇ ನಾಯಕನ ಪಟ್ಟ ನೀಡಲು ಆಡಳಿತ ಮಂಡಳಿ ಚಿಂತಿಸಿದೆ ಎಂದು ವರದಿಗಳಿಂದ ತಿಳಿದುಬಂದಿದೆ.



ಇನ್ನೂ ಹೊಸ ಉತ್ಸಾಹದೊಂದಿಗೆ ಕಣಕ್ಕಿಳಿಯಲು ಸಜ್ಜಾಗುತ್ತಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ ಕೋಚಿಂಗ್ ತಂಡದಲ್ಲಿ ಮಹತ್ವದ ಬದಲಾವಣೆ ಮಾಡಿಕೊಂಡಿದೆ. ಮುಖ್ಯಕೋಚ್ ಸೌರವ್ ಗಂಗೂಲಿ ಅವರೊಂದಿಗೆ, ಸಹಾಯಕ ಕೋಚ್ ಆಗಿ ಯುವರಾಜ್ ಸಿಂಗ್ ಹಾಗೂ ವೇಗದ ಬೌಲಿಂಗ್ ಕೋಚ್ ಆಗಿ ಚಾಮಿಂಡ ವಾಸ್ ಅವರನ್ನ ನೇಮಕ ಮಾಡಿಕೊಂಡಿದೆ.

# ಅನ್ವಯ್ ಅಬ್ಬರ: 151 ರನ್ ಚಚ್ಚಿದ ರಾಹುಲ್ ದ್ರಾವಿಡ್ ಪುತ್ರ!

ಭಾರತೀಯ ಕ್ರಿಕೆಟ್ ದಿಗ್ಗಜ ರಾಹುಲ್ ದ್ರಾವಿಡ್ ಅವರ ಕಿರಿಯ ಪುತ್ರ ಅನ್ವಯ್ ದ್ರಾವಿಡ್ ದೇಶಿ ಕ್ರಿಕೆಟ್‌ನಲ್ಲಿ ಹೊಸ ಇತಿಹಾಸ ಸೃಷ್ಟಿಸುತ್ತಿದ್ದಾರೆ. ಪ್ರಸ್ತುತ ನಡೆಯುತ್ತಿರುವ ವಿನೂ ಮಂಕಡ್ ಟ್ರೋಫಿ ಅಂಡರ್-19 ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡದ ನಾಯಕರಾಗಿರುವ ಅನ್ವಯ್ ಭರ್ಜರಿ ಪ್ರದರ್ಶನ ಮುಂದುವರೆಸಿದ್ದಾರೆ. ಕರ್ನಾಟಕ ಮತ್ತು ಗುಜರಾತ್ ನಡುವಣ ಪಂದ್ಯದಲ್ಲಿ ಕಣಕ್ಕಿಳಿದ ಅನ್ವಯ್ ಕೇವಲ 100 ಎಸೆತಗಳಲ್ಲಿ 151 ರನ್ ಸಿಡಿಸಿ ಅಬ್ಬರಿಸಿದ್ದಾರೆ. ಇದು ಈ ಟೂರ್ನಿಯಲ್ಲಿ ಅವರು ಗಳಿಸಿದ ಎರಡನೇ ಶತಕ ಎಂಬುದು ವಿಶೇಷ. ತಮ್ಮ ಅತ್ಯುತ್ತಮ ರಕ್ಷಣಾತ್ಮಕ ಬ್ಯಾಟಿಂಗ್ ಶೈಲಿಯಿಂದ 'ದಿ ವಾಲ್' ಎಂದೇ ಖ್ಯಾತರಾಗಿದ್ದ ರಾಹುಲ್ ದ್ರಾವಿಡ್ ಅವರ ಆಟಕ್ಕೂ, ಅನ್ವಯ್ ಆಟಕ್ಕೂ ಸಾಟಿಯೇ ಇಲ್ಲ. ಗುಜರಾತ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಅನ್ವಯ್, ತಮ್ಮ 151 ರನ್‌ಗಳ ಇನ್ನಿಂಗ್ಸ್‌ನಲ್ಲಿ 20 ಬೌಂಡರಿ ಹಾಗೂ 3 ಭರ್ಜರಿ ಸಿಕ್ಸರ್ ಚಚ್ಚಿದರು.



17 ವರ್ಷದ ಈ ಯುವ ಬ್ಯಾಟರ್ ಕೇವಲ 151 ನಿಮಿಷಗಳ ಕಾಲ ಕ್ರೀಸ್‌ನಲ್ಲಿದ್ದು ಈ ಅದ್ಭುತ ರನ್ ಮಳೆ ಹರಿಸಿದರು.ಆಂಧ್ರಪ್ರದೇಶದ ವಿಜಯನಗರಂನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಗುಜರಾತ್ ತಂಡ, 50 ಓವರ್‌ಗಳಲ್ಲಿ 357/4 ರನ್‌ಗಳ ಬೃಹತ್ ಮೊತ್ತ ಪೇರಿಸಿತ್ತು. ಆದರೆ ಮಳೆಯ ಕಾರಣ ಪಂದ್ಯಕ್ಕೆ ಅಡ್ಡಿಯಾದ್ದರಿಂದ ವಿಜೆಡಿ ನಿಯಮದ ಪ್ರಕಾರ ಕರ್ನಾಟಕಕ್ಕೆ 46 ಓವರ್‌ಗಳಲ್ಲಿ 352 ರನ್‌ಗಳ ಪರಿಷ್ಕೃತ ಗುರಿ ನೀಡಲಾಯಿತು. ಈ ಗುರಿ ಬೆನ್ನತ್ತಿದ ಕರ್ನಾಟಕ ಪರ ಮೂರನೇ ವಿಕೆಟ್‌ಗೆ ಜೊತೆಯಾದ ನಾಯಕ ಅನ್ವಯ್ ದ್ರಾವಿಡ್ ಮತ್ತು ಧ್ರುವ್ ಕೃಷ್ಣನ್ (100 ಎಸೆತಗಳಲ್ಲಿ 131 ರನ್) ಕೇವಲ 26 ಓವರ್‌ಗಳಲ್ಲಿ 203 ರನ್‌ಗಳನ್ನು ಪೇರಿಸಿದರು. ಈ ಜೊತೆಯಾಟದೊಂದಿಗೆ ಜಯದ ಹಾದಿಯನ್ನು ಸುಲಭಗೊಳಿಸಿದರು.

ಅಲ್ಲದೆ ಅನ್ವಯ್ ದ್ರಾವಿಡ್ 151 ರನ್‌ಗಳ ಭರ್ಜರಿ ಇನಿಂಗ್ಸ್ ಆಡುವ ಮೂಲಕ ಕರ್ನಾಟಕ ತಂಡವನ್ನು 45.3 ಓವರ್‌ಗಳಲ್ಲಿ ಗುರಿ ತಲುಪಿಸಿ 5 ವಿಕೆಟ್‌ಗಳ ಭರ್ಜರಿ ಜಯ ತಂದುಕೊಟ್ಟರು. ಈ ಗೆಲುವಿನೊಂದಿಗೆ ಕರ್ನಾಟಕ ತಂಡ ಟೂರ್ನಿಯ ನಾಕೌಟ್ ಹಂತಕ್ಕೆ ಅಧಿಕೃತವಾಗಿ ಲಗ್ಗೆ ಇಟ್ಟಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಅನ್ವಯ್ ದ್ರಾವಿಡ್ ಅವರ ಈ ಸ್ಫೋಟಕ ಬ್ಯಾಟಿಂಗ್ ಕೇವಲ ಕರ್ನಾಟಕ ತಂಡಕ್ಕೆ ನಾಕೌಟ್ ಹಂತದ ಟಿಕೆಟ್ ತಂದುಕೊಟ್ಟಿಲ್ಲ, ಬದಲಿಗೆ ಭಾರತೀಯ ಕ್ರಿಕೆಟ್‌ನ ಭವಿಷ್ಯದ ಭರವಸೆಯ ಕಿರಣವನ್ನು ಮೂಡಿಸಿದೆ.

ತಂದೆ ರಾಹುಲ್ ದ್ರಾವಿಡ್ ಅವರಂತೆಯೇ ತಂಡವನ್ನು ಮುನ್ನಡೆಸುವ ಜವಾಬ್ದಾರಿ ಮತ್ತು ಸಂಯಮ ಹೊಂದಿರುವ ಅನ್ವಯ್, ಬ್ಯಾಟಿಂಗ್‌ನಲ್ಲಿ ಮಾತ್ರ ಆಧುನಿಕ ಕ್ರಿಕೆಟ್‌ಗೆ ತಕ್ಕಂತೆ ತಮ್ಮ ಶೈಲಿಯನ್ನು ಬದಲಾಯಿಸಿಕೊಂಡಿದ್ದಾರೆ. ಇದು ಈ ಟೂರ್ನಿಯಲ್ಲಿ ಅವರು ಗಳಿಸಿದ ಎರಡನೇ ಶತಕ ಎಂಬುದು ವಿಶೇಷ. ವಿನೂ ಮಂಕಡ್ ಟ್ರೋಫಿಯಲ್ಲಿ ಸರಣಿ ಶತಕಗಳೊಂದಿಗೆ ಅಬ್ಬರಿಸುತ್ತಿರುವ ಈ ಯುವ ನಾಯಕ, ಮುಂದಿನ ದಿನಗಳಲ್ಲಿ ಟೀಮ್ ಇಂಡಿಯಾದ ಬಾಗಿಲು ಬಡಿಯುವುದರಲ್ಲಿ ಯಾವುದೇ ಸಂಶಯವಿಲ್ಲ, 'ದಿ ವಾಲ್' ಮನೆಯಿಂದ ಬಂದಿರುವ ಈ ಹೊಸ ರನ್ ಮಷಿನ್ ಮುಂದಿನ ನಾಕೌಟ್ ಪಂದ್ಯಗಳಲ್ಲೂ ಇದೇ ಫಾರ್ಮ್ ಮುಂದುವರಿಸಲಿ ಎಂಬುದೇ ಅಭಿಮಾನಿಗಳ ಆಶಯ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966